ಒದಗಿಸಿಕೊಡುವ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡನ್ನು ವಿನಂತಿಸಿಕೊಳ್ಳಬಹುದು. ಇದರ ವಿಚಾರವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಈ 14 ಕೋಟಿ ರೂಪಾಯಿ ಪ್ರಾಜೆಕ್ಟನ್ನು ಆದಷ್ಟು ಬೇಗ ಮಾಡಬೇಕಾದರೆ ಮಂಗಳೂರು ಮಹಾನಗರಪಾಲಿಕೆಯವರು ಕೊಡಬೇಕಾದ ಹಣವನ್ನು ಆದಷ್ಟು ಬೇಗ ಕೊಟ್ಟರೆ ಉಳಿದ ಹಣವನ್ನು ಎಲ್.ಐ.ಸಿ., ಸಂಸ್ಥೆಯಿಂದ ತೆಗೆದುಕೊಂಡು ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಈಗಾಗಲೇ ಕೆಲವು ಕಡೆ ನೀರಿನ ಪೈಪುಗಳು ಇಲ್ಲವೋ ಅಂಥಾ ಕಡೆ ಸ್ವಲ್ಪ ಮಟ್ಟಿಗೆ ಕೊಳವೆ ಬಾವಿಗಳನ್ನು ತೋಡಲು ಈಗಾಗಲೇ ಡೆಪ್ಯುಟಿ ಕಮಿಷನರ್‌ರವರಿಗೆ ಹೇಳಿ ಹಣವನ್ನು ರಿಲೀಸ್ ಮಾಡಿದ್ದೇವೆ. ಅವರು ಕೊಳವೆ ಬಾವಿಗಳನ್ನು ತೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಈಗ ಮಾನ್ಯ ಕಂದಾಯ ಮಂತ್ರಿಗಳು ಸ್ಟೇಟ್ ಮೆಂಟ್ ಮಾಡಬೇಕು.

ಮಂತ್ರಿಗಳ ಹೇಳಿಕೆ.

ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಮೇಲೆ ಕಂದಾಯ ಮಂತ್ರಿಗಳ ಹೇಳಿಕೆ ಮತ್ತು ಚರ್ಚೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಇಲಾಖೆ ಸಚಿವರು): ಸನ್ಮಾನ್ಯ ಅಧ್ಯಕ್ಷರೇ,

1990ನೇ ಸಾಲಿನಲ್ಲಿ ರಾಜ್ಯದ ಬಹು ಭಾಗಗಳಲ್ಲಿ ಉಂಟಾದ ಮಳೆಯ ಅಭಾವದಿಂದಾಗಿ, ಅನೇಕ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿದೆ. ಇನ್ನೂ ಹೆಚ್ಚಿನ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿ ಉಂಟಾಗುವ ಲಕ್ಷಣಗಳು ಕಂಡು ಬರುತ್ತಿವೆ. ಅಭಾವ ಪರಿಸ್ಥಿತಿಯಿಂದಾಗಿ ಸಂಕಷ್ಟಕ್ಕೆ ಒಳಗಾದ ಜನರಿಗೆ ಪರಿಹಾರ ಕಲ್ಪಿಸುವ ದೃಷ್ಟಿಯಿಂದ ನಮ್ಮ ಸರ್ಕಾರವು ಅನೇಕ ಪರಿಹಾರೋಪಾಯಗಳನ್ನು ಕೈಗೊಂಡಿದೆ.

ರಾಜ್ಯದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಬಿಟ್ಟು ಉಳಿದ ಹೆಚ್ಚಿನ ಭಾಗದಲ್ಲಿ ಹಿಂಗಾರು ಮಳೆ ಎಲ್ಲ ಕಡೆ ಸರಿಯಾಗಿ ಬಿದ್ದಿಲ್ಲ. ಇದರಿಂದಾಗಿ ಖಾರಿಫ್ ಬೆಳೆ ತೆಗೆಯುವುದಕ್ಕೆ ಆಗಿಲ್ಲ. 1990ರ ಸಪ್ಟೆಂಬರ್ ತಿಂಗಳ ಅಂತ್ಯದವರೆಗೆ ನಮ್ಮ ರಾಜ್ಯದಲ್ಲಿ ಸುಮಾರು 100 ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿತ್ತು. 1990ರ ಸೆಪ್ಟೆಂಬರ್ ನಂತರ ಈ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಿದೆ. ಈ ಅಭಾವ ಪರಿಸ್ಥಿತಿಯು ಮುಂಗಾರು ಮಳೆಯಿಂದಾಗಿ ಸುಧಾರಿಸಬಹುದೆಂಬ ನಂಬಿಕೆಯೂ ಹುಸಿಯಾಗಿದೆ. ಅಲ್ಲದೆ ಕೆರೆಗಳಲ್ಲಿರುವ ನೀರು ಒಣಗಿ ಅಭಾವ ಪೀಡಿತ ಪ್ರದೇಶಗಳಲ್ಲಿ ಅಂತರ್ ಜಲದ ಮಟ್ಟವು ಕಡಿಮೆಯಾಗಿ ಜನ ಮತ್ತು ಜಾನುವಾರುಗಳೆರಡಕ್ಕೂ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ಇಂಥ ಪರಿಸ್ಥಿತಿಯಲ್ಲಿ, ರಾಜ್ಯ ಸರ್ಕಾರವು ಗುರ್ತಿಸಿರುವ ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಎಲ್ಲ ಪರಿಹಾರ ಕ್ರಮ ಕೈಗೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಪರಿಹಾರ ಕಾಮಗಾರಿಗಳು ಈ ಕೆಳಕಂಡಂತಿವೆ.

1. ಬೆಳೆ ಬೆಳೆಯಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿಕೊಡುವುದು.
2. ಅಭಾವ ಪೀಡಿತ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಕುಡಿಯುವ ನೀರಿನ ಸರಬರಾಜು.

3. ಮೇವಿನ ಸರಬರಾಜು

ಜಿಲ್ಲಾಧಿಕಾರಿಗಳು, ಬರಪರಿಹಾರ ಘಟಕ, ಕೃಷಿ ಇಲಾಖೆ, ಅಂಕಿ ಅಂಶಗಳ ಇಲಾಖೆ ಮುಂತಾದ ವಿವಿಧ ಮೂಲಗಳಿಂದ ವರದಿಗಳನ್ನು ಪಡೆಯುವ ಮೂಲಕ ಋತುಮಾನ ಪರಿಸ್ಥಿತಿಯ ಬಗ್ಗೆ ಸರ್ಕಾರವು ಪುನರಾವಲೋಕನ ನಡೆಸುತ್ತಿದೆ. ಅಭಾವ ಪರಿಸ್ಥಿತಿಯ ವಾಸ್ತವ ಚಿತ್ರವನ್ನು ಪಡೆಯಲು ಕ್ಷೇತ್ರ ಸಂದರ್ಶನಗಳನ್ನೂ ಸಹ ಮಾಡಲಾಗಿದೆ. 1990ರ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಋತುಮಾನ ಪರಿಸ್ಥಿತಿಯ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. 1991ರ ಫೆಬ್ರವರಿ 16ರಂದು ನಡೆದ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಆದಂತಹ ಪ್ರಗತಿಯ ಬಗ್ಗೆ ಪುನರಾವಲೋಕಿಸಿ ಹೊಸ ಕಾರ್ಯಾಚರಣೆಗಳನ್ನು ಮಾಡಲು ತೀರ್ಮಾನಿಸಲಾಯಿತು.

ಕೃಷಿ ಇಲಾಖೆಯು ವರದಿ ಮಾಡಿರುವಂತೆ ಖಾರೀಫ್ ಋತುವಿನ ಕೊನೆಯವರೆಗೆ (30.9.90) ಬಿತ್ತನೆ ಮಾಡಿದ ಒಟ್ಟು ವಿಸ್ತೀರ್ಣ 70.153 ಲಕ್ಷ ಹೆಕ್ಟೇರುಗಳು. ಬಿತ್ತನೆ ಮಾಡಿದ ಒಟ್ಟು ಪ್ರದೇಶದ ಪೈಕಿ 25.66 ಲಕ್ಷ ಹೆಕ್ಟೇರ್ ಪ್ರದೇಶವು ಅನಾವೃಷ್ಟಿಗೆ ಒಳಗಾದರೆ 1-39 ಲಕ್ಷ ಹೆಕ್ಟೇರು ಪ್ರದೇಶವು ಅತೀವೃಷ್ಟಿಗೆ ಈಡಾಗಿದೆ. ರಬೀ ಋತುವಿನಲ್ಲಿ 31.12.90ರ ವರೆಗೆ 29.78 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಹಾಲಿ 15 ಜಿಲ್ಲೆಗಳ 132 ತಾಲ್ಲೂಕುಗಳಲ್ಲಿರುವ 4,758 ಹಳ್ಳಿಗಳು ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಅಲ್ಲದೆ ಬಹಳಷ್ಟು ಪಟ್ಟಣಗಳು ಕುಡಿಯುವ ನೀರಿನ ಅಭಾವವನ್ನು ಎದುರಿಸುತ್ತಿವೆ.

ಭಾರತ ಸರಕಾರವು ಆಕಸ್ಮಿಕ ಬೆಂಕಿ ಅಪಘಾತ, ಬರಗಾಲ: ಪ್ರವಾಹ ಪರಿಹಾರ ಮುಂತಾದ ನೈಸರ್ಗಿಕ ವಿಕೋಪಗಳಿಗಾಗಿ ವೆಚ್ಚ ಮಾಡಿದ ಬಗ್ಗೆ ಹಣಕಾಸು ನೆರವು ನೀಡಲು "ವಿಕೋಪ ಪರಿಹಾರ ನಿಧಿ "ಯನ್ನು ರೂಪಿಸಿದೆ. ಇದಕ್ಕೆಂದೇ ಈ ಸಾಲಿನಲ್ಲಿ 27.00 ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಆ ಪೈಕಿ 20.25 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡಿದ್ದು, 6.75 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಒದಗಿಸಿದೆ. ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಅಭಾವ ಪೀಡಿತ ಜಿಲ್ಲೆಗಳಿಗೆ "ವಿಕೋಪ ಪರಿಹಾರ ನಿಧಿ "ಯಿಂದ 21.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯದಲ್ಲಿರುವ ಹಾಲಿ ಅಭಾವ ಪರಿಸ್ಥಿತಿ ಗಂಭೀರವಾಗಿದ್ದರೂ, ವಿಕೋಪ ಪರಿಹಾರ ನಿಧಿಯಲ್ಲಿ ಲಭ್ಯವಿರುವ ಹಣ 27.00 ಕೋಟಿ ರೂಪಾಯಿಗಳಿಗೆ ಸೀಮಿತವಾಗಿರುತ್ತದೆ. ಈ ನಿಧಿಯಲ್ಲಿ ಹೆಚ್ಚುವರಿ ಹಣ ಒದಗಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ. ನೈಸರ್ಗಿಕ ವಿಕೋಪದಿಂದಾದ ಖರ್ಚನ್ನು ಭರಿಸಲು ವಾಡಿಕೆಯಂತೆ, ವಾರ್ಷಿಕ ಆಯವ್ಯಯದ ಅಡಿಯಲ್ಲಿರುವ ಕಾಮಗಾರಿಗಳಿಗೆ ಪೂರಕವಾಗಿ, ವಿಕೋಪ ಪರಿಹಾರ ನಿಧಿಯನ್ನು ಬಳಸಬೇಕೆಂಬುದು ಭಾರತ ಸರ್ಕಾರದ ಮುಖ್ಯ ತತ್ವ ಆಗಿದೆ. ಆದ್ದರಿಂದ ವಿಕೋಪ ಪರಿಹಾರ ನಿಧಿಯನ್ನು ಮೇಲಿನ ತತ್ವವನ್ನು ಗಮನದಲ್ಲಿರಿಸಿಕೊಂಡು ಉಪಯೋಗಿಸಿಕೊಳ್ಳಬೇಕಾಗಿದೆ. ಹಿಂಗಾರು ಮತ್ತು ಮುಂಗಾರು ಮಳೆಯು ಬೀಳದೆ ಇರುವುದರಿಂದಾದ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಸರ್ಕಾರವು ಈ ಕೆಳಗಿನಂತೆ ವಿವಿಧ ಮೂಲಗಳಿಂದ ಅಭಾವ ಪರಿಹಾರ ಕ್ರಮಗಳಿಗೆ ಹಣವನ್ನು ಒದಗಿಸಲು ತೀರ್ಮಾನಿಸಿದೆ.

1. ಬರಗಾಲ ಪೀಡಿತ ಪ್ರದೇಶಗಳಲ್ಲಿ ಯೋಜನೆ ಕಾರ್ಯಕ್ರಮಗಳ ಅನುಷ್ಠಾನವನ್ನು ತ್ವರಿತಗೊಳಿಸಲು ಅಭಿವೃದ್ಧಿ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದೆ.

2. ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಂತಹ, ಯೋಜನೆಗಳ ನಿಧಿಯ ಸ್ವಲ್ಪ ಭಾಗವನ್ನು ಅಭಾವ ಪೀಡಿತ ಪರಿಹಾರ ಕಾರ್ಯಕ್ರಮಗಳಿಗೆಂದೇ ಪ್ರತ್ಯೇಕವಾಗಿ ಒದಗಿಸಲಾಗಿದೆ.
3. ಅಭಾವ ಪೀಡಿತ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಎದುರಿಸಲು ವಾಡಿಕೆಯ ಯೋಜನಾ ಕಾರ್ಯಕ್ರಮಗಳಿಂದ 2.00 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ಕುಡಿಯುವ ನೀರಿನ ಸರಬರಾಜು, ಜಾನುವಾರುಗಳಿಗೆ ಮೇವಿನ ಸರಬರಾಜು, ಉದ್ಯೋಗ ಅವಕಾಶ, ವಿಶೇಷ ಪೌಷ್ಠಿಕಾಂಶಗಳನ್ನು ಒದಗಿಸುವುದು ಮುಂತಾದ ಅಭಾವ : ಅತೀವೃಷ್ಟಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿ ಮತ್ತು ಯೋಜನಾ ಕಾರ್ಯಕ್ರಮಗಳಿಗಾಗಿ ಮೀಸಲಿರಿಸಿದ ನಿಧಿಯಿಂದ 33.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

1991ರ ಫೆಬ್ರವರಿ 16ರಂದು ನಡೆದ ವಿಭಾಗಾಧಿಕಾರಿಗಳ : ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಅಭಾವ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ನಡೆಸುವಂತೆ ಮತ್ತು ತ್ವರಿತಗೊಳಿಸುವಂತೆ ನಿರ್ದಿಷ್ಟ ಸೂಚನೆಗಳನ್ನು ನೀಡಲಾಯಿತು. ಅಭಾವ : ಅತೀವೃಷ್ಟಿ ಪರಿಹಾರ ಕಾಮಗಾರಿಗಳಿಗಾಗಿ ಈಗಾಗಲೇ ಬಿಡುಗಡೆಯಾಗಿರುವ ಹಣದ ಜೊತೆಗೆ ಇನ್ನೂ ಸುಮಾರು 18.00 ಕೋಟಿ ರೂಪಾಯಿಗಳ ಬೇಡಿಕೆಯನ್ನು ಅಭಾವ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಈ ಪೈಕಿ ಈಗಾಗಲೇ ಸುಮಾರು 2.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇದರಿಂದಾಗಿ ಇದುವರೆವಿಗೂ ಬಿಡುಗಡೆ ಮಾಡಲಾದ ಮೊತ್ತ 36.00 ಕೊಟಿ ರೂಪಾಯಿಗಳಾಗುತ್ತವೆ.

ಜನವರಿ ತಿಂಗಳ ಅಂತ್ಯದವರೆಗೆ 3,811 ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಹಾಗೂ ಸುಮಾರು 23.73 ಲಕ್ಷ ಮಾನವ ದಿನಗಳ ಕಾಮಗಾರಿ ನಡೆದಿದೆ. 3,185 ಕೊಳವೆ ಬಾವಿಗಳನ್ನು ಕೊರೆಯುವುದು. ಆಳ ಮಾಡುವುದು ಪುನಶ್ಚೇತನಗೊಳಿಸುವ ಕಾರ್ಯ ಮಾಡಲಾಗಿದೆ. ಸುಮಾರು 6,207 ಮೆಟ್ರಿಕ್ ಟನ್ ಮೇವನ್ನು ಅಭಾವ ಪೀಡಿತ ಜಿಲ್ಲೆಗೆ ಪೂರೈಸಲಾಗಿದೆ.

ಕೃಷಿ ಇಲಾಖೆ ವರದಿ ಮಾಡಿರುವಂತೆ 1990-91ನೇ ಸಾಲಿನಲ್ಲಿ ರಾಜ್ಯದ 174 ತಾಲ್ಲೂಕುಗಳು ಸಮಗ್ರ ಬೆಳೆ ವಿಮಾ ಯೋಜನೆಯಲ್ಲಿ ಬಂದಿದ್ದು, ಖಾರೀಫ್ ಋತುವಿನಲ್ಲಿ 36,669 ರೈತರು ಮತ್ತು ರಬೀ ಋತುವಿನಲ್ಲಿ 1,186 ರೈತರನ್ನು ಒಳಗೊಂಡಿದೆ. ಈ ರೈತರು ಬೆಳೆ ನಷ್ಟದ ಬಗ್ಗೆ ಜನರಲ್ ಇನ್ಶೂರೆನ್ಸ್ ಕಾರ್ಪೊರೇಷನ್ ನಿಂದ ಪರಿಹಾರ ಪಡೆಯಲು ಅರ್ಹರಿರುತ್ತಾರೆ.

ಬರಪರಿಹಾರ ಕಾಮಗಾರಿಗಳ ಅನುಷ್ಠಾನವನ್ನು ಯಾವುದೇ ಅಡಚಣೆ ಇಲ್ಲದೆ ಮುಂದುವರಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದೆ. ಬರಪರಿಹಾರ ಕಾಮಗಾರಿಗಳೂ ಅದರಲ್ಲೂ ಮುಖ್ಯವಾಗಿ ಕುಡಿಯುವ ನೀರಿನ ಸೌಲಭ್ಯ, ಮೇವು ಪೂರೈಕೆ ಇತ್ಯಾದಿ ಕಾರ್ಯಕ್ರಮಗಳಿಗೆ ಹಣದ ಕೊರತೆ ಇಲ್ಲವೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಸರ್ಕಾರವು ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿಯ ಗಂಭೀರತೆಯನ್ನು ಮಾನಗಂಡು ಅದನ್ನು ಎದುರಿಸಲು ಅಗತ್ಯವಿರುವ ಎಲ್ಲ ಬಗೆಯ ಪ್ರಯತ್ನ ಮಾಡಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಕಂದಾಯ ಸಚಿವರು ಬಹಳ ಸುದೀರ್ಘವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನೋಡಿದ ಮೇಲೆ ಮುಖ್ಯವಾದಂಥ ಎರಡು ಮೂರು ಅಂಶಗಳು ನಮ್ಮ ಗಮನಕ್ಕೆ ಬಂದಿದೆ.

ಅಧ್ಯಕ್ಷರು: ತಮ್ಮ ಭಾಷಣಕ್ಕೆ ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ: ಅರ್ಧ ಗಂಟೆ ಸಾಕು.

ಶ್ರೀ ಮಾನ್ಯ ಬೈರೇಗೌಡ: ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ಕೊಟ್ಟಂಥ ಹೇಳಿಕೆಯಲ್ಲಿ ಜಿಲ್ಲಾವಾರು ವಿವರಗಳನ್ನು ಒದಗಿಸಬೇಕಾದಂಥ ಅವಶ್ಯಕತೆ ಇದೆ. ಏಕೆಂದರೆ ಜಿಲ್ಲಾ ಮಟ್ಟದಲ್ಲಿ ಕೆಲವುಕಡೆಗಳಲ್ಲಿ ಬಹಳಷ್ಟು ಕೆಲಸಕಾರ್ಯಗಳು ನಡೆಯುತ್ತಾ ಇಲ್ಲ ರಾಜ್ಯದಲ್ಲಿ ಏನೇನು ಕೆಲಸಕಾರ್ಯಗಳು ಆಗಿವೆ ಎಂಬುದು ದೊರೆಯದೆ ಇರಬಹುದು.ಆದರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ವಿವರಗಳು ಇದ್ದರೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ ಎಂದು ಇದ್ದರೆ ನಾವುಗಳು ಅದನ್ನು ತಿಳಿದುಕೊಂಡು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಸರಕಾರದವರು ದಯಮಾಡಿ ಅಂಥ ವಿವರಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇವತ್ತು ನಮ್ಮ ಸದನದ ಕಾರ್ಯಕಲಾಪಗಳ ಸಮಿತಿಯನ್ನು ಮಾಡಿದ ನಿರ್ಣಯದ ಪ್ರಕಾರ ಸಾಯಂಕಾಲದ ಒಳಗಾಗಿ ಈ ವಿಷಯದ ಮೇಲಿನ ಚರ್ಚೆ ಮುಗಿಯಬೇಕಾಗುತ್ತದೆ. ಹಾಗೆಂದು ಭರವಸೆಯನ್ನು ಕೊಟ್ಟಿದ್ದೀರಿ. ಅದನ್ನು ತಾವುಗಳೆಲ್ಲರೂ ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ನಿಲುವಳಿ ಸೂಚನೆಯನ್ನು ಯಾರು ಸಹಿ ಮಾಡಿ ಕಳುಹಿಸಿದ್ದೇವೆ ಅವರಿಗಾದರೂ ಮಾತನಾಡುರುದಕ್ಕೆ ತಾವುಗಳು ಅವಕಾಶವನ್ನು ಕೊಡಬೇಕು.

ಶ್ರೀ ಆರ್.ವಿ. ದೇಶ್‌ಪಾಂಡೆ: ನಮ್ಮ ಜಿಲ್ಲೆಯಲ್ಲಿಯೂ ದನಕರುಗಳಿಗೆ ಮೇವಿಲ್‌ಲ್ಲ....

ಅಧ್ಯಕ್ಷರು: ಸಾಯಂಕಾಲದೊಳಗಾಗಿ ಈ ಚರ್ಚೆಯನ್ನು ಮುಗಿಸಬೇಕು ಅದೇ ರೀತಿಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಇವೊತ್ತು ಸಭೆಯಲ್ಲಿ ಮಂಡಿಸುತ್ತೇವೆ ಎಂದು ಮಾತು ಕೊಟ್ಟಿದ್ದೀರಿ. ಇದರಲ್ಲಿ ಎಷ್ಟು ಸದಸ್ಯರು ಭಾಗವಹಿಸಿ ಮಾತನಾಡುವುದಕ್ಕೆ ಸಾಧ್ಯ ಎಂಬ ಬಗ್ಗೆ ಸಮಯದ ಮೇಲೆ ಅವಲಂಬಿಸಿರುತ್ತದೆ. ಆದುದರಿಂದ ಸಮಯದ ಮೇಲೆ ನಿಗಾ ಇಟ್ಟು ಭಾಷಣವನ್ನು ಮಾಡಿದರೆ ಚರ್ಚೆಯಲ್ಲಿ ಹೆಚ್ಚು ಜನರು ಬಾಗವಹಿಸಲು ಸಾಧ್ಯವಾಗುತ್ತದೆ ಎಂಬುದನ್ನು ಪೂರ್ಣಬಾವಿಯಾಗಿ ಹೇಳುವುದೇ ನನ್ನ ಉದ್ದೇಶ. ಈಗ ಸಭೆಯು ತನ್ನ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಿ ಮತ್ತೆ ಮಧಾನ 2-45 ಗಂಟೆಗೆ ಪುನಃ ಸೇರುತ್ತದೆ.

(ಸದನವು 1-47 ಗಂಟೆಗೆ ತನ್ನ ಕಲಾಪಗಳನ್ನು ಸ್ಥಗಿತಗೊಳಿಸಿ ಮತ್ತೆ 2-45 ಗಂಟೆಗೆ ಸಭೆ ಸೇರಲು ನಿರ್ಧರಿಸಿತು.)

(ಸಭೆಯು 3 ಗಂಟೆಗೆ ಪ್ರಾರಂಭವಾಯಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೇ ಬರಗಾಲದ ಬಗ್ಗೆ ಚರ್ಚೆ ಮಾಡಲಿಕ್ಕೆ ಮಂತ್ರಿಗಳಿಗೂ ಬರಗಾಲ ಬಂದಿದೆ. 24 ಜನ ಸದಸ್ಯರಿರುವ ಮಂತ್ರಿ ಮಂಡಲ ಇದ್ದಾಗಲೂ ಕ್ವೋರಂಗೋಸ್ಕರ ಮುಕ್ಕಾಲು ಗಂಟೆ ಕಾದು ಮಂತ್ರಿಗಳು ಇಲ್ಲದೆ ಬರೀ ಕಂದಾಯ ಮಂತ್ರಿಯಾದರೂ ಇದ್ದಾರೆ ಎನ್ನತಕ್ಕಂಥ ಸಮಾಧಾನ ಅಷ್ಟೇ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ ಪ್ರತಿಯೊಂದು ಜಿಲ್ಲೆಗೂ ಜಿಲ್ಲಾ ಮಂತ್ರಿಗಳಿದ್ದಾರೆ. ಅಲ್ಲಿ ಏನೇನು ಅಭಾವ ಇದೆ, ಅವರ ಕರ್ತವ್ಯ ಏನಿದೆ? ಏನಾಗಿದೆ? ಎಲ್ಲಿ ಹೋಗಿದ್ದರು? ಮುಂದೆ ಏನು ಮಾಡಬೇಕು ಎಂಬ ಬಗ್ಗೆ ವಿಶೇಷವಾಗಿ ಗಂಭೀರವಾದ ಚಿಂತನೆ ಮಾಡುವ ಸಂದರ್ಭದಲ್ಲಿ ಎಷ್ಟು ಗಂಭೀರವಾಗಿ ಸರ್ಕಾರ ಪರಿಗಣನೆ ಮಾಡಿದೆ ಎನ್ನುವುದಕ್ಕೆ ಇದು ಸಾಕ್ಷಿ ಎಂದು ಕಾಣುತ್ತದೆ. ಬಹುಶಃ ನನಗನಿಸುತ್ತದೆ ಈ ಸ್ಥಿತಿ ಜನಕ್ಕೆ ಅರ್ಥವಾಗಿಲಿ ಈಗ ಸದನವನ್ನು ಮುಂದೂಡಿ ಈ ನಿರ್ಲಕ್ಷ್ಯ ರಾಜ್ಯದ ಜನಕ್ಕೆ ಗೊತ್ತಾಗಲಿ. ನಾವು ಎಲ್ಲಿಗಾದರೂ ಹೋದಾಗ ರಸ್ತೆಗಳಲ್ಲಿ ಜನಗಳು ಕೇಳುತ್ತಾರೆ ಎನ್ನುವುದಾದರೂ ಆಗಲಿ. ಜನರುಗಳಿಗೆ ಉತ್ತರ ಕೊಡುವುದು ಕಷ್ಟವಾಗಬಹುದೆನ್ನುವ ವಾತಾವರಣ ಮೂಡಿ ಅವಗಲಾದರೂ ಬುದ್ಧಿ ಬಂದು ಇವರು ಇಲ್ಲಿ ಕುಳಿತುಕೊಳ್ಳಬಹುದು. ಅವರಿಗೆ ಇದಕ್ಕಿಂತ ಗಂಭೀರವಾದ ಕೆಲಸ ಏನಿದೆ? ಮಂತ್ರಿಗಳಾಗಿ ಏಕೆ ಮಾಡಿದ್ದಾರೆ? ಅಲ್ಲಿನ ಸ್ಥಿತಿಗತಿ ಏನು ಹಣಕಾಸಿನ ಪರಿಸ್ಥಿತಿ ಏನು ಅಲ್ಲಿಗೆ ಹೋಗಿದ್ದರೆ ಮುಂದೆ ಏನು ಮಾಡಬೇಕು ಇದರ ಬಗ್ಗೆ ತೀವ್ರ ಚಿಂತನೆ ಮಾಡಬೇಕೆನ್ನುವ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರು ಮಾತ್ರ ಇದ್ದಾರೆ. ಎಷ್ಟರ ಮಟ್ಟಿಗೆ ಈ ಸರ್ಕಾರಕ್ಕೆ ಕಳಕಳಿ ಇದೆ? ತಾವೇ ನಮ್ಮ ರಕ್ಷಣೆಗೆ ಬರಬೇಕು. ಜನ ರಕ್ಷಣೆಗೂ ತಾವೇ ಬರಬೇಕು ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಈಗಾಗಲೇ ಹೇಳಿ ಕಳುಹಿಸಿದ್ದೇನೆ. ಯಾರು ಯಾರು ಎಲ್ಲಿದ್ದಾರೋ ಅವರು ಬರುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್: ಅವರು ಎಲಿದ್ದಾರೆ? ಪೋಲೀಸ್ ಗುಪ್ತ ದಳವನ್ನು ಕರೆಯಿಸಿ ಅವರು ಎಲ್ಲೆಲ್ಲಿದ್ದಾರೆ ಹುಡುಕಿಸಬೇಕಷ್ಟೇ. ನಮಗೆ ಗೊತ್ತಿದೆ ಅವರು ಎಲ್ಲೆಲ್ಲಿದ್ದಾರೆ ಎಂದು

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಕಳೆದ ಅಧಿವೇಶನದಲ್ಲಿ ಈ ಬರಗಾಲದ ಬಗ್ಗೆ ಚರ್ಚೆ ಮಾಡಿದ್ದೆವು.ಚರ್ಚೆ ಮಾಡುವಾಗ ನಾನು ವಿನಂತಿ ಮಾಡಿಕೊಂಡಿದ್ದೆ. ಅಗಲೂಕೂಡ ಬರೀ ಕಂದಾಯ ಮಂತ್ರಿಗಳು ಇದ್ದರು. ಬರೀ ಕಂದಾಯ ಮಂತ್ರಿಗಳು ಬರಗಾಲ ಪರಿಹಾರ ಮಾಡುತ್ತಾರೆಂದು ಅಂದುಕೊಳ್ಳುವುದು ನಮ್ಮ ಅವಿವೇಕತನ ಅಷ್ಟೇ ಬರಗಾಲ ಪರಿಹಾರ ಆಗಬೇಕಾದರೆ ಸಣ್ಣ ಕೈಗಾರಿಗಾ ಮಂತ್ರಿಗಳು ಬೇಕು. ವಿದ್ಯುಚಕ್ತಿ ಮಂತ್ರಿಗಳು ಬೇಕು ಸಹಕಾರ ಮಂತ್ರಿಗಳು ಬೇಕು ಗ್ರಾಮಾಭಿವೃದ್ಧಿ ಮಂತ್ರಿಗಳು ಬೇಕು ಕನಿಷ್ಟ ಇಷ್ಟು ಜನ ಇಲ್ಲದೆ ನಾವು ಗಂಭೀರವಾಗಿ ವಿಷಯವನ್ನು ಚರ್ಚೆ ಮಾಡುವುದಕ್ಕೆ ಸಾಧ್ಯ ಇಲ್ಲ. ಈ ಸರ್ಕಾರ ಇದೇ ರೀತಿ ಬರಗಾಲದ ಬಗ್ಗೆ ಇಷ್ಟು ಉಪೇಕ್ಷೆ ತೋರಿಸಿದರೆ ನಾವು ಸಹ ಅದೇ ಒಂದು ಧೋರಣೆಯನ್ನು ಈ ಸರ್ಕಾರದ ಬಗ್ಗೆ ತಾಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾನು ಹೇಳಿಕಳಿಸಿದ್ದೇನೆ. ತಾವು ಮಾತನಾಡಿ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತುಂಬಾ ಎಫೆಕ್ಟೀವ್ ಆಗಿ ವಿರೋಧಪಕ್ಷದವರು ಈ ಕಡೆ ಕುಳಿತು ಕೆಲಸ ಮಾಡುವುದಕ್ಕೆ ಆಗದೇ ಇರುತ್ತದೆ. ಇದಕ್ಕೆ ಬೇಕಾದಷ್ಟು ಕಾರಣಗಳು ಇರುತ್ತವೆ. ಅಂದೇ ರಾಜ್ಯದ ಜನತೆಯನ್ನು ಇಂತಹ ದುಸ್ಥಿತಿಗೆ ಸರ್ಕಾರ ತಂದು ಅದರ ಬಗ್ಗೆ ಚರ್ಚೆ ಆಗುವಂತಹ ಸಮಯದಲ್ಲಿ ಪ್ರತಿಭಟನೆ ಮಾಡುವುದಕ್ಕಾದರೂ ನಾವೆಲ್ಲ ಹೊರಗಡೆ ಹೋಗೋಣ. ಅದರಿಂದಲಾದರೂ ಇವರಿಗೆ ಅರ್ಥ ಆಗಲಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರು ಬಾಷಣ ಪ್ರಾರಂಭ ಆಗುತ್ತದೆ ಎಂದು ಎಲ್ಲರಿಗೂ ಗೊತ್ತಿದೆ. ಈ ಸದನ ಸೇರಿ ಇವೊತ್ತಿಗೆ ಎರಡನೆಯ ದಿವಸ. ಪ್ರಾಮುಖ್ಯತೆ ಪಡೆದಿರತಕ್ಕಂಥಹ ಮೊದಲನೇ ದಿವಸ ತಾವು ಬಂದು ಕುಳಿತಿದ್ದೀರಿ. ತಾವು ಅತ್ತ ಇತ್ತ ಓಡಾಡದೆ ಬೆಳಿಗ್ಗೆಯಿಂದ ಗಂಭೀರವಾಗಿ ಕುಳಿತಿದ್ದೀರಿ. ನಿಮಗೆ ನಮ್ಮ ಅತ್ಯಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಎಷ್ಟು ಕುರ್ಚಿಗಳು ಖಾಲಿ ಇದೆ ನೋಡಿ. ಮಂತ್ರಿಗಳು ಎಲ್ಲಿ ಹೋಗಿದ್ದಾರೆ ಇದು ತಮ್ಮ ಸ್ವಂತ ಜವಾಬ್ದಾರಿ ಅಲ್ಲ ಯಾರ ಇಲಾಖೆ ಸೇರುತ್ತದೆ ಅವರು ಹೋಗಿ ಕುಳಿತರೆ ಚಿಂತೆ ಇಲ್ಲ ಮಿಕ್ಕವರು ನಾವು ಎಲ್ಲಿ ಬೇಕಾದರೂ ಹೋಗೋಣ ಎಂದು ಇಷ್ಟೊಂದು ಬೇಜಾಬ್ದಾರಿಯಿಂದ ನಡೆದುಕೊಳ್ಳುವುದಾದರೆ ನಾವು ಎಲ್ಲಾ ಇಲ್ಲಿ ಕುಳಿತುಕೊಳ್ಳಬೇಕೇ? ಇದು ನನಗೆ ಅಷ್ಟು ಉಚಿತ ಅಲ್ಲ ಎಂದು ಅನಿಸುತ್ತದೆ. ವಿರೋದ ಪಕ್ಷದ ನಾಯಕರು ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರ ಮನಸ್ಸಿಗೂ ನೋವು ಆಗಿದೆ. ಆದರೆ ಅವರು ಅಲ್ಲಿ ಕುಳಿತು ಹೇಳಿದೇ ಇರುವುಂತಹ ಸ್ಥಿತಿ ಅದಕ್ಕೋಸ್ಕರ ನಾವಾದರೂ ಆ ಕೆಲಸ ಮಾಡೋಣ ಜನತೆಯ ಬಗ್ಗೆ ಸರ್ಕಾರಕ್ಕೆ ಎಷ್ಟು ನಿರ್ಲಕ್ಷ್ಯ ಇದೆ ಎಂದು ಪ್ರತಿಭಟನೆ ಮಾಡಿ ಇದನ್ನು ತೋರಿಸುವ ದೃಷ್ಟಿಯಿಂದ ನಾನಂತೂ ಹೊರಗಡೆ ಹೋಗುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ: ಈಗ ಮಾನ್ಯ ಅರಣ್ಯ ಮಂತ್ರಿಗಳು ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಕೌನ್ಸಿಲ್ ನಡೆದಿದೆ. ಅಲ್ಲಿ ಕೆಲವು ಮಂತ್ರಿಗಳು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಂತ್ರಿ ಮಂಡಲ ರಚನೆ ಮಾಡಿ ಅಂದರೆ ಅದನ್ನೂ ಮಾಡುವುದಿಲ್ಲ ಇರುವ ಮಂತ್ರಿಗಳು ಬಂದು ಕುಳಿತುಕೊಳ್ಳಿ ಅಂದರೆ ಅವರೂ ಕುಳಿತುಕೊಳ್ಳುವುದಿಲ್ಲ, ಎಷ್ಟು ಜನ ಮಂತ್ರಿಗಳು ಇದ್ದಾರೆ ಸ್ವಾಮಿ? 22 ಅಥವಾ 23 ಮಾನ್ಯ ಸ್ನೇಹಿತರು ಇಪ್ಪತ್ತು ಎಂದು ಹೇಳಿದರು. 20ಕ್ಕೆ ಒಂದು ಐದು ಜನ ಮಂತ್ರಿಯಾದರೂ ಬೇಡವೇ? ಅಲ್ಲಿ ಐದು ಅದು ಇದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಬರುತ್ತಾರೆ. ಆಗಾಗಲೇ ತಮ್ಮ ಧ್ವನಿ ಅಲ್ಲಿ ತಲುಪಿದೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ: ಸಭೆಯನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕಿ ಮಂತ್ರಿಗಳು ಬರುವುದಕ್ಕೆ ಅವಕಾಶ ಮಾಡಿಕೊಡಬಹುದಲ್ಲ!

ಶ್ರೀ ವಾಟಾಳ್ ನಾಗರಾಜ್: ನಾಳೆ ಸಭೆ ನಡೆಸಬಹುದು. ನಾನಂತೂ ಹೊರಗೆ ಹೋಗುತ್ತೇನೆ.

(ಇದೇ ಸಂದರ್ಭದಲ್ಲಿ ಪಕ್ಷೇತರ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ಬಿ.ಜೆ.ಪಿ ನಾಯಕರಾದ ಯಡಿಯೂರಪ್ಪನವರು ಸಭಾ ತ್ಯಾಗ ಮಾಡಿದರು.)

ಅಧ್ಯಕ್ಷರು: ಒಂದೇ ಒಂದು ವಿಷಯ ತಾವು ಗಮನಿಸಬೇಕಾದ ವಿಚಾರ ಅಂದರೆ ಆ ಮನೆ ಕೂಡ ಕಾರ್ಯಭಾರ ನಡೆಸುತ್ತಿದೆ. ಆದ್ದರಿಂದ ಬಹುತೇಕವಾಗಿ ಮಂತ್ರಿಗಳು ಆ ಮನೆಯಲ್ಲಿರಬಹುದು ಹಾಗೆ ಎಂದು ನನ್ನ ಊಹೆ.

ಶ್ರೀ ಆರ್.ವಿ. ದೇಶಪಾಂಡೆ: ಅಲ್ಲಿ ಇಬ್ಬರೇ ಸಚಿವರು ಇರಬಹುದು. ಕೌನ್ಸಿಲ್ ನಲ್ಲಿ 20 ಜನ ಮಂತ್ರಿಗಳ್ಳಿ 18 ಮಂತ್ರಿಗಳಿಗೆ ಕೂಡಲಿಕ್ಕೆ ಜಾಗ ಇಲ್ಲ ಅಲ್ಲಿ ಹೇಗೆ ಹೋಗುತ್ತಾರೆ? ಗವರ್ನಮೆಂಟಿಗೂ ಇದರ ಬಗ್ಗೆ ಯೋಚನೆ ಇಲ್ಲ...

ಶ್ರೀ ಹೆಚ್. ಏಕಾಂತಯ್ಯ: ಸಭೆಯನ್ನು ಸ್ವಲ್ಪ ಕಾಲವಾದರೂ ಮುಂದಕ್ಕೆ ಹಾಕಿ. ನಾವು ಹೊರಗೆ ಹೋಗುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಂತ್ರಿಗಳು ಬರದೇ ಇರಬಹುದು ಅದು ಒಂದು ಕಡೆ ಆದರೆ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡುವುದಕ್ಕೆ ಸದಸ್ಯರಿಗೂ ಬರವೇ? ಬರಗಾಲದ ಬಗ್ಗೆ ಮಾತನಾಡುವಾಗ ಈಗ ಸಭೆಯಲ್ಲಿ ವಾಸ್ತವವಾಗಿ ಕೋರಂ ಇಲ್ಲ, ನಾವು ಒತ್ತಾಯ ಮಾಡಿಲ್ಲ ಸಭೆ ಸೇರುವುದಕ್ಕೆ ಕೂಡ ಕೋರಂ ಇಲ್ಲ. ರಾಜ್ಯದ ಇಂತಹ ದೊಡ್ಡ ಘಟನೆ ಬಗ್ಗೆ ಚರ್ಚೆ ಆಗುವಾಗ ಇದು ಗಾಂಬೀರ್ಯದ ಅರ್ಥ ಆಗಿಲ್ಲ. ನಮಗಷ್ಟೇ ಸೀಮಿತವಾಗಿ ಮಾತನಾಡುತ್ತೇವೆ. ಕೇಳುವವರು ಇಬ್ಬರು ಇದ್ದರೆ ಸರಿ ಎಂದೇ? ಅದಕ್ಕಾಗಿ ನಾವು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಿದೆ ನಿಮ್ಮ ಛೆಂಬರಿಗೆ ಹೋಗೋಣ. ನಾನು ಮಾತನಾಡುತ್ತೇನೆ ನೀವು ಬರೆದುಕೊಳ್ಳಿ ಬೇಕಾದರೆ ಇಲ್ಲಿ ಒಂದು ಉತ್ತರ ಹೇಳಿ ಎಂದು ಹೇಳಿದೆ. ಇದು ಸಹಿಯಾದ ಕ್ರಮ ಅಲ್ಲ. ನಾವು ಪ್ರತಿಭಟನೆ ಹೇಗೆ ಮಾಡಬೇಕು ತಾವು 15 ನಿಮಿಷ ಸಭೆಯನ್ನು ಮುಂದಕ್ಕೆ ಹಾಕಿ. ಅದು ಸಾಧ್ಯ ಇಲ್ಲ ಎಂದರೆ ನಮಗೆ ವಿಧಿ ಇಲ್ಲ. ಇರತಕ್ಕ ಒಂದೇ ಒಂದು ಮಾರ್ಗ ಅಂದರೆ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಹೊರಕ್ಕೆ ಹೋಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ವಿರೋಧ ಪಕ್ಷದ ನಾಯಕರು ಹೇಳಲಿ. ಅವರು ಬಹಳ ಎಫೆಕ್ಟೀವ್ ಆಗಿ ಭಾಷಣ ಮಾಡುತ್ತಾರೆ. ಹಾಗೆಯೇ ಬಹಳ ಒಳ್ಳೆಯ ಸಲಹೆ ಮಾಡುತ್ತಾರೆ. ಅದನ್ನು ನಾವು ಕಾರ್ಯಗತ ಮಾಡುತ್ತೇವೋ ಅಥವಾ ಬಿಡುತ್ತೇವೋ ಅದು ಸರ್ಕಾರಕ್ಕೆ ಬಿಟ್ಟದ್ದುದು ಅದನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಅವರ ಭಾಷಣ ಕೇಳಬೇಕು ಅವರ ಸಲಹೆ ಕೇಳಬೇಕು ಎಂದು ಬಹಳ ಕಾತುರತೆಯಿಂದ ನಾನು ಐದು ನಿಮಿಷ ಮುಂಚೆಯೇ ಬಂದಿದ್ದೇನೆ. ಅವರು ಹೇಳಿದರು ನಿಮ್ಮ ಛೇಂಬರಿನಲ್ಲಿ ಮೀಟಿಂಗ್ ಮಾಡಬಹುದಲ್ಲ ಎಂದು. ಏಕೆಂದರೆ ಎಲ್ಲಾ ಕಡೆ ಸದಸ್ಯರು ಇರಲಿಲ್ಲ ಈ ಕಡೆಯೂ ಇರಲಿಲ್ಲ ಆಕಡೆಯೂ ಇರಲಿಲ್ಲ ಆಗ ಈ ಮಾತನ್ನು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ: ದೈತ್ಯ ಬಲ ನಿಮ್ಮದು ನಿಮ್ಮ ಸಂಖ್ಯೆ ನೋಡಿ ನಮ್ಮ ಸಂಖ್ಯೆ ನೋಡಿ ಈ ಪ್ರಮಾಣ ನೋಡಿ ನಿಮಗೆ ಗೊತ್ತಾಗುತ್ತದೆ.

ಶ್ರೀ ಎಲ್.ಆರ್.ಶಿವರಾಮಗೌಡ: ನಿಮ್ಮ ಕಡೆ ಸಹ ಪೂರ್ಣವಾದ ಸಂಖ್ಯೆಯಲ್ಲಿ ಇಲ್ಲ. ನಿಮ್ಮದೂ ವೀಕ್ ಇದೆ ಪೂರ್ಣ ಪ್ರಮಾಣದಲ್ಲಿ ಇಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಶ್ರೀ ವಾಟಾಳ್‌ರವರು ಯಡಿಯೂರಪ್ಪನವರು ಸಾಕಷ್ಟು ನಾವು ಮೈಸೂರಿನಲ್ಲಿದ್ದಾಗ ರಿವ್ಯೂ ಮಾಡಿದ್ದೇನೆ ಅವರು ಅಲ್ಲಿ ತೃಪ್ತಿ ಪಟ್ಟಿದ್ದಾರೆ. ಆದ್ದರಿಂದ ಈಗ ಚಂದ್ರೇಗೌಡರು ಪ್ರಾರಂಭಿಸಲಿ ಸರ್ಕಾರದ ವತಿಯಿಂದ ಹೇಳಬೇಕೋ ಅದನ್ನು ಹೇಳುತ್ತೇನೆ. ಸುಧಾರಣೆ ಮಾಡಲು ಸಲಹೆಗಳು ಸರ್ಕಾರಕ್ಕೆ ಅವಶ್ಯಕ.

ಅಧ್ಯಕ್ಷರು: ನನ್ನ ಸಮಸ್ಯೆ ಏನೆಂದರೆ,

"There is no rule which provides that Ministers must be present in the House during its proceedings. The Speaker also has no power to enforce attendance of any particular Minister in the House but certain convention regarding the presence of Ministers in the House have developed as a result of observations made by the Speaker from time to time under his inherent powers. It is now an established convention that on important occasions like

Question Hour, Discussion on the budget or the President's adress or the motion regarding international Situation, the concerned Ministers are required to be present in the House as far as possible. On other occasions, the Minister or the Ministers in charge of the business before the House are required to be present. In the case of unavoidable of Ministers incharge........."

ಆದ್ದರಿಂದ ಈ ದಿವಸ ಸಬ್ಜೆಕ್ಟ್‌ಗೆ ತಕ್ಕ ಸಚಿವರು ಇದ್ದಾರೆ ಆದರೆ ನೀವು ಏನು ಅಬ್ಜೆರ್ವೇಷನ್ ಮಾಡಿದೀರಿ ನಾನು ಅದನ್ನು ತಳ್ಳಿಹಾಕುವಂತಿಲ್ಲ. ಅದು ಗಂಭೀರವಾದ ವಿಚಾರ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅಧ್ಯಕ್ಷರೇ ನಾವೂ 6 ವರ್ಷಗಳ ಕಾಲ ಸರ್ಕಾರ ನಡೆಸಿದ್ದೇವೆ ಆಗಲೂ ಕೆಲವು ಸಂದರ್ಭದಲ್ಲಿ ಮೂರ್ನಾಲ್ಕು ಜನ ಕುಳಿತಿದ್ದ ಸಂದರ್ಭಗಳು ಇದ್ದವು. ಆ ಕಡೆಯ ಸದಸ್ಯರು ತೀವ್ರ ಪ್ರತಿಭಟನೆ ಮಾಡಿದಾಗ ಸಚಿವರನ್ನು ಕರೆಯಿಸಿದ್ದಿದೆ. ಸಚಿವರು ಇಲ್ಲಿರಬೇಕಾದ್ದು ಕನ್‌ವೇಷನ್. ಅವರ ಜೊತೆಗೆ ಸಚಿವರು ಎಲ್ಲಾದರೂ ಬೆಂಗಳೂರಿನಿಂದ ಹೊರಗೆ ಹೋಗಬೇಕಾದರೆ ಸಾಮಾನ್ಯವಾಗಿ ಅಧ್ಯಕ್ಷರ ಪರವಾನಗಿ ಇಲ್ಲದೇ ಹೋಗುವಹಾಗಿಲ್ಲ. ಅಲ್ಲದೆ ಈ ಸಂದರ್ಭದಲ್ಲಿ ವಿಧಾನಪರಿಷತ್ತು ಕೂಡ ಇಲ್ಲ. ಅಡ್ಜರ್ನ್ ಆಗಿದೆ ಅದಕ್ಕಾಗಿಯೇ ನಾವು ಬಂದಾಗ ಈ ರಾಜ್ಯದಲ್ಲಿ ಮಂತ್ರಿಗಳಿಗೂ ಬರಗಾಲ ಬಂದಿದೆ ಎಂದು ಹೇಳಿದುದ್ದು ಈಗ ಯಾರಲ್ಲಿ ಪ್ರಸ್ತಾಪ ಮಾಡಬೇಕು. ಇಡೀ ರಾಜ್ಯದ ಜನತೆ 4ನೇ ತಾರೀಖು ವಿಧಾನಸಭೆ ಪ್ರಾರಂಭವಾಗುತ್ತದೆ ಏನು ಮಾಡುತ್ತಾರೋ ಎಂದು ಕಾದಿದೆ. ಬೆಂಗಳೂರಿನಲ್ಲಿ ನಿಜವಾಗಲೂ ಕುಡಿಯುವ ನೀರಿಗೆ ತೊಂದರೆ ಇದೆ. ಕಾರವಾರದ ದೇಶಪಾಂಡೆಯವರು ಇದರ ಬಗ್ಗೆ ಮಾತನಾಡಬೇಕು ಎಂದರೆ ಜನಪ್ರತಿನಿಧಿಗಳು ಇವರ ಬಗ್ಗೆ ಎಷ್ಟು ಗಮನಕೊಟ್ಟಿದ್ದಾರೆಂದು ಅರಿತುಕೊಳ್ಳಬೇಕಾಗಿದೆ. ಮಾಸ್ ಮೆಜಾರಿಟಿ ಬಂದಿದ್ದರ ಫಲವೇ ಇದು? ಈ ಪ್ರಸ್ತಾಪವಾಗಿ ಆಗಲೇ 15 ನಿಮಿಷವಾಯಿತು ಎರಡು ಸೆಕೆಂಡ್ಸ್‌ನಲ್ಲೇ ವಿಷಯ ಹೋಗಿರುತ್ತದೆ. ನಿಮ್ಮ ಅಭಿಪ್ರಾಯಕ್ಕೆ ನಾವು ಗೌರವ ಕೊಡುತ್ತೇವೆ ಆದರೆ ನಾವು ಯಾರಲ್ಲಿ ಪ್ರತಿಭಟನೆ ಮಾಡುವುದು? ಇಂದು ಬೆಳಿಗ್ಗೆ ಮಾನ್ಯ ಸಚಿವರು ಉತ್ತರಿಸುವಾಗ ತಾವು ಉತ್ತರವನ್ನೇ ಕೊಡುವುದಿಲ್ಲವೆಂದು ಕುಳಿತರು ಆಗ ತಾವೂ ಕೋಪಿಸಿಕೊಂಡಿರಿ ನೀವೂ ಈ ಕಡೆ ಕುಳಿತು ಹೋರಾಟ ಮಾಡಿದ್ದೀರಿ ಜನತೆಯ ಸಮಸ್ಯೆಗಳನ್ನು ಅರಿಯಲು ಸರ್ಕಾರ ತಯಾರಿಲ್ಲ ಎಂದರೆ ಇದರ ಅರ್ಥವೇನು ಹೇಳಿ ತಾವು ಸರ್ಕಾರವನ್ನು ಪುಲ್‌ಅಪ್‌ಕೊಡಬೇಕೆಂದು ಕೋರುತ್ತೇನೆ.

ಶ್ರೀ ಸಿ. ಭೈರೇಗೌಡ: ಎಲ್ಲ ಸಂದರ್ಭದಲ್ಲೂ ಎಲ್ಲಾ ಸಚಿವರೂ ಇಲ್ಲಿರಬೇಕೆಂಬ ವಾದದಲ್ಲಿ ಹುರುಳಿಲ್ಲ ಅದನ್ನು ನಾನು ಒಪ್ಪುವುದೂ ಇಲ್ಲ ಆದರೆ ಈಗ ಚರ್ಚೆಯಾಗುತ್ತಿರುವುದು ಬರಗಾಲದ ಪರಿಸ್ಥಿತಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯದು.

ಮಾನ್ಯ ಕಂದಾಯ ಸಚಿವರು ಇಲ್ಲಿದ್ದಾರೆ ಅವರು ಬರಗಾಲ ಕಾಮಗಾರಿ ಬಗ್ಗೆ ಹಣಕಾಸು ಕೊಡುತ್ತೇವೆಂದು ಹೇಳಿದರೆ ಸರಿ ಆದರೆ ಕುಡಿಯುವ ನೀರಿನ ಸಮಸ್ಯೆ ಇದೆಯಲ್ಲ ಅದನ್ನು ಹೋಗಲಾಡಿಸುವವರು ಯಾರು? ಜನ ಜಾನುವಾರುಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ನೀರಿಲ್ಲ ಅದನ್ನು ಒದಗಿಸಲು ಜವಾಬ್ದಾರಿ ಹೊತ್ತಿರುವ ಸಚಿವರು ಇಂದು ಇಲ್ಲಿ ಇಲ್ಲ.

ಆದ್ದರಿಂದ ಈ ಸದನಕ್ಕಿಂತ ಸಚಿವರು ಹೆಚ್ಚೋ ಅಥವ ಸಚಿವರಿಗಿಂತ ಈ ಸದನ ಹೆಚ್ಚೋ ಎಂದು ತಮ್ಮನ್ನು ಕೇಳುತ್ತಿದ್ದೇನೆ. ತಾವು ತೀರ್ಪು ಕೊಡಬೇಕು. ಏಕೆಂದರೆ ಇವರು ಎಲ್ಲವನ್ನೂ ಗ್ರಾಂಟೆಂಡಾಗಿ ತೆಗೆದುಕೊಂಡಿದ್ದಾರೆ. ನಾನು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಸಾಕಷ್ಟು ಸಾಹಿತ್ಯ ಸಿದ್ಧಮಾಡಿಕೊಂಡು ಬಂದಿದ್ದೇನೆ ಅದನ್ನೆಲ್ಲ ಯಾರಿಗೆ ಹೇಳಬೇಕು ತಮಗೂ ಗೊತ್ತಿರುವಂತೆ ಮಾನ್ಯ ಮುಖ್ಯಮಂತ್ರಿಗಳ ಮನೆ ಎದುರಿಗೆ ನನ್ನ ತಾಲ್ಲೂಕಿನಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಿಳಿಸಲು ಧರಣಿ ನಡೆಸಿದ್ದೇವೆ ಸಾವಿರಾರು ಜನ ಬಂದಿದ್ದರು. ಅದಕ್ಕೆ ಇಲ್ಲಿ ರೂಪುಕೊಟ್ಟು ಹೇಳಬೇಕಾಗಿರುವುದು ಪರಿಹಾರ ಕಂಡುಕೊಳ್ಳುವುದು ನನ್ನ ಜವಾಬ್ದಾರಿ ಏಕೆಂದರೆ ನಾವೆಲ್ಲಾ ಜನತೆಯ ಪ್ರತಿನಿಧಿಗಳು ಅವರ ಕಷ್ಟಕಾರ್ಪಣ್ಯಗಳನ್ನು ನಾವು ಇಲ್ಲಿ ಪ್ರತಿಬಿಂಬಿಸಬೇಕಾಗಿದೆ. ಕಂದಾಯ ಸಚಿವರೇನೋ ನೋಟ್ ಮಾಡಿಕೊಂಡು ಎಲ್ಲಾ ತಿಳಿಸುತ್ತೇನೆ ಎಂದು ಹೇಳುಬಹುದು ಆದರೆ ನಮ್ಮ ಮಾತುಕೇಳಿ ಸಂಬಂಧಿಸಿದ ಸಚಿವರು ಕ್ರಮ ತೆಗೆದುಕೊಳ್ಳುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಇಂಥ ಬರಗಾಲ ಸ್ಥಿತಿ ಇರುವಾಗ ಸರ್ಕಾರ ತುದಿಗಾಲಲ್ಲಿ ನಿಂತಿರಬೇಕು ಈಗ ನಾವು ಯಾರಿಗೆ ಹೇಳಬೇಕು. ಶ್ರೀಮತಿ ನಾಗರತ್ನಮ್ಮನವರು ಇದ್ದಿದ್ದರೆ ಅವರ ತಾಲೂಕಿನಲ್ಲಿ ನನಗಿಂತ ಭೀಕರ ಪರಿಸ್ಥಿತಿ ಕುಡಿಯುವ ನೀರಿನದಿರಬಹುದು. ಗುಲ್ಬರ್ಗ ಜಿಲ್ಲೆಗೆ ಆ ಸ್ಥತಿ ಇರಬಹುದು. ರಾಜ್ಯದಲ್ಲೆಲ್ಲ ಸರ್ಕಾರದ ಲೆಕ್ಕದ ಪ್ರಕಾರವೇ ಒಂದೆರಡು ಜಿಲ್ಲೆ ಬಿಟ್ಟರೆ ಭೀಕರ ಪರಿಸ್ಥಿತಿ ಇದೆ ಸರ್ಕಾರವೂ ಇದನ್ನು ಒಪ್ಪಿಕೊಂಡಿದೆ. ಇಂಥ ಪರಿಸ್ಥಿತಿಗೆ ನಮ್ಮನ್ನು ಒಡ್ಡಬೇಡಿ. ಜನತೆಯನ್ನು ಒಡ್ಡಬೇಡಿ ಎಂದು ತಮ್ಮನ್ನೂ ಸರ್ಕಾರವನ್ನೂ ಕೋರುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ: ಅಧ್ಯಕ್ಷರೇ ಯಡಿಯೂರಪ್ಪನವರು ವಾಟಾಳರು ಮತ್ತಿತರ ಮಿತ್ರರು ಹೇಳಿದ್ದರ ಬಗ್ಗೆ ತಾವೂ ಸ್ಪಂದಿಸಿದ್ದೀರಿ ಆದ್ದರಿಂದ ಅದನ್ನು ನಾನು ಹೆಚ್ಚು ಎಳೆಯಲು ಹೋಗುವುದಿಲ್ಲ ತಮ್ಮ ಮಾರ್ಗದರ್ಶದಲ್ಲಿ ನಡೆಯುವ ಈ ಸಭೆಯಲ್ಲಿ ತಮ್ಮ ಆದೇಶ ಪಾಲನೆ ಮಾಡಿ ನನ್ನ ಮಾತನ್ನು ಪ್ರಾರಂಭಿಸುತ್ತೇನೆ. ಆದಕ್ಕಾಗಿಯೇ ಹೇಳಿದೆ ಬರಗಾಲದ ಮೇಲೆ ಚರ್ಚಿಸುವಾಗ ಸದಸ್ಯರಿಗೂ ಸಚಿವರಿಗೂ ಬರಗಾಲ ಇದೆ ಎಂದು. ಒಟ್ಟಾರೆ ಸದನದ ಸಂಖ್ಯಾದೃಷ್ಟಿಯಿಂದ ನಾವು ಪ್ರಾರಂಭ ಮಾಡುವ ಕಾಲದಲ್ಲಿ ಇದ್ದುದಕ್ಕಿಂತ ಈಗ ಸ್ವಲ್ಪ ಹೆಚ್ಚಾಗಿದೆ. ಆದರೆ ಆಳುವ ಪಕ್ಷದವರಿಗೆ ಬರಗಾಲದ ಮೇಲೆ ಇರುವ ಅಭಿಪ್ರಾಯದ ಪ್ರತಿಧ್ವನಿ ಇದು ಎಂದು ನಾನು ಅಂದುಕೊಂಡಿದ್ದೇನೆ. ಬಹಳ ಮುಖ್ಯವಾಗಿ ಇವತ್ತು ರಾಜ್ಯದ ಬರಗಾಲ ಪರಿಸ್ಥಿತಿಯ ಬಗ್ಗೆ ಕಂದಾಯ ಮಂತ್ರಿಗಳು ಸಾಮಾನ್ಯ ಹೇಳಿಕೆಯನ್ನು ನೀಡಿದ್ದಾರೆ. ಯಾವ ಅಂಕಿಅಂಶಗಳು ಇರತಕ್ಕಂಥ ಪರಿಸ್ಥಿತಿಯ ಸ್ಪಷ್ಟ ಪ್ರತಿ ರೂಪವನ್ನು ಇಲ್ಲಿ ಕೊಡುವುದು ಅವರಿಗೆ ಏತಕ್ಕೆ ಸಾಧ್ಯವಾಗಲಿಲ್ಲವೋ ನನಗೆ ಗೊತ್ತಾಗಲಿಲ್ಲ.

ಶ್ರೀ ಸಿ. ಬೈರೇಗೌಡ: ಪದೇ ಪದೇ ಅಡ್ಡಿ ಉಂಟು ಮಾಡತಕ್ಕಂಥದ್ದು ಸರಿಯಲ್ಲ ಎಂದು ಭಾವಿಸುತ್ತೇನೆ. ಕೊನೆಯ ಪಕ್ಷ ಗ್ರಾಮೀಣಾಭಿವೃದ್ಧಿ ಸಚಿವರನ್ನು ಆದರೂ ಕರೆಯಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇಲ್ಲದಿದ್ದರೆ ನಾವು ಮಾತನಾಡಿದರೆ ಏನು ಪ್ರಯೋಜನ? ಈಗ ವಿರೋಧ ಪಕ್ಷದ ನಾಯಕರು ಬಹುಶಃ ಈ ವಿಚಾರದಲ್ಲಿ ಪ್ರಾರಂಭ ಮಾಡಿದ್ದಾರೆ ಎಂದು ನನಗನ್ನಿಸುತ್ತದೆ. ಅವರು ಮಾತನಾಡುವಾಗ ಸಚಿವರು ಇರಬೇಕು ಆ ಸೌಜನ್ಯವನ್ನಾದರೂ ಅವರು ತೋರಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಮುಖ್ಯಮಂತ್ರಿಗಳು ಬೊಂಬಾಯಿಗೆ ಹೋಗಿದ್ದಾರೆ. ಅವರನ್ನು ಬೀಳ್ಕೊಡುಗೆ ಮಾಡಲಿಕ್ಕೆ ಬೊಂಬಾಯಿಗೆ ಹೋಗಿರಬೇಕು ಎಂದು ಕಾಣುತ್ತದೆ. ಅಥವಾ ಬೆಂಗಳೂರು ಏರ್‌ಪೋರ್ಟಿಗೆ ಹೋಗಿರಬೇಕು ಎಂದು ಕಾಣಿಸುತ್ತದೆ. ಫೋನ್ ಮಾಡಿ ಕರೆಯಿಸುವುದು ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ: ಇಲ್ಲಿ ಒಂದು ಮಾಹಿತಿ ಏನು ಸಿಗುತ್ತದೆ ಎಂದರೆ ರಾಜ್ಯಪಾಲರ ಭಾಷಣವನ್ನು ಓದತಕ್ಕಂಥ ಕಾಲದಲ್ಲಿ ಬರಗಾಲದ ಬಗ್ಗೆ ಪ್ರಸ್ತಾಪ ಇಲ್ಲ ಎಂದು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡಿದ್ದು ಈಗ ಅದಕ್ಕೆ ಸಾಕಷ್ಟು ಸಾಕ್ಷ್ಯ ಪುರಾವೆಗಳು ಸಿಗುತ್ತವೆ. ನನ್ನ ಕ್ರಮ ಅದು ಸರಿ ಎಂದು ನಾನು ಅಂದು ಕೊಂಡಿದ್ದೇನೆ. 132 ತಾಲ್ಲೂಕುಗಳು, 4758 ಹಳ್ಳಿಗಳು ಬರಗಾಲದ ಅಭಾವ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂದು ಹೇಳಿ ಇಲ್ಲಿ ಮಾಹಿತಿಯನ್ನು ಕೊಡುತ್ತಾರೆ. ಇಷ್ಟು ದೊಡ್ಡ ಪ್ರಮಾಣದ ಬರಗಾಲವನ್ನು ಎದುರಿಸುತ್ತಿರತಕ್ಕಂಥ ಈ ರಾಜ್ಯದ ಸ್ಥಿತಿಗತಿಗಳನ್ನು ರಾಜ್ಯದ ವಾರ್ಷಿಕವಾದಂಥ ವರದಿ ಅಥವಾ ಅದರ ಭವಿಷ್ಯದ ಬಗ್ಗೆ ಸರ್ಕಾರದ ಆಲೋಚನೆಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಈ ದೇಶದ ಜನತೆಗೆ ಕೊಡುವಾಗ ನಿಜವಾದ ಪರಿಸ್ಥಿತಿ ಅಲ್ಲಿ ಪ್ರತಿಬಿಂಬಿತವಾಗಲಿಲ್ಲ ಎಂದು ಬಹಳ ವಿಷಾದನೀಯವೆನಿಸುತ್ತದೆ. ಆದರೆ ಅದಾದ ಮಾರನೆಯ ದಿವಸ ಸಭೆ ಸೇರಿದ ತಕ್ಷಣವೇ ಈ ಸಭೆಯ ಅರಿವಿಗೆ ನಿಲುವಳಿಸೂಚನೆಯನ್ನು ಕಳುಹಿಸಬೇಕಾದಂಥ ಪ್ರಸಂಗವನ್ನು ಕೂಡಾ ರಾಜ್ಯದ ಜನ ಗಮನಿಸುತ್ತಾರೆ ಎಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಇಷ್ಟು ಹೇಳಿಕೆಯಲ್ಲಿ ಒಂದು ಕಳಕಳಿ ಕೂಡಾ ಅಭಿವ್ಯಕ್ತವಾಗಿಲ್ಲ ಎಂದು ಹೇಳುವಾಗ " 1990ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ನಮ್ಮ ರಾಜ್ಯದಲ್ಲಿ ಮೂರು ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಗುರುತಿಸಿದ್ದು 90 ರ ಸೆಪ್ಟೆಂಬರ್ ನಂತರ ಈ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗಿದೆ ಎಂದು ಹೇಳಿ ಅದನ್ನು ಇಷ್ಟಕ್ಕೇ ಬಿಟ್ಟರು. ವಿಕೋಪಕ್ಕೆ ಹೋಗಿದೆ ಎಂದು ಹೇಳಿದರೆ ಎಷ್ಟು? ಏನು ಸಮಾಚಾರ? ಈ ಅಭಾವ ಪರಿಸ್ಥಿತಿ ಮುಂಗಾರ ಮಳೆಯಾದಮೇಲೆ ಸುಧಾರಿಸಬಹುದು ಎಂದು ಹೇಳಿದ್ದಾರೆ. ನಗರದಲ್ಲಿ ಇವತ್ತು ಕುಡಿಯುವ ನೀರಿನ ಬಗ್ಗೆ ಸದನದಲ್ಲಿ ಬೆಳಿಗ್ಗೆ ಕೂಡಾ ಚರ್ಚೆ ಮಾಡಿದ್ದೇವೆ. ನವೆಂಬರ್ ಡಿಸೆಂಬರ್‌ನಲ್ಲಿ ಮಳೆ ಬರಲಿಲ್ಲ ಎನ್ನತಕ್ಕಂಥದ್ದು ಗಮನಕ್ಕೆ ಬಂದಿದ್ದರೆ ಅಲ್ಲಿಂದ ಕಾರ್ಯಾರಂಭ ಮಾಡಿದ್ದರೆ ನಗರಗಳಿಗೆ ಕುಡುಯುವ ನೀರಿನ ಪರಿಸ್ಥಿತಿ ಈ ಮಟ್ಟಕ್ಕೆ ಬರುತ್ತಿರಲಿಲ್ಲ. ಇವತ್ತು ಕೂಡಾ ಇನ್ನೂ ವಿಕೋಪಕ್ಕೆ ಹೋಗಿದೆ ಎಂದು ಹೇಳಿ ಸಾಕಷ್ಟು ಮಾಹಿತಿಯನ್ನು ಇದರಲ್ಲಿ ಒದಗಿಸಿಲ್ಲ.

ಮುಖ್ಯವಾಗಿ ಬರಗಾಲವನ್ನು ಎದುರಿಸುವುದಕ್ಕೆ ಸರ್ಕಾರ ಮಾಡಿಕೊಂಡಿರತಕ್ಕಂಥ ಸಿದ್ಧತೆಗಳು ಏನು ಇದೆ ಹಿಂದೆ ಬರಗಾಲ ಅಭಾವ ಪರಿಸ್ಥಿತಿಗೆ ಕೇಂದ್ರಸರ್ಕಾರದ ಬಾಗಿಲನ್ನು ತಟ್ಟಬೇಕಾಗಿತ್ತು. ಕೇಂದ್ರಸರ್ಕಾರದವರು ಅಲ್ಲಿ ಇರತಕ್ಕಂಥ ಹಿರಿಯ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿ ಮಾಹಿತಿಯನ್ನು ಸಂಗ್ರಹಿಸಿ ತಾವು ಕೊಟ್ಟಂಥ ಮಾಹಿತಿಯ ಮೇಲೆ ನಮ್ಮ ಯೋಜನೆಯ ಹಣ ಮಂಗಡ ಇರಬಹುದು ಅಥವಾ ಸಾಲ ರೂಪದ್ದು ಸ್ವಲ್ಪಮಟ್ಟಿಗೆ ಕೊಡುತ್ತಿದ್ದರು. ಹಿಂದೆ ಇದ್ದಂಥ ಶ್ರೀ ಮಾನ್ ವಿ.ಪಿ. ಸಿಂಗ್‌ರವರ ಸರ್ಕಾರ ಈ ಪರಿಸ್ಥಿತಿಯನ್ನು ಬದಲಾವಣೆ ಮಾಡಿದರು. ಒಂದು ಹೊಸ ಆಲೋಚನೆಯನ್ನು ಈ ದಿಕ್ಕಿನಲ್ಲಿ ಮಾಡಿದರು.

ಇಂಥ ಪರಿಸ್ಥಿತಿಗಳು ಅಘಘಾತವಾದಂಥ ಸಂದರ್ಭದಲ್ಲಿ ಪ್ರವಾಹ ಮುಂತಾದ ನೈಸರ್ಗಿಕ ವಿಕೋಪಗಳಿಗೆ ಒಂದು ವಿಕೋಪ ಪರಿಹಾರ ನೀತಿ ಎಂದು ಹೇಳಿ ಪ್ರಾರಂಭ ಮಾಡಿ ಸುಮಾರು ಹತ್ತು ವರ್ಷದ ಅಂದಾಜನ್ನು ಆಯಾಯ ರಾಜ್ಯಗಳಿಂದ ತರಿಸಿಕೊಂಡು ನಮ್ಮ ರಾಜ್ಯಕ್ಕೆ ಸುಮಾರು 27 ಕೋಟಿ ರೂಪಾಯಿಗಳು ಎಂದು ನಿಗದಿ ಮಾಡಿದ್ದಾರೆ. ಇದನ್ನು ರಾಜ್ಯಸರ್ಕಾರವು ಒಪ್ಪುತ್ತದೆ. ಇದರಲ್ಲಿ ಸುಮಾರು 75 ಭಾಗ ಕೇಂದ್ರಸರ್ಕಾರದವರು ಅನುದಾನವನ್ನು ಕೊಟ್ಟು 25 ಭಾಗಗಳನ್ನು ರಾಜ್ಯ ತನ್ನ ಸಂಪನ್ಮೂಲಗಳಿಂದ ಭರಿಸಿಕೊಂಡು 27 ಕೋಟಿ ರೂಪಾಯಿಗಳನ್ನು ಖರ್ಚು

ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಈಗ ಇದೆ. ಕೇಂದ್ರ ಸರ್ಕಾರದಲ್ಲಿ ಮತ್ತೆ ಭಿಕ್ಷೆ ಎತ್ತಿಕೊಂಡು ಹೋಗಬೇಕಾದಂಥ ಸ್ಥಿತಿಯಲ್ಲಿಲ್ಲ ಇಂಥ ಸ್ಥಿತಿಯಲ್ಲಿಯೂ ಕೂಡ ರಾಜ್ಯದ ಪರಿಸ್ಥಿತಿಯ ಬಗ್ಗೆ ಸರಿಯಾದ ಮಾಹಿತಿಯನ್ನು ನೀವು ಸಂಗ್ರಹಿಸದಿದ್ದರೆ ಹೆಚ್ಚುವರಿ ಹಣವನ್ನು ಒದಗಿಸಬೇಕು ಎಂದು ಹೇಳಿ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಲಾಗಿದೆ ಎಂದು ಹೇಳಿದರೆ ಅದನ್ನು ಎಲ್ಲಿ ಕೇಳಬೇಕು? The policy document of this Government is the Governor's Address.

ಅಲ್ಲಿ ಹೇಳುವುದಕ್ಕೆ ಸಿದ್ಧ ಇಲ್ಲ ಎಂದು ಹೇಳಿದರೆ ಕೇಂದ್ರಸರ್ಕಾರದಲ್ಲಿ ನಾಳೆ ರಾಜ್ಯದ ಬರ ಪರಿಹಾರ ಕಾಮಗಾರಿಗಳ ಪರವಾಗಿ ಅರ್ಜಿಯನ್ನು ತೆಗೆದುಕೊಂಡು ಹೋದರೆ ಅದನ್ನು ಅಲ್ಲಿ ಯಾವ ರೀತಿ ಒಪ್ಪಿಸುತ್ತೀರಿ? ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳದೇ ಇರತಕ್ಕಂಥ ದೋಷವನ್ನು ಕೇಂದ್ರ ಸರ್ಕಾರಕ್ಕೆ ಬರ ಪರಿಹಾರಕ್ಕಾಗಿ ಹೆಚ್ಚು ಹಣವನ್ನು ಕೊಡಿ ಎಂದು ಹೋದಾಗ ನೀವು ಏತಕ್ಕೆ ಈ ಮಾತನ್ನು ಹೇಳಲಿಲ್ಲವೆಂದು ಹೇಳಿದರೆ ನಿಮ್ಮ ಉತ್ತರವೇನು ಇದು ಸರ್ಕಾರದ ಜವಾಬ್ದಾರಿಯಲ್ಲವೆ? ಆದುದರಿಂದ ನಾವು ಪ್ರತಿಭಟನೆ ಮಾಡಬೇಕಾಯಿತು. ಇನ್ನು ಒದಗಿಸದೆ ಇರತಕ್ಕಂಥ ಹಣದ ವಿವರಕ್ಕೆ ನಾನು ಹೋಗುವುದಕ್ಕೆ ಮುಂಚೆ ಮಾನ್ಯ ಅಧ್ಯಕ್ಷರೆ ನಾನು ಇವತ್ತು ಪತ್ರಿಕೆಗಳಲ್ಲಿ ನೋಡುತ್ತಿದ್ದೇನೆ.

ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರು ಒಂದು ಹೇಳಿಕೆಯನ್ನು ಕೊಡುತ್ತಾರೆ ಬರಗಾಲ ಪರಿಹಾರಕ್ಕೆ ಸರ್ಕಾರ ಮಂಡ್ಯ ಜಿಲ್ಲಾ ಪರಿಷತ್‌ಗೆ ರೋಜಗಾರ್ ಬಾಬ್ತು 30 ಲಕ್ಷ ರೂಪಾಯಿಗಳನ್ನು ಜಿಲ್ಲೆಗೆ ವರ್ಗಾಯಿಸಿದೆ ಕುಡಿಯುವ ನೀರಿನ ಕಾಮಗಾರಿಗೆ 24 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇಲ್ಲಿಯೂ ಕೂಡ ಜವಾಹರ್ ರೋಜಗಾರ್ ಯೋಜನೆ ರಾಷ್ಟ್ರೀಯ ನೀರು ಯೋಜನೆಗಳ ನಿಧಿ ಅಭಾವ ಪರಿಹಾರಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ಒದಗಿಸಲಾಗಿದೆ. ಇದನ್ನು ಮಾತ್ರ ಹೇಳುತ್ತೇನೆ. ಪ್ರತಿ ಜಿಲ್ಲೆಯ ಜಿಲ್ಲಾ ಪರಿಷತ್ತುಗಳಿಂದ ಜವಹರ್ ರೋಜಗಾರ್ ಯೋಜನೆಯ ಹಣವನ್ನು ಸರ್ಕಾರ ವಾಪಸ್ಸು ಪಡೆದುಕೊಂಡಿದೆ ಎನ್ನುವ ಮಾತನ್ನು ಜಿಲ್ಲಾ ಪರಿಷತ್ತಿನ ಪ್ರತಿಯೊಬ್ಬ ಅಧ್ಯಕ್ಷರೂ ದೂರಿದ್ದಾರೆ ಈ ವಿಷಯವನ್ನು ತಮ್ಮ ಮುಖಾಂತರ ಸದನದ ಗಮನಕ್ಕೆ ತರಬಯಸುತ್ತೇವೆ. ಈ ಹಣವನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುವುದಕ್ಕಾಗಲೀ ಬರ ಪರಿಹಾರ ಕಾಮಗಾರಿಗಳಿಗೆ ಖರ್ಚು ಮಾಡುವುದಕ್ಕಾಗಲೀ ಬರುವುದಿಲ್ಲ ಇದು ರಾಜ್ಯಾಂಗದ ಆದೇಶ ಇಂಥ ಹಣವನ್ನು ಖರ್ಚು ಮಾಡಿದರೆ ಇದಕ್ಕೆ ಯಾರು ಜವಾಬ್ದಾರರು? This is a gross financial mistake gross error. ನಾನು ಇದನ್ನು ಗ್ರಾಸ್ ಇರ್ರೆಗ್ಯುಲ್ಯಾರಿಟಿ ಎಂದು ಹೇಳುತ್ತೇನೆ. ಈ ಹಣಕ್ಕೆ ಮಾರ್ಟ್‌ಗೇಜ್ ಇದೆ. ಆದ್ದರಿಂದ ಈ ಹಣವನ್ನು ಬೇರೆ ಕೆಲಸಗಳಿಗೆ ಖರ್ಚು ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ರಾಜ್ಯಾಂಗ 282 ವಿಧಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಯಾವುದೇ ಸರ್ಕಾರ ಕೇಂದ್ರ ಸರ್ಕಾರದಲ್ಲಿ ರಾಜ್ಯ ಸರ್ಕಾರವಿರಲಿ ಯಾವ ರೀತಿ ಹಣ ಬಿಡುಗಡೆ ಮಾಡಬಹುದು ಜವಹರ್ ರೋಜಗಾರ್ ಯೋಜನೆಯ ಹಣ ಕೇಂದ್ರ ಸರ್ಕಾರದ ಹಣ. ಈ ಹಣವನ್ನು ರಾಜ್ಯಗಳಿಗೆ ಅಥವಾ ಮಂಡಲಿಗಳಿಗೆ ಅಥವಾ ಜಿಲ್ಲಾ ಪರಿಷತ್ತುಗಳಿಗೆ ನೇರವಾಗಿ ಕೊಡುವಂಥ ಅಧಿಕಾರ ರಾಜ್ಯಾಂಗ 282 ನೆಯ ವಿಧಿ ಪ್ರಕಾರ ಇದೆ. I quote Article 282 for your kind consideration.

"282. Expenditure defrayable by the Union or a State out of its revenues The Union or a State may make any grants for any public purpose, notwithstanding that the purpose is not one with respect to which parliament or the Legislature of the State, as the case may be, may make laws."

ಏತಕ್ಕೆ ಕೊಡುತ್ತಾರೆ. ಅದನ್ನು ಅವರು ಹೇಳುತ್ತಾರೆ. Notwithstanding the power. the central Government gives money . This article provides that the spending power of the Union or the State Legislature is not limited to the legislative powers conferred upon it. In other words though the list in the 7th schedule defines the legislative powers of the Union and the States.

ಹೀಗೆ ಅವರು ಹಣವನ್ನು ರಾಜ್ಯಾಂಗ 282ನೆಯ ವಿಧಿಯ ಪ್ರಕಾರ ಕೊಡುವಾಗ ಒಂದು ಡೈರೆಕ್ಟೀವ್ ಕೊಡುವುದಕ್ಕೆ ಅವಕಾಶ ಇದೆ. ಇದನ್ನು ಅರ್ಟಿಕಲ್ 256ರಲ್ಲಿ ಹೇಳುತ್ತಾರೆ. ಆ ಡೈರೆಕ್ಟೀವ್‌ನಲ್ಲಿ ಹೇಳಿರತಕ್ಕಂಥ ಕೆಲಸಗಳಿಗೆ ಮಾತ್ರ ಈ ಹಣವನ್ನು ಖರ್ಚು ಮಾಡಲು ಬರುತ್ತದೆ. ಅದನ್ನು ಬಿಟ್ಟು ಬೇರೆಯದಕ್ಕೆ ಖರ್ಚು ಮಾಡುವುದಕ್ಕಾಗಲೀ ವಿಥ್‌ಡ್ರಾ ಮಾಡುವುದಕ್ಕಾಗಲಿ ಸರ್ಕಾರಕ್ಕೆ ಅಧಿಕಾರವಿಲ್ಲ. What is the directive under Article 256, I will read: "Obligation of States & the union."

"The executive power of every State shall be so exercised as to ensure compliance with the laws made by parliament and any existing laws which apply in that State, and the executive power of the Union shall extend to the giving of such directions to a State as may appear to the Government of India to be necessary for that purpose".

ನಮಗೆ ಇರತಕ್ಕ 282 ರಾಜ್ಯಾಂಗದ ವಿಧಿಯ ಅಧಿಕಾರವನ್ನು ಒಂದು ಡೈರೆಕ್ಟೀವ್ ಎಂದು ಕೊಟ್ಟು ರಾಜ್ಯಕ್ಕೆ ಈ ರೀತಿ ಹಣವನ್ನು ಖರ್ಚು ಮಾಡಿ ಎಂದು ಮಾರ್ಗದರ್ಶನವನ್ನು ಆರ್ಟಿಕಲ್ 256ರಲ್ಲಿ ಕೊಡುತ್ತಾರೆ. ಜವಹರ್ ರೋಜಗಾರ್ ಯೋಜನೆ ಮ್ಯಾನ್ಯುಯಲ್‌ನಲ್ಲಿ ಕೇಂದ್ರಸರ್ಕಾರದ ಡೈರೆಕ್ಟೀವ್ಸ್ ಏನು ಎಂದು ಪ್ರತಿವರ್ಷಕ್ಕೆ ಒಂದೊಂದು ರೀತಿಯ ನಿರ್ದೇಶನ ಮಾರ್ಗದರ್ಶನ ಹಾಕುತ್ತಾರೆ. No less than the then prime Minister of India Sri Rajiv Gandhi himself made broad outlines and the objectives of the Jawahar Rojgar Yojana I quaote the JRY manual of 1989. Also, the speech of the Prime Minister while introducing this programme on the floor of the House in Parliament:

"The rural unemployment and under Ëmployment which particularly affects poorest segments of the rural population have been mapjor contributing factors to the high incidence of poverty in the rural areas notwithstanding the economic development during the past four decades. In the sixth five year plan alluviation of the rural poverty as one of the main objectives, the strategy adopted aimed at redistribution of income and consumption in favour of the poorer sections of the population by significantly increasing the employment opportunities in the rural areas. This is the purpose for which the money is earmarked. Then, NREP was started in October 1982 to achieve this objective. The food for work programme became part of the sixth five year plan from 1.4.82.

What are the directives and objectives have also been mentioned.

Primary objective: Ganeration of gainful employment for unemployed and underemployed persons both men and women in the rural areas......

Secondary objective: Creation of productive community assets for direct and continuing benefigs to the poverty groups and to strengthen rural economic and social infrastructure which will lead to the rapid growth of rural economy and steady raise in the income levels of the rural poor and improvement of overall quality of the life in the rural areas."

ಇಲ್ಲಿ ಟಾರ್ಗೆಟ್ ರೂಟ್ಸ್ ಏನು? ಇಲ್ಲಿ ರಿಸೋರ್ಸ್ ಏನು ಎಲ್ಲವನ್ನು ಡಿಸ್ಕಸ್ ಮಾಡಿ ಪ್ರತಿ ವರ್ಷ ಒಂದೊಂದು ಪುಸ್ತಕ ಬರೆಯುತ್ತಾರೆ. ಹಾಗೆಯೇ 1990ರಲ್ಲಿಯೂ ಕೂಡ ಇಂಥಾದ್ದೇ ಒಂದು ಮ್ಯಾನ್ಯುಯಲ್ ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿ ಆ ಡೈರೆಕ್ಟೀವ್ಸ್ ಹೇಳಿದ್ದಾರೆ. ಇದನ್ನು ಏತಕ್ಕೆ ನೇರವಾಗಿ ಮಾತನಾಡುತ್ತೇನೆ ಎಂದು ಹೇಳಿದರೆ ಯಾವ ಯಾವ ಜಿಲ್ಲೆಯಲ್ಲಿ ಮಳೆ ಬಾರದೆ ದೊಡ್ಡ ಪ್ರಮಾಣದ ಕ್ಷಾಮ ಇದೆ ಆ ಜಿಲ್ಲೆಯ ಮಟ್ಟಿಗೆ ಫಂಡ್ ಸಿಮಿತಗೊಳಿಸುವುದಕ್ಕೆ ಸಾದ್ಯವಿಲ್ಲ.

ಈಗ 5 ಜಿಲ್ಲೆಗಳನ್ನು ಇವರು ಗುರುತಿಸಿದ್ದಾರೆ. ಇಲ್ಲಿ ಕ್ಷಾಮ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆ ಜಿಲ್ಲೆಯ ದುಡ್ಡನ್ನು ನೀವು ವಿತ್‌ಡ್ರಾ ಮಾಡಿ ಕ್ಷಾಮ ಇರಕ್ಕಂಥಾದಕ್ಕೆ ಡೈವರ್ಟ್ ಮಾಡತಕ್ಕಂಥ ಅಧಿಕಾರ ನಿಮಗೆ ಇಲ್ಲ So this becomes a gross financial irregularity. ನಾನು ಅದಕ್ಕಾಗಿಯೇ ರಾಜ್ಯಾಂಗವನ್ನು ಓದತಕ್ಕ ಸ್ಥಿತಿಯಲ್ಲಿ ತಪ್ಪಾಗಿರಬಹುದೆಂದು ಹೇಳಿ, ರಾಜ್ಯ ಸರ್ಕಾರದ ಏಜೀಸ್ ಆಫೀಸಿಗೆ ಫೋನ್ ಮಾಡಿ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. They say the funds alloted to this head cannot be diverted to any other scheme without Government of India's permission. ನಿಮ್ಮ ಈ ಖರ್ಚು ವೆಚ್ಚಗಳನ್ನು ಲೆಕ್ಕಾಚಾರ ಮಾಡಿ ನೋಡತಕ್ಕವರು ಯಾರು ಇದ್ದಾರೆ, ಅವರ ಮಾತು ಇದು. ಇಂತಹ ಗ್ರಾಸ್ ಇರೆಗ್ಯುಲ್ಯಾರಿಟೀಸ್ ಮಾಡಿ, ನಾವು ಸ್ವಲ್ಪ ಹಣವನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಿದ್ದೇವೆ., ಬರಪರಿಹಾರಕ್ಕಾಗಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರೆ ಈ ರೀತಿಯಲ್ಲಿ ವೆಚ್ಚ ಮಾಡತಕ್ಕ ಪ್ರಯತ್ನವನ್ನು ಏನು ಮಾಡಿದ್ದೀರಿ, ಇದು ಜಿಲ್ಲಾ ಪರಿಷತ್ತಿನ ಅಧಿಕಾರವನ್ನು ಹರಣ ಮಾಡತಕ್ಕದ್ದು ಮತ್ತು ಆರ್ಥಿಕ ಸಾಮರ್ಥ್ಯವನ್ನು ಕಿತ್ತುಕೊಳ್ಳತಕ್ಕ ಪ್ರಯತ್ನವೇ ಹೊರತು ನೀವು ಬರಪರಿಹಾರ ಕೊಡಬೇಕು ಎನ್ನತಕ್ಕಂಥ ದೀರ್ಘವಾದ ಆಲೋಚನೆಯಿಂದ ಇದು ಬಂದಂಥದ್ದಲ್ಲ.

ಜವಾಹರ್ ರೋಜ್‌ಗಾರ್ ಯೋಜನೆಯ ದುಡ್ಡು ಇದೆ. ಮಂಡಲದವರನ್ನು ಕೇಳಿದರೆ ನಮ್ಮ ದುಡ್ಡನ್ನು ಜಿಲ್ಲಾ ಪರಿಷತ್‌ನವರು ವಿತ್‌ಡ್ರಾ ಮಾಡಿದ್ದಾರೆಂದು ಹೇಳುತ್ತಾರೆ. ಡಿ.ಸಿ.ಯವರನ್ನು ಕೇಳಿದರೆ ಈ ಹಣವನ್ನು ಇನ್ನು ಕುಡಿಯುವ ನೀರಿಗೆ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇದರಿಂದಾಗಿ ಅರ್ಧಂಬರ್ಧ ಕುಡಿಯುವ ನೀರಿನ ಯೋಜನೆಗಳು ಗ್ರಾಮಾಂತರ ಪ್ರದೇಶದಲ್ಲಿ ಆಗಿವೆ.

ಈ ಕೆಲಸಗಳನ್ನು ಜಿಲ್ಲಾ ಪರಿಷತ್‌ನವರು ಮಾಡುವಂತಿಲ್ಲ. ಅರ್ಧಂಬರ್ಧ ಕಟ್ಟಿದ್ದಂಥ ಮನೆಗಳನ್ನು ಇವರು ಪೂರ್ತಿ ಮಾಡುವಂತಿಲ್ಲ. ಜವಾಹರ್ ರೋಜ್ ಗಾರ್ ಯೋಜನೆಯಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಏನು ಪ್ರಾರಂಭ ಮಾಡಿದ್ದಾರೆ ಅವು ಅರ್ಧಕ್ಕೆ ನಿಂತಿವೆ. ಈಗಾಗಲೇ ನಾವು ಮಾರ್ಚಿ ತಿಂಗಳಿನಲ್ಲಿದ್ದೇವೆ. ಇನ್ನು 3-4 ತಿಂಗಳಿಗೆ ಹಣ ಬೇಕೆಂದರೆ ಎಲ್ಲಿಂದ ತರುವುದು? ಈಗ ಮಿಸ್ ಅಪ್ಲಿಕೇಷನ್ ಆಫ್ ಫಂಡ್ಸ್ ಮಾತ್ರವಲ್ಲ ಮಿಸ್ ಅಪ್ರೋಪ್ರಿಯೇಷನ್ ಆಫ್ ಫಂಡ್ಸ್ ಪ್ಲಸ್ ಇರ್‍ರೆಗ್ಯುಲ್ಯಾರಿಟೀಸ್ ಕೂಡ ಆಗಿದೆ. ಈ ಸರ್ಕಾರ ಜನರಿಗೆ ಸಮಾಧಾನ ಮಾಡುವುದಕ್ಕೆ ಏನು ಹೊರಟಿದೆ ಇದನ್ನು ನಾನು ಅತ್ಯಂತ ಉಗ್ರವಾಗಿ ಪ್ರತಿಭಟನೆ ಮಾಡುತ್ತೇನೆ. ನಾನು ಅನೇಕ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ನೋಡಿದ್ದೇನೆ. ಈ

ಸರ್ಕಾರಕ್ಕೆ ಕೈ ಮತ್ತು ಜೇಬು ಬಿಟ್ಟರೆ ಕಣ್ಣಿಲ್ಲ, ಕಿವಿಯಿಲ್ಲ, ಊರಿಗೆ ಹೋದರೆ ತಾನೆ ಏನಾದರೂ ಕಾಣಿಸುವುದು, ಹೋಗದಿದ್ದರೆ ಏನು ಕಾಣಿಸುತ್ತದೆ? ನಾನು ಧಾರವಾಡ ಜಿಲ್ಲೆಯ ಅನೇಕ ತಾಲೂಕುಗಳಿಗೆ ಹೋಗಿದ್ದೆ. ಅಲ್ಲಿ ನೋಡಿದರೆ ಹೃದಯ ವಿದ್ರಾವಕ ದೃಶ್ಯ. ಕುಡಿಯುವ ನೀರು ಜನರಿಗೂ ಇಲ್ಲ, ಜಾನುವಾರುಗಳಿಗೂ ಇಲ್ಲ. ಹಾಗಾದರೆ ಅವರಿಗ್ಗೆ ಏನು ವ್ಯವಸ್ಥೆ? ನಾನು ಅಲ್ಲಿ ಹೋದಾಗ ನಮ್ಮ ಅಧಿಕಾರಿಗಳು ಕೊಟ್ಟಂಥ ಮಾಹಿತಿಯ ಮೇಲೆ ಪ್ರತಿಯೊಂದು ತಾಲ್ಲೂಕಿಗೂ ಹೋಗಿ ನೋಡಿದ್ದೇನೆ. ನಮಗೆ ಬಿಡುಗಡೆ ಮಾಡಿದ್ದಂಥ ಹಣವನ್ನೆಲ್ಲಾ ಖರ್ಚು ಮಾಡಿದ್ದೇವೆ, ಇನ್ನು ಖರ್ಚು ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ. ಪ್ರತಿಯೊಂದು ತಾಲೂಕಿನಲ್ಲೂ ಜನರ ಸ್ಥಿತಿಗತಿಗಳನ್ನು ನೋಡಿ ಬಂದಿದ್ದೇನೆ. ಪತ್ರಿಕೆಗಳಲ್ಲಿ ಆ ಜನರ ಫೋಟೋ ಕೂಡ ಬಂದಿವೆ. ಗದಗ ತಾಲ್ಲೂಕು ಬರಪೀಡಿತ ಪ್ರದೇಶ ಎಂದು ಅವರು ಅಲ್ಲಿ ಪ್ರತಿಭಟನೆ ಮಾಡುತ್ತಾರೆ. ಅಲ್ಲಿನ ರೈತರಿಂದ ಮತಪ್ರದರ್ಶನ ಆಗುತ್ತದೆ. ನವಲಗುಂದ, ಮುಂಡರಗಿ, ನರಗುಂದ, ರೋಣ ಮುಂತಾದ ತಾಲ್ಲೂಕುಗಳಿಗೆ ಹೋದಾಗ ಆ ಜನರು ಕೊಟ್ಟಿರತಕ್ಕ ಮನವಿಗಳ ಬಗ್ಗೆ ಹೇಳುತ್ತೇನೆ. ನಾನು ವಿವರಗಳಿಗೆ ಹೋಗುವುದಿಲ್ಲ. ನೀವು ಕೊಟ್ಟಿರತಕ್ಕ ಹಣವನ್ನು ಅವರು ಖರ್ಚು ಮಾಡಿದ್ದಾರೆ. ಆದರೆ ಇನ್ನು ಮುಂದೆ ಖರ್ಚು ಮಾಡುವುದಕ್ಕೆ ಅವರಿಗೆ ಹಣವಿಲ್ಲವಂತೆ. ನಾನಾದರೂ ತಮ್ಮನ್ನು ಕೇಳುತ್ತೇನೆ, ನೀವು ಯಾವ ಯಾವ ಬಾಬಿಗೆ ಹಣವನ್ನು ಬಿಡುಗಡೆ ಮಾಡಿದ್ದೀರೆಂಬುದನ್ನು ತಿಳಿಸಬೇಕು. ನನಗೆ ಬಂದಿರತಕ್ಕಂಥ ಮಾಹಿತಿಯನ್ನು ಕೊಡುತ್ತೇನೆ. ತಾಲ್ಲೂಕ್ ವೈಸ್ ವಿವರಗಳನ್ನು ಕೊಡುವುದಕ್ಕೆ ನಾನು ಈಗ ಹೋಗುವುದಿಲ್ಲ. ಜನರು ಮುಖ್ಯವಾಗಿ ಏನು ಕೇಳುತ್ತಾರೆ ಎಂಬುದಕ್ಕೆ ಒಂದು ಮನವಿಯನ್ನು ಉದಾಹರಣೆಗೆ ತಮ್ಮ ಗಮನಕ್ಕೆ ತಂದರೆ ಬಹುತೇಕ ಎಲ್ಲಾ ವಿಷಯಗಳೂ ತಮಗೆ ಮನವರಿಕೆಯಾಗುತ್ತವೆಂದು ಭಾವಿಸುತ್ತೇನೆ.

ಅದು ಈ ರೀತಿ ಇದೆ. ಮಾನ್ಯ ಚಂದ್ರೇಗೌಡರಿಗೆ ಸಾವಳ್ಗಿ ನೊಂದ ರೈತ ಕಾರ್ಮಿಕರು ಮತ್ತು ಕೂಲಿಕಾರರು ಬರಗಾಲದಲ್ಲಿ ಸಿಕ್ಕಿ ತತ್ತರಿಸುವ ಕುರಿತು:

"ಮಾನ್ಯರೇ, ನವಲಗುಂದ ತಾಲ್ಲೂಕು ಸಾವಳ್ಗಿ ಮತ್ತು ಗುರಹಟ್ಟಿ ಶಿಲವಡಿ ಗ್ರಾಮದ ಮತ್ತು ಸುತ್ತ ಮುತ್ತ ಮುಂಗಾರಿ ಮತ್ತು ಹಿಂಗಾರಿ ಮಳೆ ಇಲ್ಲದೆ ಭೂಮಿಯಲ್ಲಿ ಯಾವುದೇ ಬೆಳೆ ಇರುವುದಿಲ್ಲ.

ಮುಂಗಾರಿಯಲ್ಲಿ ಬಿತ್ತಿದ ಬೀಜ ಗೊಬ್ಬರಗಳನ್ನು ಕಳೆದುಕೊಂಡು ನಾವು ಕಂಗಾಲಾಗಿದ್ದೇವೆ. ಹಿಂಗಾರಿ ಬಿತ್ತುವಾಗ ಸ್ವಲ್ಪ ತುಂತುರು ಮಳೆಯಾಗಿದೆ. ಕಡಲೆ ಮುಂತಾದ ಕಿಮ್ಮತ್ತಿನ ಬೀಜಗಳನ್ನೂ ಕೂಡ ಬಿತ್ತಿದ್ದೇವೆ. ಆದರೆ ಹುಟ್ಟಿಲ್ಲ. ಹೀಗಾಗಿ ಜನರ ಕೈಲಿದ್ದ ಹಣ ಮತ್ತು ಬೀಜವನ್ನು ಕಳೆದುಕೊಂಡಿದ್ದೇವೆ. ನಾವು ಬಹಳ ತ್ರಾಸದಲ್ಲಿದ್ದೇವೆ. ಜಾನುವಾರುಗಳಿಗೆ 2-3 ತಿಂಗಳಿಂದ ಮೇವು, ಗರಿಕೆ ಇರುವುದಿಲ್ಲ ಎಂದು ಹೇಳಿದ್ದಾರೆ. ನಾವು ಜಾನುವಾರುಗಳನ್ನು ಮಾರಿದ್ದೇವೆಂದು ಹೇಳಿದ್ದಾರೆ." ನಾನು ಶಿಲವಡಿಯ ಒಂದು ಸಂತೆಗೆ ಹೋಗಿದ್ದೆ. ಅಲ್ಲಿಗೆ ಜಾನುವಾರುಗಳನ್ನು ತಂದಿದ್ದರು. ಇದು ಜಾನುವಾರು ಜಾತ್ರೆಯೇ ಎಂದು ನಾನು ಅವರನ್ನು ಕೇಳಿದ್ದಕ್ಕೆ ಇದು ಜಾನುವಾರು ಜಾತ್ರೆ ಅಲ್ಲ, ಇದು ಸಂತೆ ಎಂದರು. ಹಾಗಾದರೆ ಈ ಜಾನುವಾರುಗಳನ್ನು ಏತಕ್ಕೆ ತಂದಿದ್ದೀರಿ ಎಂದು ಕೇಳಿದಾಗ ಅವರು ಹೇಳಿದರು, ಈ ಜಾನುವಾರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಮೇವಿಲ್ಲ, ಆದ್ದರಿಂದ ಪ್ರತಿಯೊಂದನ್ನೂ ಕಟುಕರ ಅಂಗಡಿಗೆ ಕೊಡುವ ಸಲುವಾಗಿ ತಂದಿದ್ದೇವೆಂದು ಹೇಳಿದರು.

ನಮ್ಮ ಸರ್ಕಾರ, ಹಿಂದಿನ ಸರ್ಕಾರದವರು ಅನೇಕ ಕಾಮಗಾರಿಗಳನ್ನು ಹಮ್ಮಿಕೊಂಡಿದ್ದರು. ಫಾಡರ್ ಬ್ಯಾಂಕ್ ಮೇವು ಬ್ಯಾಂಕಿನ ವ್ಯವಸ್ಥೆಯನ್ನು ಮಾಡಿದ್ದರು. ಗೋಶಾಲೆಗಳನ್ನು ತೆಗೆದಿದ್ದರೂ, ಅಲ್ಲಲ್ಲಿ ಗಂಜಿಕೇಂದ್ರಗಳನ್ನು ತೆರೆದಿದ್ದರು. ಸಾಯಿಲ್ ಕನ್‌ಸರ್‌ವೇಶನ್

ಪ್ರೋಗ್ರಾಮ್ ನ್ನು ಬಹಳ ದೊಡ್ಡ ಪ್ರಮಾಣದಲ್ಲಿ ನಡೆಸಿದ್ದರು. ಎಂಪ್ಲಾಯ್‌ಮೆಂಟ್ ಜನರೇಶನ್ ಕಾಮಗಾರಿಗಳನ್ನು ನಡೆಸಿದ್ದರು. ಈಗ ತಾವು ಎಲ್ಲಿಯಾದರೂ ಒಂದು ಫಾಡರ್ ಬ್ಯಾಂಕ್ ಮಾಡಿದ್ದೀರಾ? ಅಧಿಕಾರಿಗಳನ್ನು ಕೇಳಿದರೆ, ಇವರು ತರಿತ್ತೇವೆಂದರೆ ಆಡಳಿತಾತ್ಮಕ ಒಪ್ಪಿಗೆಯನ್ನು ಸರ್ಕಾರದವರು ಕೊಡಬೇಕು. ಹೊಟ್ಟೆಗೆ ಹಿಟ್ಟಿಲ್ಲದಿರತಕ್ಕಂಥ ಕಾಲದಲ್ಲಿ ಫಾಡರನ್ನು ಹೇಗೆ ಕೊಂಡು ಕೊಳ್ಳುವುದು? ಅದಕ್ಕೆ ಆಡಳಿತಾತ್ಮಕ ವೆಚ್ಚವನ್ನು ಸರ್ಕಾರದವರು ಕೊಡಬೇಕಾಗುತ್ತದೆ. ಅದನ್ನು ಕೊಂಡು ಕೊಳ್ಳುವುದಕ್ಕೆ ಅವರಲ್ಲಿ ದುಡ್ಡಿಲ್ಲದಿರುವಾಗ ಸಾಗಾಣಿಕೆ ವೆಚ್ಚವನ್ನು ಅವರೇ ಕೊಡಬೇಕು.

ಸಾಗಾಣಿಕೆ ವೆಚ್ಚವೆಂದು 200 ರೂಪಾಯಿಗಳನ್ನು ಸರ್ಕಾರದವರು ನಿಗದಿ ಮಾಡಿದ್ದಾರೆ. 200 ಕಿಲೋಮೀಟರ್ ದೂರದಿಂದ ತರಬೇಕಾದರೆ 500-600 ರೂಪಾಯಿಗಳವರೆಗೆ ವೆಚ್ಚ ಬರುತ್ತದೆ. 600 ರೂಪಾಯಿಗಳನ್ನು ಅವರು ಎಲ್ಲಿಂದ ತರಬೇಕು? ಒಂದು ಕಡೆ ಫಾಡರ್ ಬೆಲೆ ಕೊಟ್ಟು ಕೊಂಡು ಕೊಳ್ಳೋಣವೆಂದರೆ ಇನ್ನೊಂದು ಕಡೆ ಟ್ರಾನ್ಸ್‌ಪೋರ್ಟೇಶನ್ ಖರ್ಚನ್ನು ಕೊಡಬೇಕು. ಆದ್ದರಿಂದ 3-4 ಹಳ್ಳಿಗಳಿಗೆ ಒಂದು ಫಾಡರ್ ಬ್ಯಾಂಕ್‌ನ್ನು ಮಾಡಿ, ಪ್ರತಿ ಹಳ್ಳಿಗೂ ಫಾಡರ್ ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನವನ್ನು ಮಾಡಿ. ಹಿಂದೆ ಗೋಶಾಲೆಗಳನ್ನು ಮಾಡಿದ್ದರಿಂದ ಲಕ್ಷಾಂತರ ಜಾನುವಾರುಗಳನ್ನು ಕಾಪಾಡುವುದಕ್ಕೆ ಸಾಧ್ಯವಾಯಿತು. ಅದೇ ರೀತಿಯಲ್ಲಿ ಒಂದೊಂದು ಹಳ್ಳಿಯಲ್ಲೂ ಗೋಶಾಲೆಯನ್ನು ತೆರೆದು ಆ ಗೊಶಾಲೆಯ ಪಕ್ಕದಲ್ಲಿಯೇ ಬೋರ್ ವೆಲ್ ಗಳನ್ನು ತೆಗೆದು ನೀರನ್ನು ಒದಗಿಸಕತಕ್ಕಂಥ ಪ್ರಯತ್ನವನ್ನು ಮಾಡಬೇಕು. ಈ ಗೋಶಾಲೆಯನ್ನು ಮಾಡುವುದರಿಂದ ಜನರಿಗೆ ಸ್ವಲ್ಪ ತೊಂದರೆಯಾಗುತ್ತದೆಂದು ಹೇಳುತ್ತಾರೆ. ಸರಿಯಾಗಿ ಅದರ ಯೋಗಕ್ಷೇಮವನ್ನು ನೋಡಿಕೊಳ್ಳುವುದಿಲ್ಲ, ಜಾನುವಾರುಗಳನ್ನು ಅದರ ವಾರಸುದಾರರು ನಾವು ಎಂದು ಗುರುತಿಸುವುದು ಕಷ್ಟವಾಗುತ್ತದೆಂದೂ ಹೇಳುತ್ತಾರೆ. ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ.

ಇನ್ನು ತಕಾವಿ ಸಾಲದೆಂದು ಹಣವನ್ನು ಕೊಡುತ್ತಾರೆ. ಆ ರೀತಿ ಕೊಟ್ಟ ಸಾಲದ ಹಣವನ್ನು ಮರುಪಾರತಿ ಮಾಡಬೇಕಾಗುತ್ತದೆ. ಸಾಯಲ್ ಕನ್‌ಸರ್ವೇಶನ್ ಪ್ರೋಗ್ರಾಮ್ ಎಂದು ಹಿಂದೆ ಮಾಡಿದಂಥ ಬರಪರಿಹಾರ ಕಾಮಗಾರಿಗಳ ಬಗ್ಗೆ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಹಣ ವಾಪಸ್ ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ರೈತರು ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಅವರಿಗೆ ಸಹಾಯ ಮಾಡದೆ ಸಾಲದ ಹಣವನ್ನು ವಾಪಸ್ ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಇದರಿಂದಾಗಿ ಅವರಿಗೆ ಮತ್ತಷ್ಟು ತೊಂದರೆ ಕೊಟ್ಟಂತಾಗುತ್ತದೆ. ಆದ್ದರಿಂದ ಜಾನುವಾರುಗಳಿಗೆ ಮೇವನ್ನು ಒದಗಿಸುವುದರ ಜೊತೆಗೆ ಅವರಿಗೆ ತಕಾವಿ ಸಾಲವೆಂದು ಕೊಡಿ. ಹಳ್ಳಿಗಳಲ್ಲಿ ರೈತರು ಬಹಳ ಪ್ರಾಮಾಣಿಕರಾದವರು ಇರುತ್ತಾರೆಂದು ತಾವೇ ಹೇಳುವಾಗ ಅವರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಜನಜೀವನ ಸಾಗಿಸಲು ಒಂದು ಒಂದೂವರೆ ತಿಂಗಳಿಂದ ಬಹಳ ಬರದಿಂದಿರುವ ಕಾರಣ ಬಡಜನರು ಧಾರವಾಡ, ಗೋವಾ ಮತ್ತು ಕಾರವಾರಗಳಿಗೆ ತಮ್ಮ ಜೀವನವನ್ನು ಸಾಗಿಸಿಕೊಳ್ಳಲು ಅಂದರೆ ದುಡಿಮೆಗೆ ಉಣಲು, ಉಡಲು ತಮ್ಮ ಮಕ್ಕಳು ಮರಿಗಳನ್ನು ಕಟ್ಟಿಕೊಂಡು ವಲಸೆ ಹೋಗಿದ್ದಾರೆ. ಅದರಲ್ಲೂ ಧಾರವಾಡ ಜಿಲ್ಲೆಯಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ಇದು ನಡೆದಿರುತ್ತದೆ.

ಒಂದು ತಾಲ್ಲೂಕಿನಲ್ಲಿ ಒಂದು ಜಾಗ ಬಿಟ್ಟರೆ ಅಥವಾ ಇನ್ನೊಂದು ತಾಲ್ಲೂಕಿನಲ್ಲಿ ಸ್ವಲ್ಪ ಭಾಗವನ್ನು ಬಿಟ್ಟರೆ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಇಂಥ ಒಂದು ಪರಿಸ್ಥಿತಿಯನ್ನು ನೋಡಬಹುದಾಗಿದೆ. ಒಟ್ಟಾರೆ ಧಾರವಾಡ ಎಲ್ಲಾ ತಾಲ್ಲೂಕುಗಳು ತೊಂದರೆಗೆ ಒಳಗಾಗಿದೆ ಎಂದು ಹೇಳಬೇಕಾಗುತ್ತದೆ. ಹಾಗೆಯೇ ಮೈಸೂರು ಜಿಲ್ಲೆಯಲ್ಲಿ ನೀವೇ ಒಪ್ಪಿಕೊಂಡಿರುವ ಹಾಗೆ 18 ಜಿಲ್ಲೆಗಳಲ್ಲಿ ಇದೇ ರೀತಿಯ ಪರಿಸ್ಥಿತಿ ಇರುತ್ತದೆ.

ನೀವು ಹೇಳುವುದು ಸತ್ಯವಿರುತ್ತದೆ. ಪ್ರತಿಯೊಂದಕ್ಕೂ ಬೇರೆಯವರ ಅನುಭವನವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಯಾವುದೇ ಒಂದು ಬಾಗದಲ್ಲಿ ಬಾವಿಯನ್ನು ತೆಗೆದರೂ ಅದು 556 ಅಡಿ ಕೆಳಗಡೆ ಹೋದರೆ 300 ಗ್ಯಾಲನ್ ನೀರು ಸಿಗುತ್ತದೆ. ದೇವನಹಳ್ಳಿ ತಾಲ್ಲೂಕಿನಲ್ಲಿ ಬಾವಿಗಳ ಸ್ಥಿತಿ ಹೀಗಾಗಿದೆ. ಹಿಂದೆ ಒಳ್ಳೆಯ ಮಾತನ್ನಾಡಿದ್ದರು, ಗುಜರಾತಿನಿಂದ ಸೈಕ್ಲೋನೆರಿಗ್ಸ್‌ನ್ನು ತರಿಸುತ್ತೇವೆಂದು. ಸೈಕ್ಲೋನೆರಿಗ್ಸ್ ಇಲ್ಲ, ಆರ್ಡಿನರಿ ರಿಗ್ಸ್ ಕೂಡ ಇಲ್ಲ, ಇರುವ ರಿಗ್ಸ್‌ಗಳಲ್ಲಿಯೇ ಬಾವಿಗಳನ್ನು ತೋಡಿಸಿ ಎಂದು ಸರ್ಕಾರದವರು ಹೇಳುತ್ತಾರೆ. ಜಿಲ್ಲಾ ಪರಿಷತ್‌ಗೆ ಹೇಳಿದರೆ ಜಿಲ್ಲಾಧಿಕಾರಿಗಳಿಗೆ ಹೇಳುತ್ತಿರುತ್ತಾರೆ. ಈ ರೀತಿಯಾದ ಒಂದು ದ್ವಂಧ್ವ ಉಂಟಾಗಿರುತ್ತದೆ. ಈ ದ್ವಂಧ್ವವನ್ನು ನಿರ್ಮಾಣ ಮಾಡಿದ್ದೀರಿ. ನಿಮಗೆ ಜಿಲ್ಲಾ ಪರಿಷತ್ತಿನ ಮೇಲೆ ಅಷ್ಟು ಜಿಗುಪ್ಸೆ ಇದ್ದರೆ ಅವುಗಳನ್ನು ಕಿತ್ತು ಹಾಕಿ. ಜನ ನಿಮ್ಮ ಆಡಳಿತದ ದ್ವಂದ್ವವನ್ನು ನೋಡುತ್ತಾ ಕೂರುವುದಕ್ಕಾಗುವುದಿಲ್ಲ. ಜನರಿಗೆ ಮೊದಲು ಕುಡಿಯುವುದಕ್ಕೆ ನೀರು ಬೇಕು. ಜಿಲ್ಲಾ ಪರಿಷತ್ತಿನವರು ಬಾವಿ ತೆಗೆಯುತ್ತಿದ್ದರು ಅದನ್ನು ನಿಲ್ಲಿಸಿದಿರಿ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಜಾಗವನ್ನು ಗುರುತಿಸುವವರು ಯಾರು ಮತ್ತೆ ಹೋಗಬೇಕು, ಮಂಡಲ ಪಂಚಾಯಿತಿಯ ಸದಸ್ಯರನ್ನು ಹಿಡಿದು ಕೊಂಡು ಇಲ್ಲವೇ ಜಿಲ್ಲಾ ಪರಿಷತ್ತಿನ ಸದಸ್ಯರನ್ನು ಹಿಡಿದುಕೊಂಡು. ಜಾಗ ಯಾವುದು ಎಂದು ಅವರನ್ನು ಕೇಳಬೇಕು.

ಶ್ರೀ ಎಂ.ವಿ. ವೆಂಕಟಪ್ಪ : ಅಧಿಕಾರ ಕಿತ್ತು ಹಾಕುವುದಕ್ಕೆ ಆರ್ಡಿನೆನ್ಸ್ ಹೊರಡಿಸಿದರೆ ಅದಕ್ಕೆ ಅವರು ಕೋರ್ಟಿಗೆ ಹೋಗಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ಈ ವಿಕೇಂದ್ರಿಕರಣದಲ್ಲಿ ನಂಬಿಕೆ ಇಲ್ಲ. ನಮಗೆ ಅಧಿಕಾರ ಬೇಕು. ನಮಗೆ ಇರತಕ್ಕ ಅಧಿಕಾರ ಸಾಲದು ಎಂದು ಹೇಳುವುದಾದರೆ ಕೋರ್ಟಿಗೆ ಹೋಗಿರುವುದನ್ನು ವಾಪಸ್ಸು ತೆಗೆದುಕೊಳ್ಳೋಣ.

ಶ್ರೀ ಎಸ್.ಹೆಚ್. ಕೌಜಲಗಿ : ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಹೆಚ್ಚಿಗೆ ಫವರ್ಸ್ ಕೊಟ್ಟಿದ್ದೇವೆಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ : ಕೋರ್ಟಿನಲ್ಲಿರುವ ವಿಚಾರ ಬೇರೆ. ಕೋರ್ಟಿನಲ್ಲಿರುವುದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ಸಿಂಪಲ್ ಮೆಜಾರಿಟಿಯಲ್ಲಿ ತೆಗೆದುಹಾಕತಕ್ಕದ್ದಕ್ಕೆ. ಆದರೆ ಸಂಪೂರ್ಣವಾಗಿ ಜಿಲ್ಲಾ ಪರಿಷತ್ತನ್ನೇ ತೆಗೆದುಹಾಕಬೇಕೆಂದು ಸರ್ಕಾರ ಹೇಳಿಲ್ಲ ಮತ್ತು ಕೋರ್ಟ್ ಮುಂದೆ ಆ ವಿಚಾರ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಡೆಲ್ಲಿಗೆ ಹೋಗಿದ್ದರು, ಕೋರ್ಟಿಗೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಜನತಂತ್ರ ವ್ಯವಸ್ಥೆಯಲ್ಲಿ ಭೀಕರವಾದ ಬರಗಾಲ ಇರುವ ಪರಿಸ್ಥಿತಿಯಲ್ಲಿ ಒಬ್ಬ ಶಾಸಕ ಒಂದು ಒಂದು ಕಾಲು ಲಕ್ಷ ಜನರ ಪ್ರತಿನಿಧಿಯಾಗಿರುತ್ತಾನೆ. ಕೆಲವು ಕಡೆ ಎರಡೂವರೆ ಲಕ್ಷ ಜನಸಂಖ್ಯೆ ಇರುತ್ತದೆ. ಇಷ್ಟು ದೊಡ್ಡ ಕ್ಷೇತ್ರವನ್ನು ಪ್ರತಿನಿಧಿಸುವುದು ನನಗೆ ಸಾಧ್ಯವಾಗುವುದಿಲ್ಲ. ಎಷ್ಟು ಜನ ಬೇರೆಯವರು ಸರ್ವಜ್ಞರು ಇದ್ದಾರೋ ಗೊತ್ತಿಲ್ಲ.

ವಿಕೇಂದ್ರಿಕರಣ ವ್ಯವಸ್ಥೆ ಪ್ರಕಾರ ಗ್ರಾಮ ಪ್ರತಿನಿಧಿ ಇದ್ದರೆ ಗ್ರಾಮದ ಕಷ್ಟ ಗೊತ್ತಾಗುತ್ತದೆ. ಆತ ಎಲ್ಲಿ ಬೋರ್ ವೆಲ್ ಹಾಕಬೇಕೆಂದು ತಿಳಿದಿರುತ್ತಾನೆ. ಆ ಧೃಷ್ಟಿಯಿಂದ ಜಿಲ್ಲಾ ಪರಿಷತ್ತುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಂಥ ಸಂದರ್ಭದಲ್ಲಿ ರಾಜಕಾರಣ ಮಾಡದೆ ಇದ್ದರೆ ಒಳ್ಳೆಯದು. ಜಿಲ್ಲಾ ಪರಿಷತ್ತು ಏನು ಕೆಲಸ ಮಾಡುತ್ತಿತ್ತು ಆ ಕೆಲಸಕ್ಕೆ ನೀವು ಕೈಹಾಕುವುದಕ್ಕೆ ಹೋಗಬೇಡಿ. ಅವರನ್ನು ಬಿಟ್ಟು ಬಿಡಿ. ಮಾನ್ಯ ಕಂದಾಯ ಮಂತ್ರಿಗಳು ಇಷ್ಟು ಹೇಳಿದರೆ ಸಾಕು. ನಾನು ಜಿಲ್ಲಾ ಪರಿಷತ್ತಿನ ಅಧಿಕಾರದಲ್ಲಿ ಪ್ರವೇಶಿಸುವುದಿಲ್ಲ. ಕಂದಾಯ ಇಲಾಖೆಯ ವತಿಯಿಂದ ಏನು ಹಣವನ್ನು ಕೊಡಬೇಕೋ ಅದನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳು ಜಿಲ್ಲಾ ಫರಿಷತ್ತಿನ ಒಪ್ಪಿಗೆ ಪಡೆದು ಕೆಲಸ ಮಾಡಬಹುದೆಂದು ಹೇಳಲಿ.

ಇಲ್ಲದಿದ್ದರೆ ಅವರು ಹೇಗೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ? ಇಲ್ಲಿ ಇನ್ನೊಂದು ಏನಾಗಿದೆ ಎಂದರೆ ಹೊಸದಾಗಿ ಯಾರು ಶಾಸಕರಾಗಿರುತ್ತಾರೆ ಅವರಿಗೆ ತಕ್ಷಣ ಎಲ್ಲಾ ಅಧಿಕಾರ ಬೇಕು. ಏತಕ್ಕೆ ಬೇಕು ಎಂದು ಗೊತ್ತಿಲ್ಲ. ಜನರ ಸಲುವಾಗಿ ಬೇಕಾದರೆ ಯಾವ ಒಬ್ಬ ಶಾಸಕ 20 ವರ್ಷಗಳ ಕಾಲ ಜನರ ಪ್ರತಿನಿಧಿಯಾಗಿ ಕೆಲಸ ಮಾಡಿದ್ದಾನೆ ಅಂಥ ಪ್ರತಿನಿಧಿಗೂ ಪ್ರತಿಯೊಂದು ಗ್ರಾಮದ ಪರಿಚಯ ಇದೆ ಎಂದು ಹೇಳಲು ಸಾಧ್ಯವಿಲ್ಲ. ಅಂಥವರು ಇದ್ದರು. ಅವರೇ ದೇವರಾಜ ಅರಸು ಅವರು. ಅವರು 5 ಸಾವಿರ ಜನರ, 5 ಸಾವಿರ ಕುಟುಂಬಗಳ ಹೆಸರನ್ನು ಹೇಳುತ್ತಿದ್ದರು. ಇವತ್ತು ಅಂಥ ಪ್ರತಿನಿಧಿಗಳು ಯಾರೂ ಇಲ್ಲ.

ಮೊನ್ನೆ ಮೊನ್ನೆ ಬಂದಿರತಕ್ಕವರಿಗೆ ಅಧಿಕಾರ ಬೇಕಾಗಿದೆ. ಇನ್ನೊಬ್ಬರ ಅಧಿಕಾರ ಕಿತ್ತು ಕೊಂಡು ಜನರಿಗೆ ಹಿಂಸೆ ಕೊಟ್ಟು, ಜನರಿಗೆ ಇರತಕ್ಕ ತೊಂದರೆಯನ್ನು ಹೊತ್ತು ಕೊಳ್ಳಲಾರದೆ ಇರುವಂಥ ಕೆಲಸ ಮಾಡುವ ಪ್ರಯತ್ನವನ್ನು ಯಾರೂ ಮಾಡಬೇಡಿ. ಇನ್ನು ಇವತ್ತು ಎಷ್ಟು ಪರಿಹಾರ ಕೊಟ್ಟಿದ್ದಾರೆಂದರೆ ಒಂದು ಊರಿಗೆ 15-20 ಜನರಿಗೆ ಅಲ್ಪ ಸ್ವಲ್ಪ ಪರಿಹಾರವನ್ನು ಒದಗಿಸಿದ್ದಾರೆ. ತಹಶೀಲ್ದಾರರು ಒಂದು ರೇಷನ್ ಕಾರ್ಡಿಗೆ ಎರಡು ಮೇವಿನ ಮೂಟೆಗಳನ್ನು ಪರಿಹಾರವಾಗಿ ಕೊಡುತ್ತಿದ್ದರು. ಈಗ ಆ ರೇಷನ್ ಕಾರ್ಡುಗಳೇ ಇಲ್ಲ. ಮೊದಲಿದ್ದ ರೇಷನ್ ಕಾರ್ಡುಗಳನ್ನು ಕಿತ್ತು ಹಾಕಿದ್ದೀರಿ.

ಎಂಟುನೂರು ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಇದರಿಂದ ಜಾನುವಾರುಗಳು ಜೀವಂತ ಉಳಿಯುವುದಿಲ್ಲ. ಆದಕಾರಣ ರೈತರು ಎಷ್ಟು ಟ್ರ್ಯಾಕ್ಟರ್ ಮೇವು ತಂದಿರುತ್ತಾರೆ ಅಷ್ಟು ಮೇವಿಗೆ ಪರಿಹಾರ ಕೊಡಿ ಎನ್ನುವಂಥ ಆದೇಶವನ್ನು ಮಾಡಿಸಬೇಕು ಎಂದು ಹೇಳಿ ನಮ್ಮನ್ನು ಪ್ರಾರ್ಥನೆ ಮಾಡುತ್ತಾರೆ. ಇವತ್ತು ನೂರಾರು ಜನರು ಸಹಿ ಹಾಕಿ ಕೊಟ್ಟಿರತಕ್ಕ ಪತ್ರ ಇದು.

ಮಾನ್ಯ ಭಾರ್ಗೆಯವರೇ, ತಮಗೆ ಕಳುಹಿಸಿ ಕೊಡುತ್ತೇನೆ, ದಯಮಾಡಿ ಇದನ್ನು ಪರಿಶೀಲನೆ ಮಾಡಿ. ಬಹು ಮುಖ್ಯವಾಗಿ ನಾನು ತಮ್ಮಲ್ಲಿ ಕೇಳತಕ್ಕದ್ದು ಇಷ್ಟೆ. ಜಾನುವಾರನ್ನು ಇದುವರೆಗೆ ಎಷ್ಟು ರೈತರು ಮಾರಿದ್ದಾರೆ ಎಂಬ ಬಗ್ಗೆ ಮಾಹಿತಿ ತಮಗೇನಾದರೂ ಸಿಕ್ಕಿದೆಯೇ? ನವೆಂಬರ್ ನಲ್ಲಿ ಕಾಮಗಾರಿಗಳನ್ನು ನಿಲ್ಲಿಸಿದ್ದೀರಿ ಎಂದು ರೈತರು ಹೇಳಿದ್ದಾರೆ. ಡಿಸೆಂಬರ್ ನಲ್ಲಿ ಕಾಮಗಾರಿಗಳನ್ನು ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಈ ಕಾಮಗಾರಿಗಳನ್ನು ಪುನಃ ಪ್ರಾರಂಭ ಮಾಡುವುದಕ್ಕೆ ತಾಲ್ಲೂಕುವಾರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಜನರು ವಲಸೆ ಹೋಗಿದ್ದಾರೆಂದು ಒಂದು ಉದಾಹರಣೆ ನಾನು ಕೊಟ್ಟೆ. ಎಷ್ಟು ಜನ ವಲಸೆ ಹೋಗಿರತಕ್ಕವರು ಎಂಬ ಬಗ್ಗೆ ನಿಮಗೇನಾದರೂ ಲೆಕ್ಕ ಸಿಕ್ಕಿದೆಯೇ? ಮತ್ತು ಈಗ ಮಳೆಯ ವಾರ್ಷಿಕ ವರದಿ ತರಿಸಿದ್ದೀರಾ? ನೀವು ಕೊಟ್ಟಿರುವ ಹೇಳಿಕೆಯಲ್ಲಿ ಏನೂ ಇಲ್ಲ. ಪ್ರತಿ ತಾಲ್ಲೂಕಿನಲ್ಲಿ ವಾರ್ಷಿಕವಾಗಿ ಬರತಕ್ಕ ಮಳೆ ಎಷ್ಟು, ಈ ಸಾರಿ ಕಡಿಮೆಯಾಗಿರತಕ್ಕ ಮಳೆ ಎಷ್ಟು, ಇದನ್ನು ನೋಡಿದರೆ ಗೊತ್ತಾಗುತ್ತದೆ.

ಯಾವ ತಾಲ್ಲೂಕಿನ ಸ್ಥಿತಿ ಏನು ಎಂದು. ಅದಕ್ಕಾಗಿ ರೈತರಿಗೆ ಬೆಳೆ ಸಾಲ ಬಡ್ಡಿಯ ಸಾಲದ ಜೊತೆಗೆ ತಕಾವಿ ಸಾಲ ಎಂದು ಹಿಂದೆ ಇದ್ದುದ್ದನ್ನು ಏನು ವಜಾ ಮಾಡಿದ್ದೀರಿ ಅದನ್ನು ಪುನಃ ಕೊಡತಕ್ಕ ಪ್ರಯತ್ನವನ್ನು ತಾವೇನಾದರೂ ಮಾಡುತ್ತೀರಾ? ಅದರ ಜೊತೆಯಲ್ಲಿ ಒಟ್ಟಾರೆ ಉದ್ಯೋಗ ಒದಗಿಸುವ ಬಹುಮುಖ್ಯವಾದ ಕೆಲಸವನ್ನು ಮಾಡುತ್ತೀರಾ? ನೀವು 23 ಲಕ್ಷ ಮ್ಯಾನ್' ಡೇಸ್ ಎಂದು ಲೆಕ್ಕ ಕೊಟ್ಟಿದ್ದೀರಿ. ಈ ಮ್ಯಾನ್ ಡೇಸ್ ಲೆಕ್ಕ ಹೇಳಬೇಡಿ. ಪ್ರತಿ ತಾಲ್ಲೂಕಿನಲ್ಲಿ ಕಾಮಗಾರಿವೈಸ್ ಲೆಕ್ಕವನ್ನು ಒದಗಿಸಬೇಕು ಎಂದು ನಾನು ಸರ್ಕಾರವನ್ನು ಪ್ರಾರ್ಥನೆ

ಮಾಡಿಕೊಳ್ಳುತ್ತೇನೆ. ತಕ್ಷಣವೇ ಎಲ್ಲಿ ಸಾಧ್ಯವೋ ಅಲ್ಲಿ ಮೇವು ಬ್ಯಾಂಕ್‌ಗಳನ್ನು ತೆಗೆಯಬೇಕು. ಕುಡಿಯುವ ನೀರಿನ ಸ್ಥಿತಿಯನ್ನು ನೀವೇ ಒಪ್ಪಿಕೊಂಡಿದ್ದೀರಿ. ಇದಕ್ಕಾಗಿ ಗುಜರಾತಿನಿಂದ ಸೈಕ್ಲೋನ್ ರಿಗ್ಸ್ ತರಿಸುತ್ತೇವೆಂದು ಹಿಂದೆ ಏನು ತಮ್ಮ ಸರ್ಕಾರ ಮಾತು ಕೊಟ್ಟಿತ್ತು. ಅದರಂತೆ ರಿಗ್ಸ್ ತರಿಸಿ ಎಷ್ಟು ಅಗತ್ಯ ಇದೆ ಎಲ್ಲೆಲ್ಲಿ ಅಗತ್ಯ ಇದೆ ಅಲ್ಲಿ ತೆಗೆಯತಕ್ಕ ಕೆಲಸ ಮಾಡಬೇಕು. ಸಾಗಾಣಿಕೆ ವ್ಯವಸ್ಥೆಗೆ ಈಗಿರತಕ್ಕ ಆದೇಶ ಏನಿದೆ ರೈತ ಸಾಗಾಣಿಕೆ ವೆಚ್ಚ ಕೊಡತಕ್ಕದ್ದು ಎಂದಿದೆ. ರೈತ ಅದನ್ನು ಕೊಂಡು ಕೊಳ್ಳಬೇಕು ಎಂದಿದೆ.

ಸರ್ಕಾರವೇ ಆ ಮೇವನ್ನು ಕೊಂಡು ತಾಲ್ಲೂಕು ಕೇಂದ್ರಕ್ಕಾದರೂ ಕಳುಹಿಸಿ ಅಲ್ಲಿಂದ ವಿತರಣೆ ಮಾಡುವುದಕ್ಕೆ ರೈತನಿಗೆ ತಿಳಿವಳಿಕೆ ಕೊಟ್ಟರೆ ಆತ ತಲೆ ಮೇಲಾದರೂ ಹೊತ್ತುಕೊಂಡು ಹೋಗಿ ಜಾನುವಾರುರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ಎಲ್ಲೆಲ್ಲಿ ಸಾಧ್ಯ ಎಂದು ಕಾಣುತ್ತದೆ, ಎಲ್ಲಿ ಬಹಳ ತೊಂದರೆಗೆ ಸಿಕ್ಕಿದ್ದಾರೆ ಅಲ್ಲಿ ಅಗತ್ಯ ಬಿದ್ದರೆ ಗಂಜಿ ಕೇಂದ್ರವನ್ನು ತೆರೆಯುವ ಪ್ರಯತ್ನ ಮಾಡಬೇಕು. ಮತ್ತು ಪ್ರತಿ ಮೂರು ನಾಲ್ಕು ಗ್ರಾಮಗಳಿಗೆ ಒಂದು ಗೋಶಾಲೆ ತೆರೆಯತಕ್ಕ ಒಂದು ಕೆಲಸವನ್ನು ಸರ್ಕಾರ ತಕ್ಷಣ ಕೈಗೊಳ್ಳಬೇಕು. ಹಾಗೆಯೇ ಕಂದಾಯ ಬಾಕಿ ವಸೂಲಿಗೆ ಈಗಾಗಲೇ ಹರಾಜು ಶುರುವಾಗಿದೆ. ಹರಾಜು ಮಾಡುವುದಕ್ಕೆ ಏನೂ ಇಲ್ಲ.

ಆದ್ದರಿಂದ ಅದನ್ನು ಮಾಫಿ ಮಾಡತಕ್ಕ ಕೆಲಸವನ್ನು ತಕ್ಷಣ 15 ಜಿಲ್ಲೆಗಳಲ್ಲಿ 132 ತಾಲ್ಲೂಕುಗಳಲ್ಲಿ ಮಾಡಬೇಕು. ಸಾಯಿಲ್ ಕನ್ಸರ್ವೇಷನ್‌ಗೆ ಬರಪರಿಹಾರ ಕಾಮಗಾರಿಯಿಂದ ಏನು ಖರ್ಚು ಮಾಡುತ್ತೀರಿ ಆ ಹಣವನ್ನು ಸರ್ಕಾರ ವಸೂಲು ಮಾಡತಕ್ಕದ್ದು ಎಂದು ನೋಟೀಸ್ ಏನು ತಾವು ಕೊಟ್ಟಿದ್ದೀರಿ ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ದಯಮಾಡಿ ಆ ನೋಟೀಸುಗಳನ್ನು ವಾಪಸ್ ತೆಗೆದುಕೊಂಡು ಆ ಹಣವನ್ನಾದರೂ ಮಾಫಿ ಮಾಡಿದ್ದೇವೆ ಎಂದು ಮಾಡಬೇಕು. ಉಳಿದ 5 ಜಿಲ್ಲೆಗಳಿಗೆ ತೊಂದರೆ ಇಲ್ಲ ಎಂದು ಅಲ್ಲ, ಆ ಜಿಲ್ಲೆಗಳ ತೊಂದರೆ ಬೇರೆ. ಅದು ಅನಾವೃಷ್ಟಿಯ ತೊಂದರೆ. ಅದು ಒಪ್ಪಿಕೊಂಡಿದ್ದೀರಿ. ಜೂನ್ ಜುಲೈನಲ್ಲಿ ಭಾರಿ ಮಳೆಯಿಂದ ಮಲೆನಾಡಿನಲ್ಲಿ ಬಹಳ ತೊಂದರೆಯನ್ನು ಅನುಭವಿಸಿದ್ದೇವೆ.

ತುಂಗಾ ನದಿಯ ಅರ್ಧ ಭಾಗ ನಮ್ಮ ತಾಲ್ಲೂಕನ್ನು ಆವರಿಸಿತ್ತು. ಗಾಳಿ ಮಳೆಯಿಂದ ಸುಮಾರು ಮೂರೂವರೆ ಕೋಟಿ ರೂಪಾಯಿ ಲುಕ್ಸಾನು ಆಗಿದೆ ಎಂದು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ವರದಿ ಕೊಟ್ಟಿದ್ದಾರೆ. ಆ ವರದಿಯ ಪ್ರಕಾರ ಸುಮಾರು 8 ಲಕ್ಷ ರೂಪಾಯಿ ಗಳನ್ನು ಬಿಡುಗಡೆ ಮಾಡಿದ್ದೀರಿ. ತೀರ್ಥಹಳ್ಳಿ ತಾಲ್ಲೂಕು ಸೇರಿ ಮೂರೂವರೆ ಕೋಟಿ ರೂ.ಆಗಿದೆ.

ನವೆಂಬರ್ , ಡಿಸೆಂಬರ್ ತಿಂಗಳಲ್ಲಿ ಮತ್ತೊಂದು ಮಳೆ ಬಂತು. ಆಗ ಕೊಯ್ದು ಹಾಕಿದ್ದ ಮೆದೆಯೆಲ್ಲಾ ಮಳೆಯಿಂದ ನಾಶವಾಯಿತು. ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿಗಳಲ್ಲಿ ಪ್ರವಾಸ ಮಾಡಿದ್ದೇನೆ. ಸೊರಬ, ಸಾಗರಕ್ಕೆ ಎಂದು ಇತ್ತೀಚೆಗೆ ತಾವು ಶಿವಮೊಗ್ಗಕ್ಕೆ ಹಣ ಬಿಡುಗಡೆ ಮಾಡಿದ್ದೀರಿ. ಆದರೆ ಉಳಿದವರು ಏನು ಮಾಡಿದರು ? ಇವರಿಗೆ ಕೊಡಬಾರದು ಎಂದು ನಾನು ಹೇಳುವುದಿಲ್ಲ. ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದಲ್ಲಿ 13 ಸಾವಿರ ಎಕರೆ ಪ್ರದೇಶದಲ್ಲಿ ರೈತರ ಫಸಲಿಗೆ ಲುಕ್ಸಾನಾಗಿದೆ.

ಅದಕ್ಕಾಗಿ ಎಕರೆವಾರು 120 ರಂತೆ ಪರಿಹಾರ ಕೊಡಬೇಕೆನ್ನುವ ನಿರ್ಣಯ ಮಾಡಿ ಜಿಲ್ಲಾಧಿಕಾರಿಗಳಿಗೆ 43 ಲಕ್ಷ ರೂಪಾಯಿಗಳನ್ನು ಬಿಡುಗಡೆ ಆಗಿದೆ. ಬಿಡುಗಡೆ ಆಗಿರತಕ್ಕ ಹಣ ಕೇವಲ ಒಂದೆರಡು ತಾಲ್ಲೂಕಿಗೆ ಸೀಮಿತವಾಗಬಾರದು. ಎಲ್ಲೆಲ್ಲಿ ತೊಂದರೆ ಅನುಭವಿಸುತ್ತಿದ್ದಾರೋ ಆ ಎಲ್ಲಾ ಕಡೆ ಪರಿಹಾರ ಹಣ ಬಿಡುಗಡೆ ಆಗಬೇಕು.

ಅವರು ಇನ್ನೂ ಬರುವ ಜೂನ್ ವರೆಗೆ ಕಾಯಬೇಕು. ಈ ಒಂದು ತೊಂದರೆಗೆ ಅವರು ಏನು ಸಿಕ್ಕಿದ್ದಾರೆ ಇದನ್ನು ಗಮನಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಮತ್ತೆ ಬೆಂಗಳೂರಿನ ನಗರ ನೀರು ಸರಬರಾಜಿನ ವಿಚಾರವಾಗಿ ಮಾನ್ಯ ದೇಶಪಾಂಡೆಯವರು ಸುಧೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಯಾವ ಸ್ಥಿತಿಗೆ ನಾವು ಬಂದಿದ್ದೇವೆಂದರೆ ನಗರದ ಒಬ್ಬ ಪ್ರತಿನಿಧಿ ಕೂಡಾ, ಅದರಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ನಗರದ ಮಂತ್ರಿಗಳೂ ಕೂಡಾ ಇದ್ದಾರೆ.

ಇಂತಹ ಒಂದು ದುರ್ಬರ ಸ್ಥಿತಿಯಲ್ಲಿ ಈ ಬಗ್ಗೆ ಚಕಾರ ಶಬ್ದವನ್ನೂ ಎತ್ತದೆ ಇರುವುದಕ್ಕೆ ನನಗೆ ಆಶ್ಚರ್ಯವಾಗುತ್ತದೆ. ಈ ವಿಷಯವನ್ನು ದೇಶಪಾಂಡೆಯವರು ಎತ್ತಬೇಕಾಯಿತು ಎಂದು ನಮ್ಮ ಉಪನಾಯಕರು ಹೇಳಿದರು. ದೇಶಪಾಂಡೆಯವರು ಮಂತ್ರಿಗಳಾಗಿದ್ದವರು. ನಗರಾಡಳಿತ ಖಾತೆ ಅವರ ಕೈಯಲ್ಲಿ ಇತ್ತು. ಆದ್ದರಿಂದ ಪರಿಸ್ಥಿತಿಯನ್ನು ಅರಿತು ಇಲ್ಲಿ ವಿಷಯವನ್ನು ಎತ್ತಿ ಬಹಳ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ಯಾರನ್ನೂ ದೂರಬೇಕೆಂದು ನಾನು ಹೇಳುತ್ತಾ ಇಲ್ಲ. ನಮ್ಮ ಕೆಲಸ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದೇಶಪಾಂಡೆಯವರು ಎತ್ತಿದ ಪ್ರಶ್ನೆಗೆ ಮಾನ್ಯ ಜಾರ್ಜ್‌ರವರು ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬಹುತೇಕ ಬರಕ್ಕೆ ಸೇರದೇ ಇರತಕ್ಕ 5 ಜಿಲ್ಲೆಯ ಪ್ರತಿನಿಧಿಗಳು ಇದರಲ್ಲಿ ಹೆಚ್ಚು ಭಾಗವಹಿಸುತ್ತಿದ್ದಾರೆ. ಎಲ್ಲಿ ಕಷ್ಟ ಇದೆ ಆ ಬಗ್ಗೆ ಸರ್ಕಾರ ಗಮನಹರಿಸಬೇಕು. ಆದುದರಿಂದ ಒಟ್ಟಾರೆ ನನ್ನ ಅಭಿಪ್ರಾಯ ಇಷ್ಟೇ. ಈ ಸರ್ಕಾರಕ್ಕೆ ಎಷ್ಟು ಪ್ರಾಮಾಣದಲ್ಲಿ ಈಗಿರತಕ್ಕ ಭೀಕರವಾಗಿತಕ್ಕ ಕ್ಷಾಮಪರಿಸ್ಥಿತಿ ಬಗ್ಗೆ ಕಳಕಳಿ ಇರಬೇಕಾಗಿತ್ತೋ ಅಷ್ಟು ಇಲ್ಲ ಎಂಬುದು ವಿಷಾದನೀಯ. ಹಾಗೆ ಇದ್ದಿದ್ದರೆ ಈ ವಿಷಯ ಈ ಸಾರಿಯ ರಾಜ್ಯಪಾಲರ ಭಾಷಣದ ಪ್ರಮುಖ ಅಂಶ ಆಗಬೇಕಾಗಿತ್ತು. ಅದು ಆಗದೇ ಇರುವುದರಿಂದ ನೀವು ನಮ್ಮ ಕೇಸನ್ನು ಕೇಂದ್ರದಲ್ಲಿ ವಾದ ಮಾಡುವುದಕ್ಕೆ ಇದು ಧಕ್ಕೆ ಆಗುತ್ತದೆನ್ನುವ ವಿಷಾದವನ್ನು ವ್ಯಕ್ತಪಡಿಸಿ, ನನ್ನ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ, ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ ಮಾನ್ಯ ಮಂತ್ರಿಗಳು 36 ಕೋಟಿ ರಿಲೀಸ್ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದಾರೆಂದು ಹೇಳಿದರೆ ನಾವೂ ಕೂಡಾ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಯಾವಾಗ ರಿಲೀಸ್ ಮಾಡಿದ್ದಾರೆ, ಎಷ್ಟು ರಿಲೀಸ್ ಮಾಡಿದ್ದಾರೆ ಎಂದು ಇನ್ಫರ್ಮೇಷನ್ ಕೊಟ್ಟರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು 36 ಕೋಟಿ ರೂಪಾಯಿ ಕೊಟ್ಟಿರತಕ್ಕದ್ದು ಆಯಾ ಕಾಲದಲ್ಲಿ, ಟೈಮ್ ಟು ಟೈಮ್ ಡಿಸಿಷನ್ಸ್ ಮೇಲೆ ಕೊಟ್ಟಿದ್ದು. ಪ್ರತಿಯೊಂದು ಜಿಲ್ಲೆಯಲ್ಲಿ ರೆವ್ಯೂ ಮಾಡುವಾಗ ಜಿಲ್ಲಾಧಿಕಾರಿಗಳು ನಮಗೆ ಸ್ಟಾಟಿಸ್ಟಿಕ್ ಕೊಟ್ಟಿದ್ದಾರೆ. ವಿವಿಧ ಯೋಜನೆಗಳ ಅಡಿಯಲ್ಲಿ ಹಂಚಿದ್ದು, ಜಿಲ್ಲಾಪರಿಷತ್ತಿನ ಮೂಲಕ ಹಂಚಿದ್ದು, ಬೋರ್‌ವೆಲ್ ಹಾಕಿಸಿದ್ದರ ಬಗ್ಗೆ ತಾಲ್ಲೂಕು ಪಂಚಾಯಿತಿಯಲ್ಲಿ ರೆವ್ಯೂ ಮಾಡುವಾಗ ಜಿಲ್ಲಾಧಿಕಾರಿಗಳ ಜೊತೆ ಮೀಟಿಂಗ್ ಮಾಡುವಾಗ ಕೂಡಾ ಹಣ ಒದಗಿಸಲಾಗಿದೆ. ಕೂರ್ಗ್, ಬೆಳಗಾಂ, ನಾರ್ತ್ ಕೆನರಾ ಬಿಟ್ಟರೆ ಎಲ್ಲಾ ಜಿಲ್ಲೆಯಲ್ಲಿ ನಾನು ಟೂರ್ ಮಾಡಿದ್ದೇನೆ.

ಆ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಒಂದು ಡಾಕ್ಯುಮೆಂಟನ್ನು ತಯಾರು ಮಾಡಿ ಅದನ್ನು ಶಾಸಕರ ಹತ್ತಿರ ಸಂಪೂರ್ಣವಾಗಿ ಕೊಟ್ಟಿದ್ದಾರೆ. ಇಲ್ಲಿ ಎಲ್ಲರೂ ಅದನ್ನು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಜೆ.ಆರ್. ವೈ ನಿಂದ ಹಣ ತೆಗೆದುಕೊಂಡಿದ್ದೀರಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಜೆ.ಆರ್.ವೈ ನಿಂದ ಏಕೆ ಕೊಟ್ಟೆವು ಹೇಗೆ ಖರ್ಚು ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ.

ಅಧ್ಯಕ್ಷರು : ಇದು ಚರ್ಚೆಗೆ ಸಹಾಯಕವಾಗಬಹುದು. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವ ಮಾಹಿತಿಯನ್ನು ಒದಗಿಸುರುವುದಕ್ಕೆ ನಿಮಗೆ ಸಾಧ್ಯವಾದರೆ ಚರ್ಚೆ ಹೆಚ್ಚು ಅರ್ಥ ಪೂರ್ಣವಾಗುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಸೈಕ್ಲೋಸ್ಟೈಲ್ ಮಾಡಿ ಆಮೇಲೆ ಕೊಡುತ್ತೇನೆ ಇಲ್ಲವಾದರೆ ಓದಿ ಎಂದು ಹೇಳಿದರೆ ಓದುತ್ತೇನೆ.

ಅಧ್ಯಕ್ಷರು: ಚರ್ಚೆ ನಡೆಯುತ್ತಿರುವಾಗಲೇ ಸೈಕ್ಲೋಸ್ಟೈಲ್ ಮಾಡಿ ಕಳುಹಿಸಿ.

ಶ್ರೀ ಸಿ. ಬೈರೇಗೌಡ : ಕೆಲವು ಜಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಿಗೂ ಹೋಗಿ ರೆವ್ಯೂ ಮಾಡಿದ್ದೇನೆಂದು ಮಾಹಿತಿಯನ್ನು ಎಲ್ಲಾ ಶಾಸಕರಿಕೂ ಕೊಟ್ಟಿದ್ದಾರೆಂದು ಮಂತ್ರಿಗಳು ಹೇಳಿದರು. ನಮ್ಮ ಜಿಲ್ಲೆಗೂ ಮಂತ್ರಿಗಳು ಬಂದಿದ್ದರು. ನನಗೆ ಅಂದು ಕೊಟ್ಟಿರುವಂತಹ ಮಾಹಿತಿಯನು ಇಲ್ಲಿ ಇದೆ ಅದನ್ನು ನಾನು ನೋಡಿದೆ ಇವರು ಇಲ್ಲಿ ಏನೇನು ಹೇಳಿದ್ದಾರೆ ಆ ಯಾವ ಮಾಹಿತಿಯೂ ಕೂಡ ಇಲ್ಲಿ ಇಲ್ಲ. ಅವರ ಕೈಗೇ ಇದರ ಪ್ರತಿಯನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಏನೇನು ನಡೆಯಿತು ಅದನ್ನು ಸಮಾಧಾನಕರವಾಗಿ ಕೇಳಿ ನಮಗೆ ಇನ್ನೂ ಸ್ವಲ್ಪ ಹೆಚ್ಚು ಹಣ ಬಿಡುಗಡೆ ಮಾಡಿ ಕೆ.ಇ.ಬಿದು ಸ್ವಲ್ಪ ತೊಂದರೆ ಇದೆ ನನ್ನ ಪ್ರಶ್ನೆ ಮುಗಿಯಿತು ಎಂದು ಅಂದು ಹೇಳಿದ್ದಾರೆ. ಈಗ ಸ್ವಲ್ಪ ಸಾಲ್ವ್ ಆಗಿದೆ ಇನ್ನೂ ಸ್ವಲ್ಪ ಸಾಲ್ವ್ ಆಗಬೇಕೆಂದು ಹೇಳಿದ್ದಾರೆ.

ಅಧ್ಯಕ್ಷರು : ಪೂರ್ತಿ ಸಾಲ್ವ್ ಮಾಡಿಕೊಡಿ.

ಶ್ರೀ ಸಿ. ಬೈರೇಗೌಡ : ಅವರು ಬಂದಾಗ ನಾನು ಸೌಜನ್ಯದಿಂದ ನಡೆದುಕೊಂಡೆ. ನಾನು ಮತ್ತು ಅವರು ಇಲ್ಲಿಗೆ ಒಟ್ಟಿಗೆ ಬಂದವರು ನಾವಿಬ್ಬರೂ ಸ್ನೇಹಿತರು ಆದುದರಿಂದಾಗಿ ನಾನು ಅವರು ಬಂದಾಗ ಅವರ ವಿಚಾರದಲ್ಲಿ ಸೌಜನ್ಯದಿಂದ ನಡೆದುಕೊಳ್ಳಬೇಕಾದುದು ನನ್ನ ಕರ್ತವ್ಯವೆಂದು ಆವತ್ತಿನ ದಿನ ಸೌಜನ್ಯದಿಂದ ನಡೆದುಕೊಂಡಿರತಕ್ಕಂಥಾದ್ದು ನಿಜ. ಅವರು ಕೊಟ್ಟಂತಹ ಮಾಹಿತಿಯಲ್ಲಿ ಏನು ಹೇಳಿದ್ದಾರೆ ಆ ಮಾಹಿತಿ ಒಂದೂ ಕೂಡ ಇಲ್ಲ ಕೊಟ್ಟಿರತಕ್ಕಂಥಾದನ್ನು ಅವರಿಗೆ ಕೊಡುತ್ತೇನೆ ಅವರೇ ನೋಡಿ ಹೇಳಲಿ.

ಅಧ್ಯಕ್ಷರು : ಡಿಸ್ಟ್ರಿಕ್ಟ್‌ವೈಸ್ ಬ್ರೇಕಪ್ ಅನ್ನು ಕೊಡುತ್ತಾರೆ. ಎಷ್ಟು ಖರ್ಚು ಮಾಡಿದ್ದಾರೆಂಬ ಮಾಹಿತಿಯನ್ನು ಈಗ ಕೊಡುತ್ತಾರೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಕೊಟ್ಟಿರುವಂತಹ ಹೇಳಿಕೆ ಪ್ರಕಾರ 15 ಜಿಲ್ಲೆಯ 132 ತಾಲ್ಲೂಕುಕಿನ 4758 ಹಳ್ಳಿಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಏನು ಇದೆ ಇದರ ಬಗ್ಗೆ ಚರ್ಚೆ ಮಾಡಬೇಕೆಂಬ ಉದ್ದೇಶದಿಂದ ಬೇರೆಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಈ

ವಿಶೇಷವಾದಂತಹ ಚರ್ಚೆಯಲ್ಲಿ ರೈತನಿಗೆ, ಕೃಷಿ ಕಾರ್ಮಿಕರಿಗೆ ಏನಾದರೂ ಸವಲತ್ತುಗಳನ್ನು ಒದಗಿಸಿ ಆತನ ನೆಮ್ಮದಿಯ ಜೀವನಕ್ಕೆ ವ್ಯವಸ್ಥೆ ಮಾಡಬೇಕೆಂಬ ದೃಷ್ಟಿಯಿಂದ ಈ ಚರ್ಚೆ ಇಂದು ಇಲ್ಲಿ ಪ್ರಾರಂಭವಾಗಿದೆ. ಇಲ್ಲಿ ಕೊಟ್ಟಿರುವಂತಹ ಅಂಕಿ ಅಂಶಗಳನ್ನು ನೋಡಿದರೆ ಬರಗಾಲ ಪರಿಸ್ಥಿತಿಯಲ್ಲಿರುವಂತಹ ಹಳ್ಳಿಗಳಿಗೆ ಅಲ್ಲಿನ ರೈತ, ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸ ಬೇಕೆನ್ನುವ ದೃಷ್ಟಿ ಮತ್ತು ಕಳಕಳಿಯನ್ನು ಸರಕಾರ ಎಷ್ಟರ ಮಟ್ಟಿಗೆ ಸಮರೋಪಾದಿಯಲ್ಲಿ ಹೊಂದಿರಬೇಕಾಗಿತ್ತೋ ಆ ಸಮರೋಪಾದಿಯಲ್ಲಿ ಬರಗಾಲ ಪ್ರದೇಶದಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ ಎಂದು ಸರಕಾರಕ್ಕೆ ಹೇಳಬಯಸುತ್ತೇನೆ. ರಾಜ್ಯದ ಬರಗಾಲ ಕೃಷಿ ಕಾರ್ಮಿಕರ ಹಾಗೂ ರೈತರ ಪರವಾಗಿ ನಾನು ತಮ್ಮನ್ನು ವಿನಂತಿ ಮಾಡುವುದೇನೆಂದರೆ ಈ ರಾಜ್ಯದ ಗ್ರಾಮೀಣ ಜನತೆಯ ಕಳಕಳಿ ನಿಮಗಿದ್ದರೆ ಅವರ ಬಗ್ಗೆ ತಾವು ಗಮನ ಹರಿಸಿ ಹೆಚ್ಚಿನ ಸಹಾಯವನ್ನು ಮಾಡಬೇಕು.

ಇಂದಿನ ವಾಸ್ತವಿಕ ಸ್ಥಿತಿಯನ್ನು ನಿಮ್ಮ ಅಧಿಕಾರಿಗಳು ನಿಮಗೆ ತಿಳಿಸುತ್ತಿಲ್ಲ. ಅಲ್ಲಿರುವಂತಹ ಎಲ್ಲಾ ಡಿ.ಸಿ ಗಳೂ ಕೂಡ ನೀವು ಕೊಟ್ಟಿರುವಂತಹ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಬರಗಾಲ ಕಾಮಗಾರಿ ಕೆಲಸವನ್ನು ಸರಿಯಾಗಿ ನಡೆಸಿದರೆ ಅವರಿಗೆ ಅದಕ್ಕೆ ತಕ್ಕ ದುಡ್ಡನ್ನು ಕೊಡುವುದಕ್ಕೆ ಆಗದೇ ಇರುವಂತಹ ಸಂದರ್ಭ ಇದೆ. ತಾವು ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ಹೆಚ್ಚು ಖರ್ಚು ಮಾಡಬಾರದು ಹಣಕಾಸಿನ ಅಭಾವವಿದೆ ಎಂದು ಹೇಳಿದ ಮೇಲೆ ಎಲ್ಲಾ ಕಡೆ ಬರಗಾಲ ಕಾಮಗಾರಿ ಕೆಲಸವನ್ನು ಸ್ಥಗಿತವಾಗಿರುವ ವಾತಾವರಣ ನಮ್ಮ ರಾಜ್ಯದಲ್ಲಿ ಇದೆ.

ವಾಸ್ತವಿಕತೆಯನ್ನು ತಿಳಿಯುವ ದೃಷ್ಟಿಯಿಂದ ಸದನದ ಸಮಿತಿಯನ್ನು ಮಾಡಿ. ಈವೊಂದು ಕಾರ್ಯಕಲಾಪ, 22ನೇ ತಾರೀಖು ಈ ಸದನ ಮುಗಿಯುವುದರೊಳಗಾಗಿ ತೀವ್ರತವಾದ ಬರಗಾಲ.

(ಶ್ರೀಮತಿ ·ಮೋಟಮ್ಮ ಅಧ್ಯಕ್ಷ ಪೀಠದಲ್ಲಿದ್ದರು)

ಇರುವಂತಹ ಹಳ್ಳಿಗಳಿಗೆ ತಾಲ್ಲೂಕುಗಳಿಗೆ ಭೇಟಿಮಾಡಿ ಅಲ್ಲಿ ಎಷ್ಟರಮಟ್ಟಿಗೆ ಬರಗಾಲ ಕಾಮಗಾರಿ ನಡೆಯತ್ತಿದೆ ಎಷ್ಟು ಜನರಿಗೆ ಪ್ರತಿನಿತ್ಯ ಉದ್ಯೋಗವನ್ನು ಒದಗಿಸುಬೇಕೆನ್ನುವ ಅಂಕಿಅಂಶವನ್ನು ಜಿಲ್ಲಾಧಿಕಾರಿಗಳು ನಿಮಗೆ ಕೊಟ್ಟಿದ್ದಾರೆಯೆ? ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡುತ್ತೀರಿ? ಕುಡಿಯುವ ನೀರಿನ ಸಮಸ್ಯೆಯೇನು? ಕೊನೆಯ ಪಕ್ಷ ವಾರಕ್ಕೊಮ್ಮೆ ಆ ಕೆಲಸ ಮಾಡುವಂತಹ ಕೃಷಿ ಕಾರ್ಮಿಕರಿಗೆ ದುಡ್ಡನ್ನು ನೀವು ಕೊಡುತ್ತೀರಾ? ಆ ಸತ್ಯ ಸಂಗತಿಯನ್ನು ತಿಳಿಯುವ ದೃಷ್ಟಿಯಿಂದ ಒಂದು ಸದನದ ಸಮಿತಿಯನ್ನು ಮಾಡಿದರೆ ವಾಸ್ತವಿಕ ಸಂಗತಿ ನಿಮಗೆ ತಿಳಿಯಬಹುದು. ಆವೊಂದು ತೀರ್ಮಾನವನ್ನು ಮಾನ್ಯ ಕಂದಾಯ ಸಚಿವರು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಜಿಲ್ಲೆಗೊಬ್ಬರು ಉಸ್ತುವಾರಿ ಮಂತ್ರಿಗಳಿದ್ದೀರಿ, ಇನ್ನು ಮಂತ್ರಿಮಂಡಲ ಪೂರ್ಣವಾಗಿಲ್ಲ. ನಾನು ಈ ಸದನದಲ್ಲಿ ಕೇಳುವುದಕ್ಕೆ ಇಚ್ಛೆಮಾಡುತ್ತೇನೆ ಈ ರಾಜ್ಯದ ಜನತೆಯ ಪರವಾಗಿ, ನಿಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಯಾವ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ನಡೆಯುತ್ತಿರುವ ಹಳ್ಳಿಗಳಿಗೆ ಹೋಗಿ ಬರಗಾಲ ಕಾಮಗಾರಿಯನ್ನು ವೀಕ್ಷಿಸಿ ಅವರ ಕಷ್ಟಕಾರ್ಪಣ್ಯಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಯಾವ ಮಂತ್ರಿಗಳು ಮಾಡಿದ್ದಾರೆ? ಸ್ವತಃ ಕಂದಾಯ ಮಂತ್ರಿಗಳು ತಾವು ಬಂದಿದ್ದೀರಿ.

ತೀವ್ರವಾದ ಬರಗಾಲವಿರುವ ಹಳ್ಳಿಗಳಿಗೆ ತಾವು ಸ್ವತಃ ಭೇಟಿ ಕೊಟ್ಟಿದ್ದೀರಾ? ಅಲ್ಲಿನ ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿದ್ದೀರಾ? ನೀವು ಜಿಲ್ಲಾಧಿಕಾರಿಗಳ ಮತ್ತು ಕಾರ್ಯದರ್ಶಿಗಳ ಸಭೆಯನ್ನು ಕರೆದ ಸಂದರ್ಭದಲ್ಲಿ ಮಾರ್ಚಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬರಗಾಲ ತುಂಬಾ ತೀವ್ರತವಾಗುವಂತಹ ಸಂದರ್ಭದಲ್ಲಿ, ಯಾವ್ಯಾವ ಜಿಲ್ಲಾಧಿಕಾರಿಗಳು ಅವರ ಜಿಲ್ಲೆಯಲ್ಲಿರುವ ತಾಲ್ಲೂಕುಗಳಲ್ಲಿ

ಬರಗಾಲ ಕಾಮಗಾರಿಗಳಿಗೆ ಅನ್ವಯವಾಗಿ ಎಷ್ಟು ಜನರಿಗೆ ಉದ್ಯೋಗ ಒದಗಿಸಿಕೊಡಬೇಕೆಂದು ಅಂಕಿಅಂಶಗಳನ್ನು ಕೊಟ್ಟಿದ್ದಾರೆ? ನಿಮ್ಮ ಲೆಕ್ಕದ ಪ್ರಕಾರ ಪ್ರತಿನಿತ್ಯ ಎಷ್ಟು ಜನರಿಗೆ ಉದ್ಯೋಗ ಒದಗಿಸಿಕೊಡುತ್ತಿದ್ದೀರಿ? ಉದ್ಯೋಗ ಒದಗಿಸಿ ಕೊಟ್ಟಾಗ ಅವನಿಗೆ ವಾರಕ್ಕೊಮ್ಮೆ ದವಸಧಾನ್ಯಗಳನ್ನು ಒದಗಿಸಿಕೊಡುವ ಪದ್ಧತಿ ಇದೆಯೇ? ಬರಗಾಲಕ್ಕೆ ತುತ್ತಾದ ವ್ಯಕ್ತಿಗೆ ಏನಾದರೂ ಆಹಾರಧಾನ್ಯಗಳನ್ನು ಒದಗಿಸಿ ಕೊಡುತ್ತಿದ್ದೀರಾ? ಮಾನ್ಯ ಕಂದಾಯ ಸಚಿವರು ಶಿವಮೊಗ್ಗ ಜಿಲ್ಲೆಗೆ ಬಂದಾಗ ಶಾಸಕರ ಒಂದು ಸಭೆಯನ್ನು ಕರೆದಿದ್ದೀರಿ ಅದರಲ್ಲಿ ಅಧಿಕಾರಿಗಳು ಇದ್ದರು.

ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಚರ್ಚೆಯಾಯಿತು. ಶಿವೊಮೊಗ್ಗ ಜಿಲ್ಲೆಯಲ್ಲಿ ಒಂದೇ ಒಂದು ಕಡೆ ಬರಗಾಲ ಕಾಮಗಾರಿ ಕೆಲಸ ಮಾಡುವಂತಹ ಕೃಷಿ ಕಾರ್ಮಿಕರಿಗೆ ಜನವರಿ ಪ್ರಾರಂಭದಲ್ಲಿ ಸುಮಾರು 17 ಲಕ್ಷ ರೂಪಾಯಿ ಹಣ ಪಾವತಿ ಮಾಡದಿರುವ ಬಿಲ್ ಬಾಕಿಯಿದೆ. ಅಂದರೆ 17 ಲಕ್ಷ ರೂಪಾಯಿ ಜನವರಿ ಪ್ರಾರಂಭದಲ್ಲಿ ಬಾಕಿ ಇತ್ತು ಎನ್ನುವುದಾದರೆ ಅಲ್ಲಿರುವಂತಹ ಕೃಷಿ ಕಾರ್ಮಿಕರಿಗೆ ದುಡ್ಡು ಕೊಡದಿದ್ದರೆ ಅವರು ಹೇಗೆ ಕೆಲಸಮಾಡಬೇಕೆಂದು ನಿರೀಕ್ಷೆ ಮಾಡುತ್ತೀರಿ? ನಾನು ಹೇಳುವುದು ಈ ಸರ್ಕಾರ ಮಾಡದಿದ್ದರೂ ಪರವಾಗಿಲ್ಲ, ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದಿರುವ ಸಂದರ್ಭದಲ್ಲಿ, ಇವತ್ತು ನಿಮಗೆ ವಾಸ್ತವಿಕ ಸ್ಥಿತಿ ಮನದಟ್ಟಾಗಿದೆ ತಾನೇ ನಿಮ್ಮ ಹೇಳಿಕೆಯ ಪ್ರಕಾರ

" ಕೆರೆಗಳಲ್ಲಿರುವ ನೀರು ಒಣಗಿ ಅಭಾವ ಪೀಡಿತ ಪ್ರದೇಶಗಳಲ್ಲಿ ಅಂತರ್ಜಲದ ಮಟ್ಟವು ಕಡಿಮೆಯಾಗಿ ಜನ ಮತ್ತು ಜಾನುವಾರುಗಳೆರಡಕ್ಕೂ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ. ಇಂತಹ ಪರಿಸ್ಥಿಯಲ್ಲಿ ರಾಜ್ಯ ಸರ್ಕಾರವು ಗುರ್ತಿಸಿರುವ ಅಭಾವ ಪೀಡಿತ ಪ್ರದೇಶಗಳಲ್ಲಿ ಸಾಧ್ಯವಾದಷ್ಟು ಎಲ್ಲಾ ಪರಿಹಾರ ಕ್ರಮ ಕೈಗೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಪರಿಹಾರ ಕಾಮಗಾರಿಗಳು ಈ ಕೆಳಕಂಡಂತಿವೆ"

ಸ್ವಾಮಿ ನೀವು ಅಲ್ಲಿ ಏನು ಹೇಳಿದ್ದೀರಿ? ಏಕೆಂದರೆ ರಾಜ್ಯಪಾಲರ ಭಾಷಣವನ್ನು ಸಹ ಬಹಳ ಗಡಿಬಿಡಿಯಲ್ಲಿ ಮತ್ತು ಅರ್ಜೆಂಟಾಗಿ ಓದಿಸಿದ್ದೀರಿ. ಅದರಲ್ಲೂ ಯಾವುದೇ ಜನಹಿತಕ್ಕೆ ಸಂಬಂಧಪಟ್ಟ ಅಂಕಿಅಂಶಗಳಿಲ್ಲ, ಕೆಲಸಗಳು ಇಲ್ಲ. ಈ ಸದನ ಸೇರಿದ ಮೇಲೆ ಬರಗಾಲ ಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರುವಂತಹ ಪ್ರಯತ್ನಮಾಡಿ ಸನ್ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದು ಬೇರಲ್ಲ ಕೆಲಸಕಾರ್ಯಗಳನ್ನು ಬದಿಗೊತ್ತಿ ಬರಗಾಲದ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದಾಗ ಒಪ್ಪಿ ಬರಗಾಲದ ಬಗ್ಗೆ ಚರ್ಚೆ ನಡೆಯುವ ಸಂದರ್ಭದಲ್ಲಿ ಒಂದು ರೀತಿಯ ಅಧಿಕಾರಿಗಳು ಕೊಟ್ಟ ಹೇಳಿಕೆಯನ್ನು ನೀವು ಇಲ್ಲಿ ಕೊಟ್ಟಿದ್ದೀರಿ. ಅಂದರೆ ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲ. ಇಂತಹ ಒಂದು ಬೇಜವಾಬ್ದಾರಿ ಸರ್ಕಾರ ಇದೆಯೆನ್ನುವುದಕ್ಕೆ ಇಲ್ಲಿ ಒಂದು ಸಾಲನ್ನು ಓದುತ್ತೇನೆ. ಅದರ ಮೇಲೆ ನೀವು ಹೇಳಿ.

ನಾನು ಹೇಳಿದ ಮಾತು ಸತ್ಯ ಅಲ್ಲವೇ ಎನ್ನುವುದನ್ನು ನೀವು ಹೇಳಿ. ಅದು ಈ ರೀತಿ ಇದೆ:

1) ಬೆಳೆ ಬೆಳೆಯಾಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿಕೊಡುವುದು.

2) ಅಭಾವ ಪೀಡಿತ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಕುಡಿಯುವ ನೀರಿನ ಸರಬರಾಜು.

3) ಮೇವಿನ ಸರಬರಾಜು.

ಬೆಳೆ ಬೆಳೆಯಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ಒದಗಿಸಿಕೊಡುವುದು ಒಂದು ಪ್ರಮುಖವಾದ ಅಂಶ.

ನಮ್ಮ ಕೃಷಿ ಕಾರ್ಮಿಕರು ಬೆಳೆ ಬೆಳೆಯುವುದಿಲ್ಲ. ಬೆಳೆ ಬೆಳೆಯುವ ರೈತನ ಹೊಲಗಳಲ್ಲಿ ಕೆಲಸಮಾಡುತ್ತಾರೆ. ಅಲ್ಲಿ ಅವರು ಕೂಲಿ ಮಾಡುತ್ತಾರೆ. ನೀವು ಯಾರಿಗೆ ಉದ್ಯೋಗ ಒದಗಿಸಿಕೊಡಬೇಕು? ಮೊದಲು ಹೊಲಗಳಲ್ಲಿ ಕೆಲಸಮಾಡುವಂತಹ ರೈತನನ್ನು ನಂಬಿ ಅವರ ಜಮೀನಿನಲ್ಲಿ ದುಡಿಯುವಂತಹ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡಬೇಕು.

ಬೆಳೆಯನ್ನು ಬೆಳೆಯದ ಮತ್ತು ಕೃಷಿ ಕಾರ್ಮಿಕನಾಗಿ ಪರಿವರ್ತನೆಗೊಂಡ ಅವನಿಗೆ ಉದ್ಯೋಗ ಒದಗಿಸಿಕೊಡುವುದು ಎರಡೂ ದೊಡ್ಡ ಜವಾಬ್ದಾರಿ. ನಮಗೆ ಇದರ ಅರಿವು ಇಲ್ಲ. ನಿಮ್ಮ ಸ್ಟೇಟ್ಮೆಂಟಿನಲ್ಲಿ ಈ ರಾಜ್ಯದಲ್ಲಿರುವಂತಹ ಕೃಷಿಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುತ್ತೇವೆಂದರೆ, ಎಷ್ಟು ಜನರಿಗೆ ಪ್ರತಿನಿತ್ಯ ಉದ್ಯೋಗ ಒದಗಿಸಿಸಿಕೊಡುತ್ತೇವೆ ಎನ್ನುವುದು ಮುಂದಿನ ಮಾತಾಯಿತು.

ನಿಮ್ಮ ಸ್ಟೇಟ್ಮೆಂಟ್ನಲ್ಲಿ "ಬೆಳೆ ಬೆಳೆಯಲಾಗದೆ ತಮ್ಮ ಜೀವನೋಪಾಯವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಉದ್ಯೋಗ ಒದಗಿಸಿಕೊಡುವುದು" ಅಂದರೆ ಇದರ ಅರ್ಥವೇನು? ಏನು ಅಂದರೆ ನಿಮ್ಮ ಅಧಿಕಾರಿಗಳು ಮುಂದಾಲೋಚನೆಯಿಂದ ಈವೊಂದು ಸ್ಟೇಟ್ಮೆಂಟನ್ನು ಸರಿಯಾಗಿ ಬರೆದುಕೊಟ್ಟಿಲ್ಲ. ನೀವು ಇದನ್ನು ಸಭೆಯ ಮುಂದಿಡುವುದಕ್ಕೆ ಮುಂಚೆ ಅದರ ಬಗ್ಗೆ ಚಿಂತನೆ ಮಾಡುವ ಯಾವುದೇ ಒಂದು ಪ್ರಾಮಾಣಿಕಪ್ರಯತ್ನ ನಿಮ್ಮ ಕಡೆಯಿಂದ ಆಗದೇ ಇರಬೇಕಾದರೆ ಈ ರೀತಿಯ ಬೇಜವಾಬ್ದಾರಿ ಸರ್ಕಾರ ಅಧಿಕಾರದಲ್ಲಿ ಇರುವಂತಹ ಸಂದರ್ಭದಲ್ಲಿ ಕಂದಾಯ ಸಚಿವರಿಂದ ಏನಾದರೂ ಒಳ್ಳೆಯ ಕೆಲಸಮಾಡುವುದಕ್ಕೆ ಸಾಧ್ಯತೆ ಇದೆಯೆ?

ಕೇವಲ 21 ಜನ ಮಂತ್ರಿಗಳು ಇರುವಂಥ ಸಂದರ್ಭದಲ್ಲಿ, ಜಿಲ್ಲೆಯ ಮಂತ್ರಿಗಳಾಗಿ ನಿಮ್ಮ ಸ್ಟೇಟ್ಮೆಂಟಿನಲ್ಲಿ ಹೇಳುವ ಸಮಯದಲ್ಲಿ ನೀವು ಹೇಳಿ.

ಯಡಿಯೂರಪ್ಪನವರೆ, ಇಷ್ಟನೇ ತಾರೀಖಿಗೆ ಇಂತಹ ಜಿಲ್ಲೆಯ ಇಂಥ ತಾಲ್ಲೂಕಿಗೆ ಹೋಗಿದ್ದರು, ಬರಗಾಲಕ್ಕೆ ತುತ್ತಾದ ಪ್ರದೇಶಗಳಿಗೆ ಶಾಸಕರನ್ನು ಕರೆದುಕೊಂಡುಹೋಗಿದ್ದರು, ಅಲ್ಲಿ ಕೆಲಸ ಆಗಿರುವುದನ್ನು ಪ್ರತ್ಯಕ್ಷವಾಗಿ ನೋಡಿಬಂದಿದ್ದೇವೆ, ಅಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದು ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಈ ರೀತಿಯ ಉದಾಹರಣೆಯನ್ನು ಕೊಡಬಲ್ಲಿರಾ? ವಿಧಾನಸೌಧದಲ್ಲಿ ಕುಳಿತಿರುವ ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳು ಈ ರಾಜ್ಯದ ಯಾವ ಜಿಲ್ಲೆಯ ಯಾವ ತಾಲ್ಲೂಕಿಗೆ ಪ್ರವಾಸ ಮಾಡಿದ್ದಾರೆ? ಜಿಲ್ಲಾಧಿಕಾರಿಗಳ ಸಭೆಯನ್ನು ಮಾಡಿರಬಹುದು. ಆದರೆ ಶಾಸಕರನ್ನು ಕರೆದುಕೊಂಡು ಅವರ ಜೊತೆಗೆ ಚರ್ಚೆಮಾಡಿ, ನಿಮ್ಮ ಉನ್ನತ ಅಧಿಕಾರಿ ಈ ರಾಜ್ಯದ ಯಾವ ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ, ಯಾವ ಹಳ್ಳಿಗೆ ಬಂದಿದ್ದಾರೆ? ಶಿವಮೊಗ್ಗ ಜಿಲ್ಲೆಯಂತೂ ಮಾಡಿಲ್ಲ....

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಎಲ್ಲವನ್ನೂ ಜನರಲೈಸ್ ಮಾಡಬೇಡಿ. ಈ ರಾಜ್ಯದ ಉನ್ನತ ಅಧಿಕಾರಿಗಳು ನಮ್ಮ ಜಿಲ್ಲೆಗೆ, ತಾಲ್ಲೂಕಿಗೆ ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಂಬಂಧಪಟ್ಟಂಥ ಒಬ್ಬರು ರೆವಿನ್ಯೂ ಕಮಿಷನರ್ ಒಂದು ಡಿವಿಜನ್ಗೆ ಹೋಗಿದ್ದಾರೆ. ಡಿವಿಜಲ್ ಕಮೀಷನರ್ ಇನ್ನೊಂದು ಕಡೆಗೆ ಹೋಗಿದ್ದಾರೆ. ಕಾರ್ಯದರ್ಶಿ-2 ಅವರು ಇನ್ನೊಂದು ಕಡೆಗೆ ಹೋಗಿದ್ದಾರೆ. ಅದೂ ಅಲ್ಲದೆ ಒಂದು ತಿಂಗಳಂತೂ ಸೇಶನಲ್ಲಿ ಹೋಯಿತು. ಹತ್ತು-ಹದಿನೈದು ದಿವಸ ಬಿಜಾಪುರದಲ್ಲಿ ಕಳೆದೆವು. ಈ ಒಂದು ತಿಂಗಳಲ್ಲಿ ಇಡೀ 16 ಜಿಲ್ಲೆಗಳನ್ನು ತಿರುಗಿ ಅಲ್ಲಿ ನಾನು ಸ್ವತಃ ರಿವ್ಯೂ ಮಾಡಿ ತದನಂತರ ಅವರ ಬೇಡಿಕೆಗಳು ಏನಿವೆ ಎಂದು ತಿಳಿಯಲು ಡಿವಿಜಲ್ ಕಮೀಷನರ್ ಡೆಪ್ಯುಟಿ ಕಮೀಷನರ್ಗಳ ಕಾನ್ಫರೆನ್ಸ್ ಕರೆದು ಜೊತೆಯಲ್ಲಿ ಚೀಫ್ ಸೆಕ್ರೆಟರಿಗಳನ್ನು ಕೂಡ ಕರೆಯಿಸಿ ಅವರ ಸಿಗ್ನೇಚರ್

ತೆಗೆದುಕೊಂಡು, ನಿಮಗೆ ಎಷ್ಟು ಹಣ ಬೇಕು ಎನ್ನತಕ್ಕಂಥ ಸ್ಟೇಟ್ಮೆಂಟ್ ಕೂಡ ತೆಗೆದುಕೊಂಡು ಅದರ ಆಧಾರದ ಮೇಲೆ ಕೆಲವು ಹಣ ಬಿಡುಗಡೆ ಮಾಡಿದ್ದೇವೆ.

ಕೆಲವು ಮಾಡದೇ ಇರಬಹುದು. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಾರಾಸಗಟಾಗಿ ನಾವೇನೋ ಕೇಳುತ್ತಿದ್ದವೆ ಎಂದು ಹೇಳಿ ನೀವು ಕೇಳುತ್ತಾ ಹೋದರೆ ಹೇಗೆ? ಹಾಗಾದರೆ ನಾನೂ ಅನೇಕ ಸಲ ಹೇಳಬೇಕಾಗುತ್ತದೆ. ನಾನು ವಿರೋಧ ಪಕ್ಷದಲ್ಲಿದ್ದಾಗಲೂ ಕೂಡ ಇಡೀ ರಾಜ್ಯದಲ್ಲಿ ಟೂರ್ ಮಾಡಿಕೊಂಡು ಬಂದಿದ್ದೆ.

ಶ್ರೀ ಬೊಮ್ಮಾಯಿಯವರು ಇದ್ದಾಗ ಚೇರ್ಮನ್ ಆಗಿ ಮಾಡಿ ಕಳುಹಿಸಿದ್ದರು. ಇದರ ಹಿಂದೆ ಕೂಡ ನಾನೂ ರೆವಿನ್ಯೂ ಮಂತ್ರಿಯಾಗಿದ್ದೆ. ಹಿಂದೆ ಕೂಡ ಮಂತ್ರಿಯಾಗಿದ್ದೆ. ಆದರೆ ನೀವು ಹೇಳುವಾಗ ಒಂದೆರಡು ನಿರ್ಧಿಷ್ಟ ಉದಾಹರಣೆಯನ್ನು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಅದನ್ನೆಲ್ಲ ಜನರಲೈಸ್ ಮಾಡಿಬಿಟ್ಟರೆ ಏನಾಗುತ್ತದೆ? ಇದರಿಂದ ಕೆಲಸ ಮಾಡಿದವರಿಗೂ ಕೂಡ ಆಸಕ್ತಿ ಇರುವುದಿಲ್ಲ. ನೀವು ಸ್ಪಷ್ಟವಾಗಿ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ನಾವು ಅದನ್ನು ರೆಕ್ಟಿಫೈ ಮಾಡುತ್ತೇವೆ.

ಏಕೆಂದರೆ ಇದು ನಾವು ನೀವು ಸೇರಿ ಅವರಿಗೆ ಸಹಾಯ ಮಾಡತಕ್ಕದ್ದು. ನಾವು ಏನು ಮಾಡಿದ್ದೇವೆ ನೀವು ಏನು ಮಾಡಿದ್ದೀರಿ ಎನ್ನತಕ್ಕದ್ದು ಇಲ್ಲಿ ಪ್ರಶ್ನೆ ಅಲ್ಲ. ನಾವು ನೀವು ಸೇರಿ ಅವರಿಗೆ ಏನು ಮಾಡಿದ್ದೇವೆ ಎನ್ನತಕ್ಕದ್ದು ಇಲ್ಲಿ ಬಹಳ ಮುಖ್ಯವಾದದ್ದು. ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿ ಒಂದೆರಡು ಉದಾಹರಣೆಗಳು ಇದ್ದರೆ ನಾನು ಅದನ್ನು ಸರಿಪಡಿಸುತ್ತೇನೆ. ಇಲ್ಲ ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸುತ್ತೇನೆ ಮತ್ತು ಅದರ ವರದಿಯನ್ನು ಬೇಕಾದರೆ ನಿಮಗೆ ಒದಗಿಸೋಣ. ಆದರೆ ಹೀಗೆ ಜನರಲೈಸ್ ಮಾಡಿದರೆ ಅದು ಅಷ್ಟು ಸಮಂಜಸ ಆಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ನಾನು ಏನು ಮಾತನಾಡಿದೆ? ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳಾಗಲೀ ಕಂದಾಯ ಇಲಾಖೆಯ ಉನ್ನತ ಅಧಿಕಾರಿಗಳಾಗಲೀ ಕರ್ನಾಟಕದ ರಾಜ್ಯದ ಯಾವ್ಯಾವ ತಾಲ್ಲೂಕುಗಳಲ್ಲಿ ಈ ಒಂದು ವಿಚಿತ್ರವಾದ ಸ್ಥಿತಿ ಇದೆ, ಅಲ್ಲಿ ಏನು ಬರಗಾಲ ಕಾಮಗಾರಿ ನಡೆಯುತ್ತಿದೆ ಆ ಸ್ಥಳಕ್ಕೆ ಹೋಗಿದ್ದಾರೆಯೇ? ಶಿಮೊಗ್ಗ ಜಿಲ್ಲೆಯಲ್ಲಿ ಹೊನ್ನಾಳಿ ತಾಲ್ಲೂಕು, ಶಿಕಾರಿಪುರ ತಾಲ್ಲೂಕಿನಲ್ಲಿ ಬರಗಾಲ ಇದೆ. ತಾವು ಸಭೆ ಮಾಡಿದಾಗ ಜಿಲ್ಲೆಗೆ ಬಂದಾಗ ಹದಿನೈದು ದಿವಸಗಳ ಹಿಂದೆ ತಮ್ಮ ಜೊತೆ ಚರ್ಚೆ ಮಾಡಿದ್ದೇವೆ. ತಾವು ಒಂದು ಉದಾಹರಣೆಯನ್ನು ಕೊಡಿ ಸ್ವಾಮಿ.

ನಮ್ಮ ಜಿಲ್ಲಾ ಮಂತ್ರಿಗಳಾಗಲೀ, ನಿಮ್ಮ ವಿಧಾನಸೌಧದಲ್ಲಿರುವಂಥ ಉನ್ನತ ಮಟ್ಟದ ಯಾವುದೇ ಒಬ್ಬ ಅಧಿಕಾರಿ ಶಿವಮೊಗ್ಗ ಜಿಲ್ಲೆಯ ಅಭಾವಪೀಡಿತ ಪ್ರದೇಶದ ಇಂಥ ಸ್ಥಳಕ್ಕೆ, ಶಾಸಕರನ್ನು ಕರೆದುಕೊಂಡು ಹೋಗಿ ಭೇಟಿ ಮಾಡಿದ್ದಾರೆಯೇ? ತಹಸೀಲ್ದಾರರ ಜೊತೆಗೆ ಚರ್ಚೆ ಮಾಡಿದ್ದಾರೆಯೇ? ಅಲ್ಲಿ ಅಗತ್ಯವಾದ ಕೆಲಸ ಒದಗಿಸಿಕೊಟ್ಟು ಮಾಡಿ ಎನ್ನುವಂಥ ಧೈರ್ಯವನ್ನು ತಹಸೀಲ್ದಾರರಿಗೆ ಹೇಳಿಬಂದಿದ್ದಾರೆಯೇ? ಈ ರೀತಿಯ ಒಂದು ಉದಾಹರಣೆಯನ್ನು ಕೊಟ್ಟರೆ ನಾನು ಹೇಳಿದ ಮಾತನ್ನು ವಾಪಾಸ್ಸು ತೆಗೆದುಕೊಳ್ಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಇವತ್ತು ರಾಜ್ಯದಲ್ಲಿ ಯಾವುದೇ ಒಂದು ಅಭಿವೃದ್ಧಿ ಕೆಲಸ ಆಗುತ್ತಿಲ್ಲ, ಎಲ್ಲವೂ ಸ್ಥಗಿತವಾಗಿದೆ.

ಇಂತಹ ಒಂದು ಸಂದರ್ಭದಲ್ಲಿ ಬರಗಾಲ ಕಾಮಗಾರಿಗಳಿಗೆ ವಿಶೇಷ ಆದ್ಯತೆ ಕೊಡಬೇಕು ಎಂದು ಹೇಳಿ ಜವಾಹರ್ ರೋಜ್ಗಾರ್ ಯೋಜನೆಯ ಸ್ವಲ್ಪ ಹಣವನ್ನು ತೆಗೆದುಕೊಂಡಿರುವಂಥ ಸಂದರ್ಭದಲ್ಲಿ ಅದು ಸರಿಯಾದ ರೀತಿಯಲ್ಲಿ ಉಪಯೋಗ

ಆಗಬೇಕು, ಉದ್ಯೋಗ ಸಿಗಬೇಕು ಎನ್ನುವ ದೃಷ್ಟಿಯಿಂದ ಈ ಸರ್ಕಾರಕ್ಕೆ ಕಳವಳಿ ಇಲ್ಲವೆನ್ನುವುದಕ್ಕೋಸ್ಕರ ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಈಗಲೂ ಸಹ ನಾನು ಇದನ್ನು ಹೇಳುತ್ತೇನೆ. ತಾವು ಹಿರಿಯ ಸಚಿವರು ಇದ್ದೀರಿ, ರೈತನ, ಬಗ್ಗೆ ಬಡವರ ಬಗ್ಗೆ ಕಳಕಳಿ ಇರುವಂಥ ವ್ಯಕ್ತಿ ಇದ್ದೀರಿ. ಆದರೆ ನೀವು ಒಂದು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದೀರಿ. ಇಲ್ಲಿ ಪ್ರಶ್ನೆ ಇರುವಂಥಾದ್ದು ಏನೆಂದರೆ, ಇವತ್ತು ನಿಮ್ಮ ಸರ್ಕಾರ ದಿವಾಳಿಯ ಅಂಚಿನಲ್ಲಿದೆ.

ಬಂದಂಥ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಡೆ ಸಂಪೂರ್ಣ ನಿರ್ಲಕ್ಷ್ಯ. ಇದರ ಪರಿಣಾಮದಿಂದ ಹಣಕಾಸಿನ ಗೊಂದಲ್ಲಿರಬೇಕಾದರೆ, ಜಿಲ್ಲಾ ಪರಿಷತ್ತಿನಲ್ಲಿ ಶಿಕ್ಷಕರಿಗೆ ಸಂಬಳ ಕೊಡುವುದಕ್ಕಾಗದೇ, ಬೇರೆ ಬೇರೆ ಬಾಬಿನ ಹಣವನ್ನು ಡ್ರಾ ಮಾಡಿಕೊಂಡು ಪೇಮೆಂಟ್ ಮಾಡುವ ದುಸ್ಥಿತಿ ಬಂದಿದೆ. ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವಂಥ ಈ ವಿಚಿತ್ರವಾದ ಸನ್ನಿವೇಶದಲ್ಲಿ ರಾಜ್ಯದ ಜನ ಕಣ್ಣೀರಿಡುತ್ತಿದ್ದಾರೆ. ಈ ದುಡ್ಡನ್ನು ಒಂದೇ ಒಂದು ಎಕ್ಸೈಸ್ ಬಾಬಿನಲ್ಲಿ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಯಾಗಿದ್ದಾಗ 365 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಆದಾಯ ಬರುತ್ತಿತ್ತು, ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಸಂದರ್ಭ ಬಂದಾಗ ಕೇಳುತ್ತೇನೆ, ಆಗ ನೀವು ಹೇಳಿ. ಈ ರೀತಿ 365 ಕೋಟಿ ಆದಾಯ ಬರುತ್ತದೆ ಎಂಬ ಸ್ಟೇಟ್ಮೆಂಟ್ ಮಾಡಿದ್ದೀರಿ, ಈ ಮಾತನ್ನು ಇವತ್ತು ಹೇಳವ ಸ್ಥಿತಿಯಲ್ಲಿದ್ದೀರಾ? 365 ಕೋಟಿ ರೂಪಾಯಿಯಲ್ಲಿ ನನ್ನ ಸರ್ಕಾರ ಎಕ್ಸೈಜ್‌ನಲ್ಲಿ ಹಣ ಸೋರಿಹೋಗದಂತೆ ನೋಡಿಕೊಂಡಿದ್ದೇವೆ.

ಇಷ್ಟನ್ನು ಖರ್ಚು ಮಾಡಿದ್ದೇವೆ, ಇಂಥಾದ್ದರಲ್ಲಿ ತೊಡಗಿಸಿದ್ದೇವೆಂದು ಹೇಳುತ್ತೀರಾ? ನೀವೇ ಹೇಳಿದಂತೆ, ಆ ಕಡೆ ಕುಳಿತವರು ಮತ್ತು ಈ ಕಡೆಯವರು ಇಬ್ಬರೂ ಸೇರಿ ಕೆಲಸ ಮಾಡಬೇಕಾಗುತ್ತದೆ. ಒಂದು ಗಾಡಿಯಲ್ಲಿ ಯಾವರೀತಿ ಎರಡು ಎತ್ತುಗಳು ಒಟ್ಟಿಗೆ ಹೋಗುತ್ತವೆಯೋ ಹಾಗೆ ನಾವೂ ಕೂಡ ಕೆಲಸ ಮಾಡಬೇಕಾಗುತ್ತದೆ. ವಿರೋಧಪಕ್ಷದವರು, ಆಡಳಿತ ಪಕ್ಷವನ್ನು ಟೀಕೆ ಮಾಡಬೇಕೆಂದು ನಾನು ಹೇಳುತ್ತಿಲ್ಲ. ನೀವು ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದೀರಿ, ಆ ದಿಕ್ಕಿನಲ್ಲಿ ನಾಲ್ಕು ಹೆಜ್ಜೆ ಇಟ್ಟಿದ್ದೀರಿ, ನಾನು ಅಭಿನಂದನೆ ಸಲ್ಲಿಸುತ್ತೇನೆ. ನಾನು ಹೇಳುವುದು ರೈತರನ್ನು, ಕೃಷಿ ಕಾರ್ಮಿಕರನ್ನು ಇವತ್ತು ಈ ಸ್ಥಿತಿಗೆ ಎಳೆಯುತ್ತಿದ್ದೀರಿ. ಕನ್ನಡದಲ್ಲಿರುವುದನ್ನು ನಾನು ಓದುತ್ತೇನೆ.

"ಬೆಳೆ ಬೆಳೆಯಲಾಗದೇ, ತಮ್ಮ ಜೀವನೋಪಾಯವನ್ನು ಮಾಡಲಾಗದಂಥ ವ್ಯಕ್ತಿಗಳಿಗೆ, ಉದ್ಯೋಗವನ್ನು ದೊರಕಿಸಿಕೊಡಲಾಗುವುದು" ಎಂದು ಹೇಳಿದ್ದೀರಿ. ಏನು ಸ್ವಾಮಿ ಇದರ ಅರ್ಥ. ಈ ರಾಷ್ಟ್ರದಲ್ಲಿ ಕೃಷಿ ಕಾರ್ಮಿಕ ಇದ್ದಾರೆ, ರೈತಾಪಿ ಜನಗಳು ಇದ್ದಾರೆ, ಹೊಲದಲ್ಲಿ ಕೆಲಸ ಮಾಡಿ ಜೀವನ ನಡೆಸುವವರು ಇದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಕೃಷಿ ಕಾರ್ಮಿಕರ ಪಟ್ಟಿಯನ್ನು ಮಾಡಿದ್ದೀರಾ? ನಿಮ್ಮ ಸ್ಟೇಟ್ಮೆಂಟ್ನಲ್ಲಿ ನೀವು ಇವರನ್ನು ಮರೆತ್ತಿದ್ದೀರಿ. ಎಷ್ಟೊಂದು ನಿರ್ಲಕ್ಷ್ಯ ನಿಮಗೆ. ನೀವು ಕೊಟ್ಟಿತಕ್ಕ ಹೇಳಿಕೆಯಲ್ಲಿ ಈ ರೀತಿ ಇದೆ. ಆದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾನು ಒತ್ತಾಯ ಮಾಡುವುದು ಇಷ್ಟೆ.

ಇವತ್ತು ರಾಜ್ಯದಲ್ಲಿ ಶೇಕಡ 48ರಷ್ಟು ಕೃಷಿ ಭೂಮಿಯಲ್ಲಿ ಮಳೆಯಾಗದೇ ಇದ್ದುದರಿಂದ ಬಿತ್ತನೆ ಮಾಡಿಲ್ಲ, ಬಿತ್ತನೆ ಮಾಡಿರುವ ಕಡೆ ಬೆಳೆ ನಾಶವಾಗಿದೆ. ಈ ರೀತಿಯ ವಾತಾವರಣವನ್ನೂ ನೀವೂ ಕೂಡ ಒಪ್ಪಿದ್ದೀರಿ. 15 ಜಿಲ್ಲೆಗಳಲ್ಲಿ, 100 ತಾಲ್ಲೂಕುಗಳಲ್ಲಿ ಬರಗಾಲಪೀಡಿತ ಪ್ರದೇಶ ಎಂದು ಹೇಳಿದ್ದೀರಿ. ಇದು 132 ತಾಲ್ಲೂಕುಗಳಿಗೂ ಏರಿದೆ. ಮಾರ್ಚ್, ಏಪ್ರಿಲ್, ಮೇ ನಮಗೆ ಗೊತ್ತಿರುವ ಹಾಗೆ, ನಾವು, ನೀವು ಸೇರಿ ಸಮರೋಪಾದಿಯಲ್ಲಿ ಈ ಕೃಷಿ ಕಾರ್ಮಿಕರಿಗೆ ಉದ್ಯೋಗ

ಒದಗಿಸಿ, ಕುಡಿಯುವ ನೀರನ್ನು ಒದಗಿಸಿ ಬದುಕುವ ವ್ಯವಸ್ಥೆ ಮಾಡುವ ಈ ಕಾಲದಲ್ಲಿ ಈ ಒಂದು ಸ್ಟೇಟ್‌ಮೆಂಟ್‌ನಲ್ಲಿ ಹೇಳಿ ಅಥವಾ ಅಂಕಿ ಅಂಶ ಕೊಡತಕ್ಕ ಸಮಯದಲ್ಲಿ ಹೇಳಿ.

ಕಳೆದ 5-6 ವರ್ಷಗಳಿಂದ ಈ ರಾಜ್ಯದಲ್ಲಿ ಭೀಕರ ಬರಗಾಲದ ವಾತಾವರಣ ಇದೆ ಜನವರಿ, ಫೆಬ್ರವರಿ, ಮಾರ್ಚಿ ತಿಂಗಳುಗಳಲ್ಲಿ ಹಿಂದಿನ ಸರ್ಕಾರಗಳು ಈ ಬರಗಾಲಕ್ಕೋಸ್ಕರ ಎಷ್ಟು ಖರ್ಚು ಮಾಡಿದ್ದಾರೆ, ನೀವು ಎಷ್ಟು ಖರ್ಚು ಮಾಡಿದ್ದೀರಿ. ಬರುವಂಥ ಮಾರ್ಚಿ, ಏಪ್ರಿಲ್, ಮೇ ತಿಂಗಳುಗಳಲ್ಲಿ, ತೀವ್ರವಾಗಿ ಬರಗಾಲ ಪೀಡಿತ ಪ್ರದೇಶಗಳಲ್ಲಿ ಉದ್ಯೋಗವನ್ನು ಕೇಳಿಕೊಂಡು ಬರುವಂಥ ಎಲ್ಲಾ ಕೃಷಿ ಕಾರ್ಮಿಕರಿಗೆ ನಾವು ಉದ್ಯೋಗವನ್ನು ಕೊಡುತ್ತೇವೆಂದು ಭರವಸೆಯನ್ನು ಕೊಡುತ್ತೀರಾ, ಮೊದಲು ಇಂತಹವರ ಪಟ್ಟಿ ತಯಾರು ಮಾಡಿ. ವಾರಕ್ಕೊಮ್ಮೆ ಕೂಲಿಯನ್ನು ತಪ್ಪದೆ ನಾವು ಇವರಿಗೆ ಕೊಡುತ್ತೇವೆಂದು ಹೇಳುತ್ತೀರಾ? ಎಲ್ಲಿದೆ ನಿಮ್ಮ ಹತ್ತಿರ ಅಂಕಿ ಅಂಶ ಸರ್ಕಾರ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು, ಸಮರೋಪಾದಿಯಲ್ಲಿ ಬರಗಾಲ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆಂದು ಬಹಿರಂಗವಾಗಿ, ಪ್ರಚಾರಕ್ಕಾಗಿ ಪತ್ರಿಕೆಯಲ್ಲಿ ಹೇಳಿದ್ದೀರಿ. ಪ್ರತ್ಯಕ್ಷವಾಗಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡುವಂಥ ಸಂದರ್ಭದಲ್ಲಿ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ನಿಧಾನ ಮಾಡಿ ಎಂದು ಹೇಳುವಂಥದ್ದು. ಇದರಿಂದ ಜನಹಿತ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ನಿಮಗೆ ಸಮಸ್ಯೆ ಇದ್ದರೆ ಹೇಳಿ, ನೀವು ಒಂದುಕಡೆ ಸ್ಟೇಟ್‌ಮೆಂಟ್ ಮಾಡಿದ್ದೀರಿ. "ಪರಿಸ್ಥಿತಿ ಇನ್ನಷ್ಟು ಹದಗೆಟ್ಟಲ್ಲಿ, ಎಲ್ಲಾ ಅಭಿವೃದ್ಧಿ ಯೋಜನೆಗಳನ್ನೂ ಸ್ಥಗಿತಗೊಳಿಸಲಾಗುವುದು ಮತ್ತು ಅಭಾವ ಪರಿಹಾರ ಕಾಮಗಾರಿಗಳಿಗೆ ಆದ್ಯತೆ ಕೊಡಲಾಗುವುದು ಎಂದು ವರದಿಗಾರರಿಗೆ ತಿಳಿಸಿದರು" ಎಂಬುದಾಗಿ 1-1-91ರ ಕನ್ನಡ ಪ್ರಭಾ ಪತ್ರಿಕೆಯಲ್ಲಿ ತಾವೇ ಹೇಳಿದ್ದೀರಿ. ಹಾಗಾದರೆ, ಬೇರೆ ಅಭಿವೃದ್ಧಿ ಕಾರ್ಯಗಳು, ಅಗತ್ಯವಿಲ್ಲದೇ ಇರುವ ಕೆಲಸಗಳ ದುಡ್ಡನ್ನು ಡ್ರಾ ಮಾಡಿ, ಇದಕ್ಕೆ ಉಪಯೋಗ ಮಾಡಿ, ನಾವೂ ಕೂಡ ಸಹಕಾರ ಕೊಡುತ್ತೇವೆ. ಈ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಆಗಿಲ್ಲ, ಯಾವುದೇ ಜಿಲ್ಲೆಯಲ್ಲಿ ಸಾಕಷ್ಟು ಹಣ ಕೊಟ್ಟು ಕೆಲಸ ಮಾಡಿಸುತ್ತೀರೆಂಬ ವಿಶ್ವಾಸ ಇಲ್ಲ. ತಾವು ಶಿಕಾರಿಪುರ ತಾಲ್ಲೂಕಿನಲ್ಲಿ ಸಾಕಷ್ಟು ಹಣ ಕೊಟ್ಟಿದ್ದೇವೆಂದು ಹೇಳಬಹುದು. ಇಡೀ ಜಿಲ್ಲೆಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾಗಿದ್ದು ತಾಲ್ಲೂಕುಗಳು ಹೊನ್ನಾಳಿ ಮತ್ತು ಶಿಕಾರಿಪುರ ತಾಲ್ಲೂಕುಗಳು. ಮೊನ್ನೆ ತಹಶೀಲ್ದಾರ್‌ರವರ ಜೊತೆ ಸಭೆ ಆಯಿತು. ಶಿಕಾರಿಪುರ ತಾಲ್ಲೂಕಿನಲ್ಲಿ 14 ಲಕ್ಷ ರೂಪಾಯಿಗಳ ಬಿಲ್ ಬಾಕಿ ಇದೆ. ತಹಶೀಲ್ದಾರ್‌ರವರು ಎಲ್ಲಾ ಕೆಲಸಗಳನ್ನೂ ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಸಮರೋಪಾದಿಯಲ್ಲಿ ಕೆಲಸ ಮಾಡುತ್ತೇವೆಂದು ಹೇಳಿ, ಸುಮಾರು 90 ಕಡೆ ಬರಗಾಲ ಕಾಮಗಾರಿಗಳನ್ನು ಶುರು ಮಾಡಿ, ಇನ್ನೂ 16-17 ಲಕ್ಷ ರೂಪಾಯಿಗಳ ಪೇಮೆಂಟ್ ಆಗಿಲ್ಲ ಬಡವರು ಬಂದು ಬೀದಿ ಬಾಗಿಲಿನಲ್ಲಿ ಕುಳಿತಿದ್ದಾರೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಜಿಲ್ಲಾಧಿಕಾರಿಗಳ ಸಭೆ ಮಾಡಿದಾಗ ಈ ಚರ್ಚೆಯಾಯಿತು. ನಾನು ತಮಗೆ ಪತ್ರ ಬರೆದಿದ್ದೇನೆ. ಶಿಕಾರಿಪುರ ತಾಲ್ಲೂಕಿನಲ್ಲಿ 17-18 ಲಕ್ಷ ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದೇನೆ.

ಜನವರಿ ಪ್ರಾರಂಭದಲ್ಲೇ ಪತ್ರ ಬರೆದಿದ್ದೇನೆ, ಮುಖ್ಯಮಂತ್ರಿಗಳನ್ನು ಸ್ವತಃ ಭೇಟಿ ಮಾಡಿ ನಮ್ಮ ಜಿಲ್ಲೆಯ ಪರಿಸ್ಥಿತಿ ತಿಳಿಸಿದ್ದೇನೆ. ಮತ್ತೆ ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿದಾಗ, ಇದೇ ಕಹಿ ಅನುಭವ ಬರುತ್ತಿದೆ. ಅದಕ್ಕೋಸ್ಕರ ನಾನು ಸರ್ಕಾರವನ್ನು ಒತ್ತಾಯ ಮಾಡುವುದು, ರಾಜಕಾರಣ ಮಾಡುವುದನ್ನು ಕೈಬಿಟ್ಟು, ಡೆಲ್ಲಿ ಕಡೆ ಓಡಾಟ ಮಾಡುವುದನ್ನು ಕೈಬಿಟ್ಟು ಇವತ್ತು ಗ್ರಾಮಾಂತರ ಪ್ರದೇಶದ ಕಡೆ ನೀವು ಹೋಗಬೇಕು. ಒಂದುವೇಳೆ ನೀವು ಹೋಗದಿದ್ದರೂ ನಿಮ್ಮ ಅಧಿಕಾರಿಗಳನ್ನಾದರೂ ಕಳುಹಿಸಿಕೊಡಿ. ನಿಮ್ಮ ಸರ್ಕಾರದ ಆಡಳಿತ ವೈಖರಿಯಿಂದ ನಿಮ್ಮ ಉನ್ನತ ಅಧಿಕಾರಿಗಳಲ್ಲಿ ಪರಸ್ಪರ

ಬೇಸರ ಇದೆ. ಉನ್ನತ ಅಧಿಕಾರಿಗಳಿಗೆ ಒಳ್ಳೆಯ ಅವಕಾಶ ಇಲ್ಲ. ಭ್ರಷ್ಟ ಅಧಿಕಾರಿಗಳನ್ನು ಮೇಲೆ ತರುವಂಥ ಸಂದರ್ಭದಲ್ಲಿ ಯಾವರೀತಿ ಕೆಲಸ ಮಾಡಬೇಕೆಂಬ ಭಾವನೆ ಪ್ರಾಮಾಣಿಕ ಅಧಿಕಾರಿಗಳಿಗೆ ಮೂಡಿದೆ. ಇದರಲ್ಲಿ ನಿಮ್ಮ ಜವಾಬ್ದಾರಿ ಇದೆ, ಇದನ್ನು ತೆಗೆದುಹಾಕುವುದರಲ್ಲಿ ನಿಮ್ಮ ಜವಬ್ದಾರಿ ಇದೆ. ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ, ಮೊದಲು ಈ ಕಡೆ ವಿಶೇಷವಾಗಿ ಗಮನ ಕೊಡಬೇಕು. ತಾವು ಕೇಳಬಹುದು ಅಥವಾ ಬಿಡಬಹುದು.

ನನ್ನ ಕರ್ತವ್ಯದ ದೃಷ್ಟಿಯಿಂದ ಈ ಕಡೆ ಕುಳಿತು ಈ ಮಾತನ್ನು ಹೇಳುತ್ತಿದ್ದೇನೆ. ನಿಮ್ಮ ಸರ್ಕಾರದ ಬಗ್ಗೆ ಇವತ್ತಿನ ಸ್ಥಿತಿಗತಿಗಳ ಬಗ್ಗೆ ನ್ಯಾಯ ದೊರಕಿಸಿಕೊಡುವ ಬಗ್ಗೆ ನಿಮಗೆ ಸಮಯ ಇದೆ ಎಂದು ನನಗನ್ನಿಸುವುದಿಲ್ಲ.

(ಚೇರ್ಮನ್ - ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎಷ್ಟು ಮಾತನಾಡಿದರೂ ಗೋರ್ಕಲ್ಲಮೇಲೆ ಮಳೆ ಸುರಿದಂತೆ ಸರ್ವಜ್ಞ ಎಂದು ಹೇಳಿದಂತೆ ಈ ಕಡೆ ಕುಳಿತುಕೊಂಡಂಥವರ ಕಥೆ ಆಗಬಹುದು. ಆದರೆ ದಯವಿಟ್ಟು ಈಗಲಾದರೂ ಹೇಳುತ್ತೇನೆ, ಇಷ್ಟೊಂದು ಬಹುಮತ ನಿಮಗೆ ಇದೆ. ಅಧ್ಯಕ್ಷಿಣಿಯವರೇ ನಮ್ಮ ದೇಶದಲ್ಲಿ ಜನತೆಯ ಪರಿಸ್ಥಿತಿ ನೋಡಿರಿ.

ದೆಹಲಿಗೆ ಹೋದರೆ ಅತ್ಯಂತ ಕಡಿಮೆ ಸದಸ್ಯರಿರುವ ಸರಕಾರಕ್ಕೆ ಬೆಂಬಲ ಕೊಟ್ಟು ಅಲ್ಲಿ ಅಸ್ಥಿರತೆ ತಾಂಡವವಾಡುತ್ತಿದೆ. ಇಲ್ಲಿ ಬಂದರೆ ಹಿಂದೆಂದೂ ಇಲ್ಲದಿರುವಂತಹ ಬಹುಮತ ಇದ್ದೂ ಯಾರೂ ಮಂತ್ರಿಯಾಗಬೇಕು ಯಾರು ಚೇರ್ಮನ್ ಆಗಬೇಕು ಈ ಕಚ್ಚಾಟದಲ್ಲಿ ಜನಪದ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ. ಈ ಪರಿಸ್ಥಿತಿಯಾದರೆ, ರಾಜ್ಯದ ಜನತೆ ಏನು ತಪ್ಪು ಮಾಡಿದ್ದಾರೆ. ಇಷ್ಟೊಂದು ಬಹುಮತ ಕೊಟ್ಟದ್ದು ತಪ್ಪೇ? ಇದಕ್ಕೋಸ್ಕರ ನಾನು ಕಿವಿಮಾತು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಯಾರೇ ಇರಲಿ ಅಧಿಕಾರದಲ್ಲಿರತಕ್ಕಂಥ ಸಂದರ್ಭದಲ್ಲಿ ಸರಕಾರ ಮಾಡುವಂತಹ ಒಳ್ಳೆಯ ಕೆಲಸವನ್ನು ಒಳ್ಳೆಯದು ಎಂದು ಹೇಳುವ ಸೌಜನ್ಯ ವಿರೋಧ ಪಕ್ಷದಲ್ಲಿರುವಂತಹ ನಮ್ಮಲ್ಲಿ ಬರಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಆದರೆ ಈಗ ಕೇವಲ ಒಂದೆರಡು ತಿಂಗಳಿನಲ್ಲಿ ಈ ಸರಕಾರದ ಬಗ್ಗೆ ಜನ ಬೇಸತ್ತು ಒಂದು ಆಡಳಿತ ವ್ಯವಸ್ಥೆಗೂ ಸರಕಾರಕ್ಕೂ ಶ್ರೀಸಾಮಾನ್ಯನಿಗೂ ಏನೂ ಸಂಬಂಧ ಇಲ್ಲ ಎಂಬ ಭಾವನೆ ಇವತ್ತು ಮೂಡುತ್ತಿದೆ. ಅದನ್ನು ತೆಗೆದುಹಾಕುವಂತಹ ಪ್ರಯತ್ನವನ್ನು ನಾವೂ ನೀವೂ ಮಾಡಬೇಕಾಗಿದೆ. ಕೃಷಿ ಕಾರ್ಮಿಕರನ್ನು ಹರಿಜನರನ್ನು, ಬಡವರನ್ನು ಉಳಿಸುವಂತಹ ಕೆಲಸವನ್ನು ನಾವೂ ನೀವೂ ಮಾಡಬೇಕಾಗಿದೆ. ಸ್ವಾಮಿ ನೀವು ಒಂದು ಸರ್ವೆ ಮಾಡಿಸಿ ವರದಿ ತರಿಸಿಕೊಳ್ಳಿ. ಬರಗಾಲ ಪ್ರದೇಶದ ಎಂದು ಗುರುತಿಸಿರುವ 132 ತಾಲ್ಲೂಕುಗಳಲ್ಲಿರುವ ಯಾವ ಯಾವ ಕೆರೆಗಳಲ್ಲಿ ಬರುವ 8-10 ದಿವಸಕ್ಕೆ ಆಗುವಂತಹ ನೀರು ಇದೆಯೇ ಎಂದು ಸರ್ವೆ ಮಾಡಿಸಿ.

ನಾವು ಮಾರ್ಚ್‌ನಲ್ಲಿದ್ದೇವೆ. 15 ದಿನಕ್ಕಾಗುವಷ್ಟು ನೀರು ಬತ್ತಿಹೋದ ಮೇಲೆ ಅಲ್ಲಿನ ಜಾನುವಾರುಗಳ ಕಥೆ ಏನು? ಗ್ರಾಮೀಣ ಪ್ರದೇಶದಿಂದ ಹೊರಗಡೆ ಬರುವುದಕ್ಕೆ ಸಾಧ್ಯ ಇದೆಯೇ? ಆದುದರಿಂದ ಎಲ್ಲಿ ಬೋರ್‌ವೆಲ್‌ಗಳು ಇದೆ, ಅದರ ಪಕ್ಕದಲ್ಲಿ ಟ್ಯಾಂಕುಗಳನ್ನು ಕಟ್ಟಿಸಿ, ಜಾನುವಾರುಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡಬೇಕು. ತಾವೇ ನೀಡಿರುವ ಹೇಳಿಕೆ ಪ್ರಕಾರ ಇವತ್ತು ಅಂತರ್ಜಲ ಕೆಳಗಡೆ ಹೋಗುತ್ತಿದೆ. ಬೋರ್‌ವೆಲ್‌ಗಳು ನೀರಿಲ್ಲದೆ ಫೇಲ್ ಆಗುತ್ತಿವೆ. ಇಂತಹ ಸಂದರ್ಭದಲ್ಲಿ ನನ್ನ ಸಲಹೆ ಎಂದರೆ ಅನಗತ್ಯವಾಗಿ ಬೋರ್‌ವೆಲ್‌ಗಳನ್ನು ತೆಗೆಯಬೇಡಿ.

ನಮ್ಮ ಅಧಿಕಾರಿಗಳಿಗೆ ಬೋರ್‌ವೆಲ್ ತೆಗೆಯುವುದು ಎಂದರೆ ಹಬ್ಬ. ಬರಗಾಲ ಕಾಮಗಾರಿ ಸಂದರ್ಭದಲ್ಲಿ ಬೋರ್‌ವೆಲ್ ತೆಗೆಯುತ್ತೇವೆಂದು ಹಳೆಯದನ್ನೂ ಲೆಕ್ಕಕ್ಕೆ ಬರೆಯುತ್ತಾರೆ, ಹೊಸದನ್ನೂ ಬರೆಯುತ್ತಾರೆ. 350 ಅಡಿ ಹೋಯಿತು ಎಂದು ಹೇಳಿ ಒಳಗಡೆ ಸರಿ ಮಾಡಿಕೊಳ್ಳುವುದು ನಡೆಯುತ್ತಿದೆ. ವ್ಯಾಪಕ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದಕ್ಕೆ ನನ್ನ ಸಲಹೆ ಎಂದರೆ ದಯಮಾಡಿ ನಿಮ್ಮ ಜಿಲ್ಲಾಧಿಕಾರಿಗಳಿಗೆ ಇವತ್ತು ಒಂದು ಆದೇಶ ಕೊಡಿ. ಯಾವ ಹಳ್ಳಿಯಲ್ಲಿ ಬೋರ್‌ವೆಲ್ ಯಶಸ್ವಿಯಾಗಿದೆ, ನೀರು ಇದೆ, ಅಲ್ಲಿ ಇನ್ನೂ ನಾಲ್ಕು ಬೋರ್‌ವೆಲ್ ಹಾಕಿ, ಮೂರು ಫೇಲ್ ಆಯಿತು ಎಂದು ಹೇಳಿ ಮೋಸ ಆಗುವ ಬದಲು, ನೀರು ಇರುವಂತಹ ಬೋರ್‌ವೆಲ್ ಇರುವ ಕಡೆ ಮಿನಿ ವಾಟರ್ಸ್ ಸಪ್ಲೈ ಮಾಡಿ. ಹಳ್ಳಿಗಳಲ್ಲಿ ಮೂರು ನಾಲ್ಕು ಟ್ಯಾಂಕು ಕಟ್ಟಿಸಿ. ಇದರಿಂದ ಹೊಸದಾಗಿ ಆ ಊರಿನಲ್ಲಿ ಬೋರ್‌ವೆಲ್ ತೆಗೆಯುವ ಸಂದರ್ಭ ಬರುವುದಿಲ್ಲ. ಬೋರ್‌ವೆಲ್ ತೆಗೆಸುವ ದುಡ್ಡೂ ಉಳಿಯುತ್ತದೆ. ಬಹಳ ಸುಲಭವಾಗಿ ಇರುವಂತಹ ಸಿಹಿ ನೀರನ್ನು ಸುತ್ತಮುತ್ತಲ ಹಳ್ಳಿಯ ಜನ ಉಪಯೋಗ ಮಾಡಿ ಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹೊಸದಾಗಿ ಅನಗತ್ಯವಾಗಿ ಬೋರ್‌ವೆಲ್‌ಗಳನ್ನು ತೆಗೆಯಲು ನಿಮ್ಮ ಅಧಿಕಾರಿಗಳು ಮುಂದೆ ಬರುತ್ತಾರೆ, ಬರಗಾಲ ಕಾಮಗಾರಿ ಮಾಡಿ ಎಂದರೆ ಮೊದಲು ಮಾಡುವ ಕೆಲಸ ಬೋರ್‌ವೆಲ್‌ತೆಗೆಯುವುದು. ಹಳೆಯದನ್ನೂ ಸೇರಿಸಿ ಲೆಕ್ಕ ಬುಕ್ಕು ಮಾಡಿ ಬರೆಯುತ್ತಾರೆ.

ಅದಕ್ಕೆ ನಾನು ಹೇಳುವುದು, ಪ್ರತಿಯೊಂದು ಜಿಲ್ಲೆಯಲ್ಲಿ ಅಲ್ಲಿರುವ ಬೋರ್ ವೆಲ್‌ಗಳ ಸಂಖ್ಯೆ ಎಷ್ಟು, ಅದರಲ್ಲಿ ಫೇಲ್ ಆಗಿರುವುದು ಎಷ್ಟು, ಸಕ್ಸಸ್‌ಫುಲ್ ಆಗಿರುವುದು ಎಷ್ಟು ಎಂಬುದರ ಸರ್ವೆ ಮಾಡಿಸಿ, ನೀವು ಡೈರಿ ತೆಗೆದು ನೋಡಿದ ತಕ್ಷಣ ಗೊತ್ತಾಗಬೇಕು. ಶಿಕಾರಿಪುರ ತಾಲ್ಲೂಕಿನಲ್ಲಿ ತಿಮ್ಲಾಪುರ ಬೋರ್‌ವೆಲ್ ಯಶಸ್ವಿಯಾಗಿದೆ ಎಂದರೆ ಅಲ್ಲಿ ಬೋರ್‌ವೆಲ್ ಏತಕ್ಕೆ ತೆಗೆಯುತ್ತೀರಿ? ತೆಗೆಯ ಕೂಡದು. ಅಲ್ಲಿರುವುದಕ್ಕೇ ಮಿನಿ ವಾಟರ್ ಸಪ್ಲೈ ಮಾಡಲಿ, ಅದಕ್ಕೆ ಖರ್ಚು ಮಾಡಿ.

ಈ ರೀತಿ ವಿಶೇಷ ಗಮನ ಕೊಟ್ಟಾಗ ಮಾತ್ರಸರಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಬರಗಾಲಕ್ಕೆ ತುತ್ತಾದ ಬಡವನಿಗೂ ಅನುಕೂಲವಾಗುತ್ತದೆ. ಸ್ವಾಮಿ ನಾವೂ ನೀವೂ ಸೇರಿ ನೋಡುವುದಾರೆ, ನನ್ನ ಅನುಭವದ ಪ್ರಕಾರ ಕಳೆದ 6-7 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಎಲ್ಲೂ ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ಬೇಕಾದಷ್ಟು ಕಾರಣಗಳು ಇದ್ದಾವೆ. ಹಣಕಾಸಿನ ಮುಗ್ಗಟ್ಟು ಇರಬಹುದು. ಅಥವಾ ಅದರ ಅಗತ್ಯ ನಿಮಗೆ ಕಾಣದೇ ಇರಬಹುದು. ಅನೇಕ ವರ್ಷಗಳಿಂದ ಕೆರೆ ಕಟ್ಟೆಗಳು ಉಳಿದಿವೆಯಲ್ಲ, ಅದನ್ನು ಉಳಿಸಿಕೊಳ್ಳುವ ಪ್ರಯತ್ನವಾದರೂ ಆಗಬೇಕಲ್ಲ. ಅಲ್ಲಿ ಜಾಸ್ತಿ ನೀರು ನಿಲ್ಲುವ ದೃಷ್ಟಿಯಿಂದ ಆ ಕೆರೆಗಳಲ್ಲಿ ಹೂಳು ತೆಗೆಯುವ ವಿಶೇಷ ಪ್ರಯತ್ನ ಆಗಬೇಕಲ್ಲ, ಸುತ್ತಮುತ್ತ ಇರುವ ಎಂಟು ಹತ್ತು ಹಳ್ಳಿಯ ಜನ ಅಲ್ಲಿ ಬಂದು ಕೆಲಸ ಮಾಡುವುದಕ್ಕೆ ಅವಕಾಶ ಮಾಡುವ ವಿಶೇಷ ಪ್ರಯತ್ನ ಮಾಡಬೇಕಲ್ಲ, ನಾನು ನಿಮ್ಮನ್ನು ಕೇಳುತ್ತೇನೆ. ಬರಗಾಲ ಕಾಮಗಾರಿ ಕೈಗೊಂಡಿದ್ದರಲ್ಲಿ, ಈ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ, ಎಷ್ಟೆಷ್ಟು ಕೆರೆಗಳಲ್ಲಿ ಹೂಳು ತೆಗೆಯುವದಕ್ಕೋಸ್ಕರ, ಎಷ್ಟು ದುಡ್ಡನ್ನು ನೀವು ಖರ್ಚು ಮಾಡಿದ್ದೀರಿ ಎಂಬುದನ್ನು ಪಟ್ಟಿ ತೆಗೆಸಿ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಹೇಳಿ. ಆಗ ಗೊತ್ತಾಗುತ್ತದೆ.

ನಮ್ಮ ಅಧಿಕಾರಿಗಳು ಏನು ಮಾಡಿದ್ದಾರೆ. ಎಷ್ಟರಮಟ್ಟಿಗೆ ಅದರ ಕಡೆ ಗಮನ ಕೊಟ್ಟಿದ್ದಾರೆ ಗೊತ್ತಾಗುತ್ತದೆ. ಎಲ್ಲಾ ಅಧಿಕಾರಿಗಳೂ ಭ್ರಷ್ಟರು ಎಂಬ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ, ಕೊನೆಗೆ ಯಾರೇ ಅಧಿಕಾರದಲ್ಲಿದ್ದರೂ ಅಧಿಕಾರಿಗಳೇ

ಕೆಲಸ ಮಾಡಬೇಕಾಗಿದೆ. ಪ್ರಮಾಣಿಕ ಅಧಿಕಾರಿಗಳೂ ಇದ್ದಾರೆ. ಆದರೆ ನಿಮ್ಮ ಸರಕಾರದಲ್ಲಿ ದುರ್ದೈವದಿಂದ ಪ್ರಾಮಾಣಿಕರಿಗೆ ಅವಕಾಶ ಇಲ್ಲ. ಅದು ಬೇರೆ ವಿಷಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರೇ, ನಮ್ಮ ಸರಕಾರದಲ್ಲಿ ಅಧಿಕಾರಿಗಳನ್ನು ಹೊಸದಾಗಿ ರೆಕ್ರೂಟ್ ಮಾಡಿದ್ದೇವೇನು? ನಿಮ್ಮಲ್ಲಿ ಇದ್ದುದೇ ನಾವು ತೆಗೆದುಕೊಂಡಿದ್ದೇವೆ. ನಿಮ್ಮಲ್ಲಿ ಎಂದರೆ ಹಿಂದೆ ಇದ್ದವರು. ಹೊಸದಾಗಿ ನಾವು ರೆಕ್ರೂಟ್ ಮಾಡಿಲ್ಲ, ಮಾಡಿಕೊಂಡು ಅಂತಹವರನ್ನ ಹಾಕಿ ಕೊಂಡಿದ್ದರೆ ಆ ಮಾತು ಬೇರೆ.

ಚೇರ್ಮನ್ : ಬಿ.ಜೆ.ಪಿ. ಸರಕಾರ ಬಂದರೂ ಅವರೇ ಇರುತ್ತಾರೆ. ಅದೇ ಅಧಿಕಾರಿಗಳು ಇರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊನೆಯ ಪಕ್ಷ ನಿಮ್ಮ ಬಾಯಲ್ಲಾದರೂ ಬಿ.ಜೆ.ಪಿ. ಸರಕಾರ ಬರುತ್ತದೆ ಎಂದು ಬಂತಲ್ಲ. ಆಗ ನೀವೂ ನಮ್ಮ ಜೊತೆ ಇರಬೇಕು. ಆ ಕಾಲ ಹತ್ತಿರ ಬರುತ್ತಿದೆ. ಏತಕ್ಕೆಂದರೆ ಕನಸು ಮನಸಿನಲ್ಲೂ ಬಿ.ಜೆ.ಪಿ. ಭೂತ ಬೆನ್ನು ಹತ್ತಿದೆ ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ. ಇರಲಿ ಒಳ್ಳೆಯ ಕಾಲ ಬೇಗ ಬರುತ್ತದೆ. ನಿಮ್ಮ ಬಾಯಿಂದ ಬಂದಿರುವುದು ಒಂದು ಶುಭಸೂಚನೆ. ಮೊದಲನೆಯ ದಿವಸರೇ ಹೇಳಿದ್ದೀರಿ. ಮುಂದೆ ಬರುವ ದಿವಸದಲ್ಲಿ ನಿಮ್ಮನ್ನೇ ಅಲ್ಲಿ ಕೂರಿಸಿ ನಾವು ಅಲ್ಲಿ ಕುಳಿತುಕೊಂಡು ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡುವಂತಹ ಕಾಲ ಬಹಳ ಬೇಗ ಬರುತ್ತದೆ, ಅದನ್ನು ಮಾಡೋಣ.

ಚೇರ್ಮನ್ : ಆ ಆಸೆ ಇಟ್ಟುಕೊಳ್ಳ ಬೇಡಿ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಬಹಳ ಒಳ್ಳೆಯ ದಿವಸ. ತಾವು ಮುತ್ತೈದೆಯಾಗಿ ಒಳ್ಳೆಯ ಮಾತು ಹೇಳಿದ್ದೀರಿ. ತಾವು ಒಳ್ಳೆಯ ಶುಭ ಸೂಚನೆ ಕೊಟ್ಟಿದ್ದೀರಿ. ಅದು ಆದರೂ ಆಗಬಹುದು ಯೋಚನೆ ಮಾಡಿ ನೀವೆಲ್ಲರೂ ಒಂದು ಸಮಿಶ್ರ ಸರ್ಕಾರ ಆದರೂ ಆಗಬಹುದು.

ಛೇರ್ಮನ್ : ತಾವು ಕನಸು ಕಾಣುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ತಾಯಂದಿರು ಏನಾದರೂ ಹೇಳಿದರೆ ಅದು ದೈವಿಚ್ಛೆ. ಸನ್ಮಾನ್ಯ ಅಧ್ಯಕ್ಷಿಣೀಯವರೇ ಕ್ಷಮಿಸಬೇಕು. ಕೆಲವು ಸಾರಿ ದೇವರು ಸತ್ಯಸಂಗತಿಗಳನ್ನು ನಿಮ್ಮಂತರವರ ಬಾಯಿಂದ ಆಡಿಸುತ್ತಾನೆ. ಆ ಕಾಲ್ಲ ಕೂಡಿ ಬಂದಿದೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ತಾವು ಈ ಸಮಯದಲ್ಲಿ ಆ ಜಾಗದಿಂದ ಶುಭ ಸೂಚನೆ ಕೊಟ್ಟಿದ್ದನ್ನು ನಾವು ಸ್ವಾಗತ ಮಾಡುತ್ತೇನೆ. ಈ ರಾಜ್ಯದ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಬರಗಾಲ ಪರಿಸ್ಥಿತಿ ಇದೆ. ಎಲ್ಲೆಲ್ಲಿ ಬರಗಾಲ ಪರಿಸ್ಥಿತಿ ಇದೆಯೋ ಅಲ್ಲಿ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಅಲ್ಲಿರತಕ್ಕಂಥ ಕಂದಾಯ ಮತ್ತು ಸಾಲಸೋಲಗಳನ್ನು ವಸೂಲಿ ಮಾಡದಂತೆ ರೈತರಿಗೆ ಕೃಷಿ ಕಾರ್ಮಿಕರಿಗೆ ತೊಂದರೆಯಾಗದಂತೆ ಕಾರ್ಯಕ್ರಮವನ್ನು ಏನಾದರೂ ರೂಪಿಸಿದ್ದೀರಾ? ಮತ್ತೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಬರಗಾಲಕ್ಕೆ ತುತ್ತಾಗಿ ತೀವ್ರತರವಾದ ಬೆಳೆನಾಶವಾಗಿದೆ. ನಾನು ನೀರಾವರಿ ಪ್ರದೇಶದ ಬಗ್ಗೆ ಮಾತನಾಡುತ್ತಿಲ್ಲ. ಖುಷ್ಕಿ ಭೂಮಿಯಲ್ಲಿ ಇವತ್ತು ಬೆಳೆ ನಾಶವಾಗಿ ರೈತರಿಗೆ ಪರಿಹಾರ ಧನ ಕೊಡದಿದ್ದರೆ ಆ ರೈತ ಬದುಕುವುದಾದರೂ ಹೇಗೆ? ಆತ ಬೆಳೆ ಬೆಳೆದು ಹಣ ಖರ್ಚು ಮಾಡಿ ಮಳೆ ಬಾರದೆ ಬೆಳೆ ಎಲ್ಲಾ ಸಂಪೂರ್ಣವಾಗಿ ನಾಶವಾಗಿದೆ. ಲೋಕಸಭಾ ಚುನಾವಣೆ ಬರುತ್ತದೆಯೋ ಏನೋ ಗೊತ್ತಿಲ್ಲ ಮತ್ತೊಮ್ಮೆ ತಾವು ಜನರನ್ನು ಭೇಟಿ ಮಾಡತಕ್ಕಂಥ ಸಂದರ್ಭ ಬಂದರೂ ಬರಬಹುದು. ಆದ್ದರಿಂದ ನಾನು ತಮಗೆ ಒಂದು ಕಿವಿ ಮಾತು ಹೇಳುವುದೇನೆಂದರೆ ಈ ರೀತಿನೊಂದ ರೈತರು, ಬೆಳೆ ನಾಶವಾಗಿ ತೊಂದರೆ

ಪಡತಕ್ಕಂಥ ರೈತರು ಖುಷ್ಕಿ ಜಮಿನಿನಲ್ಲಿ ಬೆಳೆ ಕಳೆದುಕೊಂಡಂತಹ ರೈತರು ಇವರಿಗೆ ಪರಿಹಾರ ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ಮನಸ್ಸು ಏನಾದರೂ ಇದೆಯೇ? ಇನ್ನು ಎರಡನೆಯದಾಗಿ ಬರಗಾಲ ಕಾಮಗಾರಿಗಳಲ್ಲಿ ದಿನಕ್ಕೆ 12 ರೂಪಾಯಿಗಳ ಕೂಲಿ ಕೊಡುತ್ತಿದ್ದೀರಿ, ನಾವು ಮೊದಲಿನಿಂದಲೂ ಒತ್ತಾಯ ಮಾಡುತ್ತಲೇ ಬಂದಿದ್ದೇವೆ.

ಇವತ್ತು ಬೆಲೆಗಳು ಗಗನಕ್ಕೇರಿವೆ. ಅವತ್ತಿನಿಂದ ಇವತ್ತಿನವರೆಗೂ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ತಮಗೆಲ್ಲಾ ಗೊತ್ತಿರಬಹುದು. ಮಹಾರಾಷ್ಟ್ರದಲ್ಲಿ ನಮ್ಮ ಕಡೆಯಿಂದ ಹೋದಂತಹ ಜನ ಶುಗರ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಿ ದಿನಕ್ಕೆ 75-80ರೂಪಾಯಿಗಳು ದುಡಿಯುತ್ತಿದ್ದಾರೆ. ಅದೇ ನಮ್ಮ ರಾಜ್ಯದಲ್ಲಿ ಒಂದು ದಿನಕ್ಕೆ 12 ರೂಪಾಯಿಗಳ ಕೂಲಿ ಕೊಟ್ಟರೆ ಬೆಲೆಗಳು ಗಗನಕ್ಕೇರಿರುವ ಸಂದರ್ಭದಲ್ಲಿ ಅವನು ಜೀವನ ಮಾಡುವುದಾದರೂ ಹೇಗೆ? ಈ ಬಗ್ಗೆ ಹಿಂದೆ ನಾವು ಚರ್ಚೆ ಮಾಡಿದಾಗ ಪರಿಶೀಲನೆ ಮಾಡುತ್ತೇನೆಂದು ಹೇಳಿದಿರಿ. ಕೊನೆಯ ಪಕ್ಷ ತಾವು ಈ ಬಗ್ಗೆ ಪ್ರಾಮಾಣಿಕವಾದ ಕೆಲಸ ಮಾಡಬೇಕು. ಎಲ್ಲಿ ಪ್ರಗತಿ ಕಾಣುವ ಅಪೇಕ್ಷೆ ಇದೆ ಅಲ್ಲಿ ಇವರಿಗೆ ಭೀಕ್ಷೆ ರೂಪದಲ್ಲಿ ಕೊಡದೆ ಕೃಷಿ ಕಾರ್ಮಿಕ ತನ್ನ ಕಾಲ ಮೇಲೆ ತಾನು ನಿಂತು ಜೀವನ ಮಾಡುವ ಪರಿಸ್ಥಿತಿ ಇರಬೇಕು. ಇವರ ಬಗ್ಗೆ ತಮಗೆ ಕಳಕಳಿ ಇದ್ದರೆ 12 ರೂಪಾಯಿಗಳಿಂದ ಕನಿಷ್ಟ 20 ರೂಪಾಯಿಗಳನ್ನಾದರೂ ಜಾಸ್ತಿ ಮಾಡುವುದಕ್ಕೆ ಆಜ್ಞೆ ಮಾಡುತ್ತೀರಾ? ಇದಕ್ಕೆ ವಿಶೇಷವಾದ ಪ್ರಯತ್ನ ಮಾಡಬೇಕು. ಇವತ್ತು ತಾವು ಜಿಲ್ಲಾಧಿಕಾರಿಗಳಿಗೆ ಈ ರೀತಿ ಆದೇಶ ಕೊಡುತ್ತೀರಾ? ಮತ್ತು ನಾಳೆ ಈ ಸದನ ಮುಗಿದ ಮೇಲೆ ವಾರಕ್ಕೆ ಒಮ್ಮೆಯಾದರೂ ಬರಗಾಲ ಪೀಡಿತ ಪ್ರದೇಶದಲ್ಲಿ ನಡೆಯುವ ಕಾಮಗಾರಿ ಕೆಲಸದ ಹತ್ತಿರ ಅವರು ಹೋಗಬೇಕು ಅವರು ತಹಶೀಲ್ದಾರರ ಜೊತೆ ಮಾತನಾಡುವುದಕ್ಕೆ ಅಲ್ಲ.

ಸ್ಥಳ ಪರಿಶೀಲನೆ ಮಾಡಿ ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ತಿಳಿದು ಕೊಳ್ಳುವುದಕ್ಕೆ ವಾರಕ್ಕೆ ಒಮ್ಮೆಯಾದರೂ ಜಿಲ್ಲಾಧಿಕಾರಿಗಳು ಹೋಗಬೇಕು. ಅವರು ವೆಹಿಕಲ್ ತೆಗೆದುಕೊಂಡರೆ 4-5 ತಾಲ್ಲೂಕುಗಳನ್ನು ಒಂದು ತಿಂಗಳಲ್ಲಿ ಕವರ್ ಮಾಡಬಹುದು. ಬರಗಾಲ ಪೀಡಿತ ಕಾಮಗಾರಿ ಕೆಲಸಗಳ ಹತ್ತಿರ ಜಿಲ್ಲಾಧಿಕಾರಿಗಳು ಹೋಗಿ ತಿಳಿದುಕೊಳ್ಳಬೇಕು. ಇನ್ನು ಮಾರ್ಚ್. ಏಪ್ರಿಲ್ , ಮೇ ತಿಂಗಳುಗಳಲ್ಲಿ ಬರತಕ್ಕಂಥ ದಿವಸಗಳಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ಭರವಸೆ ಕೊಟ್ಟಿದ್ದೀರಿ. ಮತ್ತೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ತುರ್ತಾಗಿ ಕೊನೆಯ ಪಕ್ಷ ಪಡಿತರ ಪದ್ಧತಿಯಲ್ಲಿ ದವಸಧಾನ್ಯಗಳನ್ನು ಒದಗಿಸುವಂತಹ ಕೆಲಸ ರೂಪಿಸುತ್ತೀರಾ? ನಮಗೆ ಗೊತ್ತಿರುವ ಹಾಗೆ ಹಿಂದೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಅಕ್ಕಿ , ಜೋಳ ಕೊಡುತ್ತಿದ್ದರು. ಆದರೆ ಅದು ಈಗ ಕಾಣುತ್ತಿಲ್ಲ. ಆಹಾರಧಾನ್ಯಗಳನ್ನು ಕೊಟ್ಟರೆ ಅವನು ಊಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮನೆಯ ಮಕ್ಕಳು ಗಂಜಿ ಕುಡಿಯುವುದಕ್ಕೆ ಅನುಕೂಲವಾಗುತ್ತದೆ. ಉಳಿದ ಅರ್ಧ ದುಡ್ಡು ಅವನ ವಿವಿಧ ಚಟಗಳಿಗೆ ತೀರಿಸಿಕೊಂಡರು ತಾವು ಕೊಡುವ ರಾಗಿ ಅಕ್ಕಿ ಮನೆಯ ಮಕ್ಕಳಿಗೆ ಊಟ ಆಗುತ್ತದೆ. ಆದ್ದರಿಂದ ತಾವು ಪಡಿತರ ಪದ್ಧತಿಯನ್ನು ಈ ಕಾಮಗಾರಿಗಳಲ್ಲಿ ಹೆಚ್ಚು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ತಾವು ಏನಾದರೂ ಕಾರ್ಯಕ್ರಮವನ್ನು ರೂಪಿಸಿದ್ದೀರಾ? ಕಳೆದ 5 ವರ್ಷಗಳಿಂದಲೂ ಮಾರ್ಚ್ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬರಗಾಲಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದ್ದರು ಎನ್ನುವ ಅಂಕಿಅಂಶಗಳನ್ನು ತರಿಸಿ ನೋಡಿ ಈ ಅವಧಿಯಲ್ಲಿ ಎಷ್ಟು ದಿವಸ ಉದ್ಯೋಗ ಕೊಟ್ಟಿದ್ದರು ಎನ್ನುವ ಅಂಕಿಅಂಶಗಳನ್ನು ತೆಗೆದುಕೊಂಡು ಆ ಒಂದು ಆಧಾರದ ಮೇಲೆ ಇವತ್ತು ಮೊದಲಿನಂತೆ ಉದ್ಯೋಗ ಒದಗಿಸುವುದಕ್ಕೆ ಯಾವ ಕಾರ್ಯಕ್ರಮವನ್ನು ತಾವು ರೂಪಿಸಿದ್ದೀರಿ? ಈ ಬಗ್ಗೆ ತಾವು

ವಿಶೇಷವಾದ ಒಂದು ವ್ಯವಸ್ಥೆಯನ್ನು ಮಾಡಬೇಕು ಮತ್ತೆ ಎಲ್ಲಾ ಕಡೆ ಗೋಶಾಲೆಗಳ ಅವಶ್ಯಕತೆ ಇಲ್ಲ.

ಕೆಲವು ಕಡೆ ದುರುಪಯೋಗ ಆಗುವಂತಹ ಸಂದರ್ಭಗಳು ಇರಬಹುದು ಅದಕ್ಕೆ ಅಗತ್ಯ ಇರುವಂತಹ ಕಡೆ ಜಿಲ್ಲಾಧಿಕಾರಿಗಳು ಪ್ರತ್ಯೇಕವಾಗಿ ಭೇಟಿ ಮಾಡಿ ನೋಡಿ ಅಗತ್ಯವಿದ್ದರೆ ಗೋಶಾಲೆಗಳನ್ನು ಪ್ರಾರಂಭ ಮಾಡುವುದು ತುಂಬಾ ಅಗತ್ಯವಿದೆ. ನಾನು ಪ್ರಾರಂಭದಲ್ಲಿ ಹೇಳಿದಂತೆ ಇವತ್ತು ಬರಗಾಲ ಪರಿಸ್ಥಿತಿ ತೀವ್ರವಾಗುವಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಕಳಕಳಿ ವಹಿಸಬೇಕು. ತಮಗೆ ನನಗಿಂತ ಹೆಚ್ಚು ಕಳಕಳಿ ಇದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಬಡವನ ಕಷ್ಟ ಅರಿತು ಕೊಳ್ಳುವಂತಹ ಶಕ್ತಿ ತಮಗೆ ಇದೆ.

4.30 ಪಿ. ಎಂ

ಆದರೆ, ಇವತ್ತು ಹಣಕಾಸಿನ ಅಭಾವದಿಂದ ಈ ಪರಿಸ್ಥಿತಿ ಇರಬೇಕಾದರೆ, ಯಾವುಯಾವುದೋ ಅನಗತ್ಯ ಖರ್ಚು ಮಾಡುವಂಥ ಸಂದರ್ಭದಲ್ಲಿ ಕೊನೆ ಪಕ್ಷ ಹಣವನ್ನೆಲ್ಲಾ ಕ್ರೋಢೀಕರಿಸಿ ಮಂತ್ರಿಮಂಡಲದ ಸಭೆಯಲ್ಲಿ ಚರ್ಚೆ ಮಾಡಿ ಹೆಚ್ಚಿನ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನೆ ಮಾಡುತ್ತೀರಾ? ಇವತ್ತು ನೀವು ಏನು ಕರ್ಚು ಮಾಡಿದ್ದೀರಿ? ನೀವು ಏನು ಹೇಳುತ್ತೀರಿ? ಕೇಂದ್ರ ಸರ್ಕಾರವು ಪ್ರತಿ ವರ್ಷಕ್ಕೆ ಎಷ್ಟು ದುಡ್ಡು ಕೊಟ್ಟಿದೆಯೋ ಅಷ್ಟನ್ನು ಮಾತ್ರ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರವನ್ನು ಈ ರೈತನಿಗೆ, ಕೃಷಿ ಕಾರ್ಮಿಕನಿಗೆ ಏಕೆ ತೋರಿಸುತ್ತೀರಿ? ಸರ್ಕಾರದಲ್ಲಿ ನಿಮ್ಮ ಅದ್ಯ ಕರ್ತವ್ಯ ಇದೆ. ಇವತ್ತಿನ ಪರಿಸ್ಥಿತಿಯಲ್ಲಿ ನೀವು ಏನು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಯಾವುದೇ ಒಂದು ಪರಿಸ್ಥಿತಿಯನ್ನು ನಾವು ನಿಭಾಯಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೀರಿ? ಅದನ್ನು ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ ನೀವು ಹಣವನ್ನು ಎಲ್ಲಿಂದ ತರುತ್ತೀರಿ? ಇವತ್ತು ನಾನು ಹೇಳುತ್ತೇನೆ, ಈ ಸದನ ಸೇರುವಂಥ ಸಮಯದಲ್ಲಾದರೂ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು. ನನಗೆ ಗೊತ್ತಿರುವ ಪ್ರಕಾರ ಕಳೆದ 8-10 ದಿವಸದ ಈಚೆಗೆ ಈ ರಾಜ್ಯದಲ್ಲಿ ಎಲ್ಲೂ ಬರಗಾಲಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲ. ಜಿಲ್ಲಾಧಿಕಾರಿಗಳು ದುಡ್ಡು ಇಟ್ಟುಕೊಂಡು ಕುಳಿತಿದ್ದಾರೆ. ಜಿಲ್ಲಾಧಿಕಾರಿಗಳಿಗೆ ದುಡ್ಡು ಕೊಟ್ಟ ಮೇಲೂ ಅವರು ಹಳ್ಳಿ ಹಳ್ಳಿಗೆ ಹೋಗಿ ಅಗತ್ಯ ಇರುವ ಕಡೆ ಹಣ ಕರ್ಚು ಮಾಡಿಲ್ಲ. ಇಂಥಾ ಜಿಲ್ಲಾಧಿಕಾರಿಗಳನ್ನು ಸಸ್ಪೆಂಡ್ ಮಾಡಿ. ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಜಿಲ್ಲಾಧಿಕಾರಿ ನಿಮ್ಮ ಹಿಡಿತದಲ್ಲಿ ಇರಬೇಕಾಗುತ್ತದೆ. ಕೊಟ್ಟ ದುಡ್ಡನ್ನು ಅಗತ್ಯ ಇರುವ ಕಡೆ ಖರ್ಚು ಮಾಡಬೇಕಾಗುತ್ತದೆ. ಖರ್ಚು ಮಾಡದೇ ಇದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಕೊನೆಯದಾಗಿ, ಜವಹಾರ್ ರೋಜ್‌ಗಾರ್ ಯೋಜನೆ ಬಗ್ಗೆ, ಇದರಲ್ಲಿ ದೊಡ್ಡ ಅಕ್ಷಮ್ಯ ಅಪರಾಧವನ್ನು ಮಾಡುತ್ತಿದ್ದೀರಿ. ಮಂಡಲ ಪಂಚಾಯಿತಿಗಳಲ್ಲಿ ಅಗತ್ಯ ಇರುವಂಥ ಕೆಲಸ ಮಾಡುವುದಕ್ಕೋಸ್ಕರ ಈ ಜವಹಾರ್ ರೋಜ್‌ಗಾರ್ ಕಾರ್ಯರೂಪಕ್ಕೆ ಬಂದಿದೆ. ಅಲ್ಲಿನ ಮಂಡಲ ಪಂಚಾಯಿತಿ ಪ್ರಧಾನರು ಮತ್ತು ಸದಸ್ಯರುಗಳೆಲ್ಲಾ ಸೇರಿಕೊಂಡು ಯಾವ ಕೆಲಸ ಆಗಬೇಕಾಗಿತ್ತೋ ಅವುಗಳನ್ನು ಅರ್ಧಂಬರ್ಧ ಮಾಡಿಟ್ಟುಕೊಂಡಿದ್ದಾರೆ. ಇಂಥಾ ಸಮಯದಲ್ಲಿ ಆ ದುಡ್ಡನ್ನು ವಾಪಸ್ ತೆಗೆದುಕೊಂಡು ಬೇರೆ ಕಡೆ ಕೊಡುವಂಥಾದ್ದು ಸರಿಯಲ್ಲ. ಇದು ಅಧಿಕಾರ ವಿಕೇಂದ್ರೀಕರಣಕ್ಕೆ ಅರ್ಥವಿಲ್ಲದಂತಾಗುತ್ತದೆ, ಮತ್ತು ಆ ಚುನಾಯಿತ ಪ್ರತಿನಿಧಿಗಳಿಗೆ ಒಂದು ರೀತಿಯ ಅನ್ಯಾಯ ಮಾಡಿದಂತಾಗುತ್ತದೆ. ಜನಗಳ ಮುಂದೆ ಅಪರಾಧಿಗಳಾಗಿ ನಿಲ್ಲುವಂಥಾ ಒಂದು ದುಸ್ಥಿತಿ ಇವತ್ತು ಚುನಾಯಿತ ಪ್ರತಿನಿಧಿಗಳಿಗೆ ತರುತ್ತಿದ್ದೀರಿ.

ದಯಮಾಡಿ ಈ ಕೆಲಸ ಮಾಡಬೇಡಿ. ಹಣ ಇಲ್ಲವೆಂದು ಹೇಳಿ ಯಾವ ಯಾವುದೇ ಬಾಬಿನ ಹಣವನ್ನು ಡ್ರಾ ಮಾಡಿಕೊಂಡು ಮಂಡಲ ಪಂಚಾಯಿತಿ ಪ್ರಧಾನ ಮತ್ತು ಸದಸ್ಯರುಗಳಿಗೆ ಅಪಮಾನ ಮಾಡುವಂಥ ಈ ಕೆಲಸ ಏನಿದೆ ಇದು ಸರಿಯಲ್ಲ. ನಿಜಕ್ಕೂ ರಾಜಕಾರಣ ಬೇಕಾದಷ್ಟು ಇರಬಹುದು, ಆದ್ದರಿಂದ ಜನಪಾರ್ ರೋಜ್‌ಗಾರ್ ಯೋಜನೆಯಿಂದ ಹಣವನ್ನು ತೆಗೆದುಕೊಳ್ಳುವಂಥ ಅಗತ್ಯ ಇಲ್ಲ. ತಂದಿರುವಂಥ ಹಣವನ್ನು ವಾಪಸ್ ಕೊಡಬೇಕು. ಆಮೇಲೆ, ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುವುದು, ಕುಡಿಯುವ ನೀರಿನ ಸಮಸ್ಯೆ ಇವತ್ತು ವಿಚಿತ್ರವಾದ ಸ್ಥಿತಿಯಲ್ಲಿ ಇದೆ.

ದಯಮಾಡಿ ನೀರಿನ ದೃಷ್ಟಿಯಿಂದ ಎಲ್ಲೆಲ್ಲಿ ನೀರನ್ನು ಲಾರಿಗಳಲ್ಲಿ ಒದಗಿಸಿಕೊಡುವುದಕ್ಕೆ ಸಾಧ್ಯವಿದೆಯೋ ಅಂಥಾ ಕಡೆ ನೀರನ್ನು ಒದಗಿಸಿಕೊಡಬೇಕು. ಪುನಃ ಇದರ ಬಗ್ಗೆ ಚರ್ಚೆ ಮಾಡುವುದಕ್ಕಾಗುವುದಿಲ್ಲ. ವಿಶೇಷವಾಗಿ ಮುಂದಾಲೋಚನೆ ಮಾಡಿ ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಂತರ ಗ್ರಾಮಾಂತರ ಪ್ರದೇಶದಿಂದ ಬಂದಂಥ ಕೃಷಿ ಕಾರ್ಮಿಕರಿಗೆ, ಬೆಲೆ ನಾಶವಾಗಿರುವಂಥ ರೈತರುಗಳಿಗೆ, ಕೂಲಿಯನ್ನೇ ಅವಲಂಬಿಸಿರುವಂಥ ಬಡವನಿಗೆ ನ್ಯಾಯ ಒದಗಿಸಿಕೊಡುವ ದೃಷ್ಟಿಯಿಂದ ವಿಶೇಷವಾದಂಥ ಕಾರ್ಯಕ್ರಮವನ್ನು ರೂಪಿಸಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ನೀವು ಉತ್ತರ ಕೊಡುವ ಸಂದರ್ಭದಲ್ಲಿ, ಕಳೆದ ಎರಡು ಮೂರು ತಿಂಗಳಿಂದ ಯಾವಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ. ಈಗ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಬಾಕಿ ಕೊಡುವುದಿದೆ, ಕೆಲಸ ಆಗಿರುವ ಎಷ್ಟು ಕಡೆ ಹಣ ಕೊಟ್ಟಿಲ್ಲ? ಯಾವ ಯಾವ ಜಿಲ್ಲೆಗಳಲ್ಲಿ ಕೊಟ್ಟಿರುವ ಹಣವನ್ನು ಖರ್ಚು ಮಾಡಿಲ್ಲ? ಹಾಗಾದರೆ ಅಲ್ಲಿ ಅಭಾವ ಇಲ್ಲವೇ? ಎಂದು ಹೇಳಬೇಕು. ಎಲ್ಲಿ ಹಣದ ಅಗತ್ಯ ಇರುವುದಿಲ್ಲವೋ ಅದನ್ನು ಡ್ರಾ ಮಾಡಿಕೊಂಡು ಅಗತ್ಯ ಇರುವ ಕಡೆ ಹಣವನ್ನು ಬಿಡುಗಡೆ ಮಾಡಬೇಕು. ಇದರ ಜೊತೆಗೆ ಅತಿವೃಷ್ಟಿಗೆ ರೈತರುಗಳು ತುತ್ತಾಗಿ ನಷ್ಟವಾಗಿರುವ ಕಡೆಯೂ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮ್‌ಗಲ್) : ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ದಿವಸ ಈ ಕಡೆಯ ಮಾನ್ಯ ಸದಸ್ಯರ ಒತ್ತಾಯದ ಮೇರೆಗೆ ರಾಜ್ಯದಲ್ಲಿ ಬಂದಿರತಕ್ಕ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಅನುಮತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರವು ಪೂರ್ತಿಯಾಗಿ ಅಲ್ಲದಿದ್ದರೂ ಸ್ವಲ್ಪ ಮಾಹಿತಿಯನ್ನು ಒದಗಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಎಲ್ಲಾ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅನೇಕ ಸಾರಿ ಇದು ಚರ್ಚೆಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರು ಬಹಳ ಪ್ರಮುಖವಾಗಿರತಕ್ಕಂಥ ಸಮಸ್ಯೆ. ಇದರ ಜೊತೆಗೆ ಅತಿ ಮುಖ್ಯವಾಗಿ ಇರತಕ್ಕಂಥದ್ದು ಈ ವಿದ್ಯುಚ್ಛಕ್ತಿ ಪರಿಸ್ಥಿತಿ. ಇವೆರಡರ ಬಗ್ಗೆ ನಾನು ಕೆಲವು ಮಾತುಗಳನ್ನಾಡಬೇಕಾಗಿದೆ. ಈ ವಿಚಾರ ಪ್ರಸ್ತಾಪವಾಗುವಾಗ, ಕುಡಿಯುವ ನೀರಿನ ಜವಾಬ್ದಾರಿ ಹೊತ್ತಿರತಕ್ಕಂಥ ಗ್ರಾಮೀಣಾಭಿವೃದ್ಧಿ ಸಚಿವರು ಸದನದಲ್ಲಿ ಇರಬೇಕಾಗಿತ್ತು. ಅವರನ್ನು ಕರೆಯಿಸುತ್ತೇವೆಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಆದರೆ ಇಲ್ಲಿಯವರೆಗೂ ಅವರನ್ನು ಕರಿಯಿಸಿಲ್ಲ. ಮಾನ್ಯ ಕಂದಾಯ ಸಚಿವರು ಹೇಳಿದರು ಕರೆಯಿಸುತ್ತೇವೆ ಎಂದು. ಇಲ್ಲಿಯವರೆಗೆ ಕೂಡ ಕರೆಯಿಸಲಿಲ್ಲ. ಈ ಸದನದಲ್ಲಿಯೇ ಈ ರೀತಿಯ ಪರಿಸ್ಥಿತಿ ಇದೆ. ಈಗ ನಾನು ಹೆಚ್ಚಿಗೆ ಕುಡಿಯುವ ನೀರಿನ ಬಗ್ಗೆ ಮಾತನಾಡಬೇಕೆಂದಿದ್ದೇನೆ. ಯಾರಿಗೆ ಮಾತನಾಡಬೇಕು? ಮಾನ್ಯ ಬಸವಲಿಂಗಪ್ಪನವರ ಖಾಲಿ ಕುರ್ಚಿಗೆ ಮಾತನಾಡಬೇಕೇ? ಇಲ್ಲ ಅವರು ಬರುವವರೆಗೆ ನಾನು ಹೇಳುವುದನ್ನು ಬಿಡಬೇಕೇ?

ಛೇರ್ಮನ್ : ಅವರೇ ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ಈಗ ಹೊಸದಾಗಿ ನಾನು ಪ್ರಸ್ತಾಪ ಮಾಡುತ್ತಾ ಇಲ್ಲ. ಸುಮಾರು ಅರ್ಧ ಗಂಟೆ, ಮುಕ್ಕಾಲು ಗಂಟೆಯ ಹಿಂದೆ ಇದನ್ನು ಪ್ರಸ್ತಪ ಮಾಡಿದ್ದೇನೆ. ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಬಗ್ಗೆ ತೀವ್ರ ತರವಾದಂತಹ ಪರಿಸ್ಥಿತಿ ಇದೆ. ಮಾನ್ಯ ಸಚಿವರಿಗೆ ಗೊತ್ತಿದೆ. ಅವರು ನಮ್ಮ ಜಿಲ್ಲೆಗೆ ಬಂದಿದ್ದರು. ಬೇರೆ ಕಡೆಗೆ ಕೂಡ ಹೋಗಿದ್ದಾರೆ. ಏನು ಪರಿಸ್ಥಿತಿ ಇದೆ ಎನ್ನುವುದು ಅವರಿಗೆ ಗೊತ್ತಿದೆ.

ಆದರೆ ಇವರು ಹೇಳಿದ ಮಾತು ಈ ಸದನದಲ್ಲಿಯೇ ನಡೆಯದಿದ್ದರೆ ಹೊರಗಡೆ ಎಷ್ಟರಮಟ್ಟಿಗೆ ಕಾರ್ಯಗತ ಮಾಡುತ್ತಾರೆ ಎಂಬ ನಂಬಿಕೆ ನಮಗೆ ಬರಬೇಕಲ್ಲ. ಸುಮಾರು 15 ದಿವಸದ ಹಿಂದೆ ನಮ್ಮ ಜಿಲ್ಲೆಗೆ ಕಂದಾಯ ಸಚಿವರು ಬಂದಿದ್ದರು. ಅದಕ್ಕೆ ಮೊದಲು ನಾವು ನಮ್ಮ ಜಿಲ್ಲೆಯಲ್ಲಿರತಕ್ಕ ಎಲ್ಲಾ ಶಾಸಕರೂ ಸಹ, ಪಕ್ಷ ಭೇದವನ್ನು ಮರೆತು ಎಲ್ಲಾ ಶಾಸಕರು ಸರ್ಕಾರಕ್ಕೆ ಕುಡಿಯುವ ನೀರಿನ ಬಗ್ಗೆ ಒಂದು ಮನವಿಯನ್ನು ಮಾಡಿದೆವು. ಪ್ರತಿ ತಾಲ್ಲೂಕಿನಲ್ಲಿ ಸರಾಸರಿ ಸುಮಾರು ಒಂದು ನೂರು ಕೊಳವೆ ಬಾವಿಗಳನ್ನು ನಮ್ಮ ಜಿಲ್ಲೆಗೆ ಕೊಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೆವು. ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿ ಶ್ರೀ ರಾಜೂ ಅವರು ಇದ್ದರು. ಅವರು ಬಂದಾಗ ವಿವರವಾಗಿ ಚರ್ಚೆ ನಡೆದು ಸುಮಾರು ಒಂದು ಸಾವಿರ ಕೊಳವೆ ಬಾವಿಗಳನ್ನು ತೋಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಬೇಡಿಕೆ ಇಟ್ಟಿದ್ದೆವು. ಒಂದು ಸಾವಿರ ಒಂದು ಪಕ್ಷ ಇರಲಿ, ಒಂದೇ ಒಂದು ಕೊಳವೆ ಬಾವಿಯನ್ನು ತೋಡಲಿಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಲಿಲ್ಲ. ಶ್ರೀ ರಾಜೂ ಅವರು ಬಂದಂತಹ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಸರ್ಕಾರದಿಂದ ಸುಮಾರು 25 ಲಕ್ಷ ರೂಪಾಯಿಗಳು ಬಿಡುಗಡೆ ಆಗಿತ್ತು. ಮತ್ತು ಸುಮಾರು 10 ಲಕ್ಷ ರೂಪಾಯಿಗಳು ನಗರ ಪ್ರದೇಶಕ್ಕೆ ಬಿಡುಗಡೆ ಆಗಿತ್ತು. ಅದು ಆದ ಮೇಲೆ ಮೊನ್ನೆ ಮಾನ್ಯ ಖರ್ಗೆಯವರು ಬರುವವರೆಗೂ ಕೂಡ 18 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಎಂದು ಸಭೆಯಲ್ಲಿ ಹೇಳಿದರು. ಅಲ್ಲಿಯವರೆಗೆ ಒಂದು ನಯಾ ಪೈಸೆ ಹೆಚ್ಚಿಗೆ ನಮ್ಮ ಜಿಲ್ಲೆಗೆ ಬಿಡುಗಡೆ ಆಗಿರಲಿಲ್ಲ.

ನಾವು ಇದನ್ನು ಎಷ್ಟೇ ಒತ್ತಾಯ ಮಾಡಿ ಹೇಳಿದರೂ ಕೂಡ ಸರ್ಕಾರ ಈ ಕಡೆ ಗಮನ ಕೊಡುವಂತಹ ಪ್ರಯತ್ನವನ್ನು ಮಾಡಲಿಲ್ಲ. ಯಾವ ಊರಿಗೆ ಹೋಗಲಿ, ಯಾವ ಊರಿಗೆ ಹೆಜ್ಜೆ ಇಡಲಿ, ಹಳ್ಳಿಯಲ್ಲಿ ಇರತಕ್ಕ ಜನ ನೀರು ನೀರು ಎಂದು ಮುತ್ತಿಗೆ ಹಾಕುತ್ತಾರೆ. ನಾವು ಇದನ್ನು ಮನಗಂಡು ಸರ್ಕಾರಕ್ಕೆ ಎಷ್ಟೋ ಸಾರಿ ಹೇಳಿದರೂ ಸಹ ಈ ಸಮಸ್ಯೆಯನ್ನು ಬಗೆಹರಿಸತಕ್ಕ ಪ್ರಯತ್ನ ಮಾಡದೇ ಇದ್ದಾಗ ನಮ್ಮ ಜಿಲ್ಲೆಯ ಜನ ಮತ್ತು ನಾನು ಸಹ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದವನ್ನು ಬರೆದೆವು. ಹೋದ ತಿಂಗಳು 20ನೇ ತಾರೀಖಿನ ಒಳಗಾಗಿ ಸಮಸ್ಯೆಯನ್ನು ಬಗೆಹರಿಸದಿದ್ದರೆ ನಾವು 25ನೇ ತಾರೀಖಿನ ದಿವಸ ನಿಮ್ಮ ಮನೆಯ ಮುಂದೆ ಧರಣಿ ಸತ್ಯಾಗ್ರಹ ಮಾಡುತ್ತೇನೆ ಎಂದು ಪತ್ರವನ್ನು ಎಚ್ಚರಿಕೆ ರೂಪವಾಗಿ ಕಳುಹಿಸಿದೆ. ಆಗಲಾದರೂ ಕೂಡ ಪರಿಸ್ಥಿತಿ ಸುಧಾರಣೆ ಆಗಲಿಲ್ಲ. ಕೊನೆಗೆ ಧರಣಿ ಸತ್ಯಾಗ್ರಹ ಆಯಿತು. ಆದರೂ ಕೂಡ ಸುಧಾರಣೆ ಆಗಿದೆ ಎಂದರೆ ಸುಧಾರಣೆ ಆಗತಕ್ಕ ಚಿನ್ಹೆಗಳೂ ಕೂಡ ಇಲ್ಲ. ನಿಜ, ವಿದ್ಯುಚ್ಛಕ್ತಿ ಸ್ವಲ್ಪ ಸುಧಾರಣೆ ಆಗಿದೆ, ಅದನ್ನು ನಾನು ಒಪ್ಪುತ್ತೇನೆ.

ಆದರೆ ಕುಡಿಯುವ ನೀರಿನ ಬಗ್ಗೆ ಇಲ್ಲಿಯವರೆಗೆ ನಾವು ಕೊಟ್ಟಂತಹ ಸಲಹೆಗಳಾಗಲೀ ಅಥವಾ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಂದಾಗ ಅವರು ಹೇಳಿದಂತಹ ಮಾತು ಆಗಲಿ. ಅಥವಾ ಶ್ರೀಮಾನ್ ರಾಜೂ ಅವರು ಹೇಳಿದಂತಹ

ಮಾತಾಗಲೀ ಇಲ್ಲಿಯವರೆಗೆ ಕೂಡ ಜಾರಿ ಆಗತಕ್ಕ ಪರಿಸ್ಥಿತಿ ಇಲ್ಲ. ಶೇಕಡ 80ರಿಂದ 90ರಷ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹಳ್ಳಿಯಲ್ಲಿ ಇವತ್ತಿನ ದಿವಸ ಕುಡಿಯುವ ನೀರಿನ ತೊಂದರೆ ಇದೆ. ಕೊಳವೆ ಬಾವಿಗಳನ್ನು ಹಾಕಿ ಎಂದರೆ ಇವರು ಹೇಳತಕ್ಕದ್ದು ಏನು? ಈ ಜನಾರೋಗ್ಯ ಇಲಾಖೆಗೆ ಮಾಮೂಲಾಗಿ ಯಾವ ಯಾವ ಯೋಜನೆಗಳ ಮೂಲಕ ಕುಡಿಯುವ ನೀರಿಗೋಸ್ಕರ ಹಣ ಬರಬೇಕಾಗಿತ್ತು ಆ ಹಣ ಬಂದಿದೆ. ಅದು ಬಂದಿಲ್ಲ ಎಂದು ಹೇಳುವುದಿಲ್ಲ. ಆದರೆ ನಮ್ಮ ಜಿಲ್ಲೆಯಲ್ಲಿ ಎಷ್ಟು ಖರ್ಚಾಗಿದೆ ಎಂದರೆ 100ಕ್ಕೆ 105ರಷ್ಟು ಖರ್ಚು ಆಗಿದೆ. ಇಲ್ಲಿ ಕೊಟ್ಟಿರತಕ್ಕ ಹಣಕ್ಕಿಂತ ಹೆಚ್ಚಿಗೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಖರ್ಚು ಆಗಿದೆ. ಆದರೆ ಇವರು ಕೇಳತಕ್ಕದ್ದು ಏನು? ರೀವ್ಯೂ ಮಾಡಿದಾಗ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ.

ಬೇರೆ ಬೇರೆ ಬಾಬುಗಳಲ್ಲಿ ಯಾವಯಾವ ಹಣ ಖರ್ಚು ಮಾಡಿದ್ದೇವೆ ಎನ್ನತಕ್ಕ ಲೆಕ್ಕವನ್ನು ಮಾನ್ಯ ಕಂದಾಯ ಸಚಿವರು ತೆಗೆಸಿದರು. ತೆಗೆದಾಗ ಇಂತಹ ಬಾಬಿನಲ್ಲಿ ಈ ರೀತಿ ಇದೆ, ಇದನ್ನು ಮಾಡಿ ಎಂದು ಕಟ್ಟಾ ನಿರ್ದೇಶನವನ್ನು ಅಲ್ಲಿಯೇ ಕೊಟ್ಟು ಬಂದರು. ಆದರೆ ಇವರು ಹೇಳಿರತಕ್ಕದ್ದಕ್ಕೂ ಹಾಗೂ ಅಲ್ಲಿರತಕ್ಕ ಅವಶ್ಯಕತೆಗೂ ಕೂಡ ಅಜಗಜಾಂತರ ವ್ಯತ್ಯಾಸ ಇದೆ.

ಇದರಿಂದಾಗಿ ಇವೊತ್ತಿನ ಶೇಕಡಾ 80ರಷ್ಟು ಭಾಗದ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಇದೆ. ಇದನ್ನು ಕೂಡಲೇ ನಿವಾರಿಸತಕ್ಕಂಥ ಅವಶ್ಯಕತೆ ಇದೆ. ನಮ್ಮ ಬಾಗಗಳಲ್ಲಿ ಸಾರಾಸಗಟು ನೀರಿನ ಆಳ 400-500 ಅಡಿಗಳಿಗೂ ಮೀರಿ ಹೋಗಿವೆ. ಮೊದಲು 100-150 ಅಡಿಗಳಷ್ಟು ಆಳದಲ್ಲಿಯೇ ನೀರು ಸಿಗುತ್ತಾ ಇತ್ತು. ಹೀಗಾಗಿ ನಮ್ಮ ಭಾಗದಲ್ಲಿ ಕೊಳವೆ ಬಾವಿಗಳನ್ನು ತೋಡತಕ್ಕಂಥ ರಿಗ್ ಯಂತ್ರಗಳು ಏನಿವೆ ಅವುಗಳ ಕೊರಯುವ ಸಾಮರ್ಥ್ಯ ಕಡಿಮೆ ಇದೆ. 400-500 ಅಡಿಗಳಷ್ಟು ಆಳಕ್ಕೆ ತೋಡತಕ್ಕಂಥ ಕೆಪಾಸಿಟಿಯ ರಿಗ್ ಯಂತ್ರಗಳು ನಮ್ಮಲ್ಲಿಲ್ಲ. ಹಾಗೆಯೇ ಈ ಬಗ್ಗೆ ಪಿಹೆಚ್‌ಇಯ ಇಂಜಿನೀಯರ್‌ಗಳನ್ನು ಕರೆದು ಕೇಳಿದರೆ, ನಮಗೆ ಸರ್ಕಾರದ ಕಡೆಯಿಂದ ನಿರ್ದೇಶನ ಬಂದಿದೆ, ವೆಲ್‌ಬೋರಿಂಗ್ ಇಲಾಖೆಯೊಂದಿದೆ ಯಾವುದೇ ಯೋಜನೆಯ ಮೂಲಕ ಬಂದ ಕೊಳವೆ ಬಾವಿಗಳನ್ನು ಕೂಡ ಆ ಇಲಾಖೆಯ ವತಿಯಿಂದಲೇ ಕೊರೆಸಬೇಕು. ಖಾಸಗಿಯವರಿಂದ ಯಾವುದೇ ಕೊಳವೆ ಬಾವಿಗಳನ್ನು ತೋಡುವ ಹಾಗಿಲ್ಲ ಎಂದು ಹೇಳುತ್ತಾರೆ. ಸರಕಾರದಿಂದ ಖಾಸಗಿಯವರಿಂದ ತೋಡಿಸಬಹುದು ಎಂಬ ನಿರ್ದೇಶನ ಬರುವವರೆಗೆ ನಮ್ಮಲ್ಲಿರುವ ಯಂತ್ರಗಳ ಮೂಲಕವೇ ತೋಡಬೇಕೆಂದು ಹೇಳುತ್ತಾರೆ. ಈ ಬಗ್ಗೆ ಸಚಿವರು ನಮ್ಮ ಜಿಲ್ಲೆಗೆ ಬಂದಾಗಲೂ ಹೇಳಿದ್ದರು.

ಅವರು ಇನ್ನೂ ಈ ಸರ್ಕಾರಿ ಆಜ್ಞೆಯನ್ನೇ ಪಾಲಿಸಿಕೊಂಡು ಬಂದಿದ್ದಾರೆ. ಇಷ್ಟಾಗಿಯೂ ನಮ್ಮ ಜಿಲ್ಲೆಯಲ್ಲಿ ಇರತಕ್ಕಂಥ ರಿಗ್ ಯಂತ್ರಗಳು ಕೇವಲ ಎರಡು ಮಾತ್ರ. ಇದ್ದ ಯಂತ್ರಗಳಲ್ಲಿ ಕೂಡ ಒಂದು ಯಾವಾಗಲೂ ಒಂದೊಂದು ರೀತಿಯ ಕಾಯಿದೆಯಿಂದಾಗಿ ಕೆಲಸ ನಿರ್ವಹಿಸುವ ಸ್ಥಿತಿಯಲ್ಲಿರುವುದಿಲ್ಲ. ಅದು ಸಮರ್ಪಕವಾಗಿ ಯಾವಾಗಲು ಕೆಲಸ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ.

ಇನ್ನೊಂದು ರಿಗ್ ಏನಿದೆ ಅದರಲ್ಲಿ ನಮ್ಮ ಭಾಗದ ಎಲ್ಲಾ ಕೊಳವೆ ಬಾವಿಗಳನ್ನು ತೊಡಬೇಕಾಗುತ್ತದೆ. ಅದರ ಮುಖಾಂತರ ಎಷ್ಟು ಬಾವಿಗಳನ್ನು ತೋಡಬಹುದು ಎಂಬ ಬಗ್ಗೆ ವಿಚಾರ ಮಾಡಲು ಸರ್ಕಾರಕ್ಕೇ ಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಎಲ್ಲಿ ಪಿಹೆಚ್‌ಇಯವರು ಕೊಳವೆ ಬಾವಿಗಳನ್ನು ತೋಡುವ ಕೆಲಸ ಮಾಡುತ್ತಾ ಇಲ್ಲ. ಅಂಥ ಕಡೆಗಳಿಗೆ

ವಿಶೇಷತಃ ಜಿಲ್ಲಾಧಿಕಾರಿಯವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಅಂಥ ಕಡೆಗಳಲ್ಲಿ ಖಾಸಗೀ ರಿಗ್‌ಗಳನ್ನು ತಂದು ಬಾವಿ ಕೊರೆಯುವ ಕೆಲಸವನ್ನು ಮಾಡಿಸಿ ಎಂದು ಹೇಳಿದ್ದೇವೆ. ಹಣದ ವಿಚಾರದಲ್ಲಿ ಖಾಸಗಿಯವರದ್ದು ಐದು ರೂಪಾಯಿಗಳಷ್ಟು ಹೆಚ್ಚಿಗೆ ಆದರೂ ಅಡ್ಡಿ ಇಲ್ಲ, ಕೆಲಸವನ್ನು ಮಾಡಿಸಿ ಎಂದು ಹೇಳಿದ್ದೇವೆ. ಈ ಕುರಿತು ನಾವು ಹೇಳಿದ ಬಗ್ಗೆ ಅದನ್ನು ಬೇಕಾದರೆ ಸ್ಪಷ್ಟೀಕರಿಸುವುದಕ್ಕೆ ತಯಾರಿದ್ದೇನೆ. ಈಗಾಗಲೇ ಆ ಬಗ್ಗೆ ಡಿಸಿಯವರು ಖಾಸಗೀ ರಿಗ್‌ಗಳನ್ನು ಎಂಗೇಜ್ ಮಾಡುತ್ತಾ ಇದ್ದಾರೆ. ಆದರೆ ನಿಮ್ಮ ಜಿಲ್ಲೆಯಲ್ಲಿ ಹಾಗೆ ಏಕೆ ಮಾಡಿಲ್ಲ ಎಂದು ಗೊತ್ತಾಗುತ್ತಿಲ್ಲ.

(ಅಧ್ಯಕ್ಷರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ನಿಮ್ಮ ಜಿಲ್ಲಾಧಿಕಾರಿಗಳು ಕಾನ್ಫರೆನ್ಸ್‌ಗೂ ಕೂಡ ಬಂದಿಲ್ಲ. ನಿಮ್ಮ ಜಿಲ್ಲಾ ಶಾಸಕರುಗಳನ್ನು ಸಂಪರ್ಕಿಸಿ, ಎಲ್ಲೆಲ್ಲಿ, ಕುಡಿಯುವ ನೀರಿನ ತೊಂದರೆ ಇದೆ ಎಂಬುದನ್ನು ಮನಗಂಡು ಕೂಡಲೇ ತೊಂದರೆಯನ್ನು ನಿವಾರಿಸಬೇಕೆಂದು ಹೇಳಿದ್ದೇವೆ. ವಿಶೇಷ ಪರಿಸ್ಥಿತಿಗಳಲ್ಲಿ ಸಾಮಾನ್ಯ ರಿಗ್‌ಗಳಲ್ಲಿ ಕೆಲಸವಾಗದಿದ್ದರೆ, ಖಾಸಗೀಯವರಿಂದ ಆ ಕೆಲಸವನ್ನು ಮಾಡಿಸಿ, ಎಲ್ಲೆಲ್ಲಿ ಸಾಮಾನ್ಯ ರಿಗ್ ಬಳಕೆ ಸಾಧ್ಯವೋ ಅಲ್ಲಿ ಸಾಧ್ಯವಾದಷ್ಟು ಕೆಲಸ ಮಾಡಿಸಿ ಎಂದು ಹೇಳಿದ್ದೇವೆ. ಹಾಗೆ ನಾವು ಸೂಚನೆ ಕೊಟ್ಟಿಲ್ಲ ಎಂದು ಯಾರಾದರೂ ಹೇಳುವುದಾದಲ್ಲಿ ಅದನ್ನು ದೃಢೀಕರಿಸಲು ತಯಾರಾಗಿದ್ದೇನೆ.

ಶ್ರೀ ಸಿ. ಭೈರೇಗೌಡ : ಡಿ.ಸಿ.ಯವರು ರಜೆಯ ಮೇಲಿದ್ದರಿಂದ ಅವರ ಅಸಿಸ್ಟೆಂಟ್‌ರವರು ತಾವುಗಳು ಬಂದಾಗ ತಮ್ಮ ಜೊತೆಯಲ್ಲಿದ್ದರು. ನಾನು ಅಲ್ಲಿಯವರೆಗೆ ಅಲ್ಲಿ ನಡೆದಂಥ ಪರಿಸ್ಥಿತಿಯ ಬಗ್ಗೆ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ನಮ್ಮಲ್ಲಿರತಕ್ಕಂಥ ಸೈಕ್ಲೋನ್ ರಿಗ್ ಒಂದೇ ಒಂದು. ಕೆಲವು ತಾಲ್ಲೂಕುಗಳಲ್ಲಿ, ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರದ ಕೆಲವು ಭಾಗಗಳಲ್ಲಿ 500 ಅಡಿಗಿಂತಲೂ ಹೆಚ್ಚಿಗೆ ಆಳ ತೋಡಬೇಕಾಗುತ್ತದೆ. ಅಲ್ಲಿ ಸಾಮಾನ್ಯವಾಗಿರತಕ್ಕಂಥ ರಿಗ್‌ಗಳಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ನಮಗೆ ಕೊಳವೆ ಬಾವಿಗಳ ನೀರು ಮಾತ್ರ ಆಧಾರವಾಗಿದೆ. ಟಿಪ್ಪಣಿಯಲ್ಲಿ ನಿಮಗೆ ನಿಮ್ಮ ಅಧಿಕಾರಿಗಳು ಕೊಟ್ಟಿರತಕ್ಕಂಥದ್ದರಲ್ಲಿ ಮೇಲಿಂದ ಮೇಲೆ ಮಳೆ ತೃಪ್ತಿಕರವಾಗಿ ಬೀಳದ ಕಾರಣ ಕೆರೆಗಳಲ್ಲಿ ನೀರು ಶೇಖರಣೆ ಆಗಿಲ್ಲ ಎಂದು ಹೇಳಿದ್ದಾರೆ. ಪರಿಸ್ಥಿತಿಯು ಏನಾಗಿದೆ ಅಂದರೆ ನಮ್ಮ ಕೆರೆಗಳಲ್ಲಿ ಹಕ್ಕಿಗಳು ಕೂಡ ಕುಡಿಯುವುದಕ್ಕೆ ಇವೊತ್ತು ನೀರು ಸಿಗುತ್ತಾ ಇಲ್ಲ.

ನೀವು ಕಣ್ಣಾರೆ ನೋಡಿದ್ದೀರಿ ಕೆಲವು ಕಡೆ ಸಂಚಾರ ಮಾಡಿದಾಗ. ಆ ವಿಷಯವನ್ನು ಇಲ್ಲಿ ತಿಳಿಸಿದ್ದೀರಿ ಇಂತಹ ಪರಿಸ್ಥಿತಿ ಇರುವಾಗ ನೀವು ಒಂದೇ ಒಂದು ಸೈಕ್ಲೋನ್ ರಿಗ್ ಇಟ್ಟುಕೊಂಡು ಯಾವ ರೀತಿಯಲ್ಲಿ ನೀರು ಕೊಡುತ್ತೀರೋ ಎಂದು ನನಗಂತೂ ಆಶ್ಚರ್ಯವಾಗುತ್ತದೆ. ಆದ್ದರಿಂದ ತಾವು ಕುಡಿಯುವ ನೀರನ್ನು ಕೊಡುವ ಜವಾಬ್ದಾರಿ ಹೊತ್ತಿರುವವರು ಹೇಳಬೇಕು ಎಂಥಾ ಪರಿಸ್ಥಿತಿ ಬರಲಿ, ಜನತೆಗೆ ನೀರು ಕೊಟ್ಟೇ ಕೊಡುತ್ತೇವೆ ಎಷ್ಟೇ ಹಣ ಖರ್ಚಾದರೂ ಕೂಡ ಕುಡಿಯುವ ನೀರು ಕೊಡುವ ಕೆಲಸ ಮಾಡುತ್ತೇವೆಂದು ಧೈರ್ಯವಾದ ಹೇಳಿಕೆ ನಿಮ್ಮಿಂದ ಬರಬೇಕು ಅದರ ಜೊತೆಗೆ ಕೆಲಸ ಕೂಡ ಆಗಬೇಕು. ಆಗಲೇ ಕೆಲವು ಸ್ನೇಹಿತರು ಹೇಳಿದರು ಅನೇಕ ಹಳ್ಳಿಗಳಲ್ಲಿ ಎಷ್ಟೇ ಆಳ ಕೊರೆದರೂ ನೀರು ಬರುವುದಿಲ್ಲ ಎಂದು. ನೀರಿಗಾಗಿ ಕೊಳವೆ ಬಾವಿ ಹಾಕಬೇಕು, ಆದರೆ ಬಾವಿಗಾಗಿ ಬಾವಿ ಹಾಕುವುದು ಬೇಡ. ಸಾಮಾನ್ಯವಾಗಿ ಕೆರೆಯಂಗಳದಲ್ಲಿ ಕೊಳವೆಬಾವಿ ಹಾಕುವುದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ನಾನಾ ಕಾರಣಗಳಿಂದ ಬಾವಿ ಪಕ್ಕದಲ್ಲೇ ಇನ್ನೊಂದು ಬಾವಿ ಹಾಕುವ ಕಾರ್ಯ ಇವತ್ತು ಇದೆ. ಹಾಗಾದಾಗ ನೀರು ಬರುವುದಿಲ್ಲ.

ಹಳ್ಳಿಗಳ ಕಡೆ ಏನಾಗುತ್ತದೆಂದರೆ ರೈತರು ಬೆಳಿಗ್ಗೆಯಿಂದ ಸಂಜೆವರೆಗೆ ಹೊಲಗಳ ಹತ್ತಿರ ಇರುತ್ತಾರೆ. ಇಂಥ ಕಡೆ ಏನಾದರೂ ನೀರು ಬಿತ್ತು ಎಂದರೆ ರಾತ್ರೋರಾತ್ರಿ ಅದರ ಪಕ್ಕದಲ್ಲೇ ಇನ್ನೊಂದು ಕೊಳವೆ ಬಾವಿ ತೆಗೆಸಿ ಎಲೆಕ್ಟ್ರಿಕ್ ಪಂಪ್ ಹಾಕಿಸಿ ನೀರು ತೆಗೆಯುತ್ತಾರೆ ಹೀಗಾದಾಗ ಸರ್ಕಾರದ ಬಾವಿಯಲ್ಲಿ ನೀರಿರುವುದಿಲ್ಲ ಅದಕ್ಕಿಂತ ಆಳವಾದ ಬಾವಿ ಖಾಸಗಿಯವರು ಮಾಡುತ್ತಾರೆ ಆದ್ದರಿಂದ ಕೆರೆ ಅಂಗಳದಲ್ಲಿ ಸರ್ಕಾರಿ ಭೂಮಿ ಇರುವ ಕಡೆ ದೂರವಾದರೂ ಪರವಾಗಿಲ್ಲ ಮಿನಿ ವಾಟರ್ ಸಪ್ಲೈ ಸ್ಕೀಮಲ್ಲಿ ಮಾಡಬೇಕು ಇದನ್ನು ಕಡ್ಡಾಯ ಮಾಡಬೇಕು. ಇದನ್ನು ಒತ್ತಿ ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ನೀವು ಹೇಳಿದ ಸ್ಕೀಮನ್ನು ಇಡೀ ರಾಜ್ಯದಲ್ಲೆಲ್ಲಾ ತರಲು ಎಷ್ಟು ದುಡ್ಡು ಬೇಕಾಗುತ್ತದೆಂದು ಗೊತ್ತೇ?

ಶ್ರೀ ಸಿ. ಬೈರೇಗೌಡ : ಅಂದಾಜನ್ನು ಸರ್ಕಾರ ಹೇಳಲಿ. ನಾನು ಹೇಳುವುದು ಕೊಳವೆ ಬಾವಿ ಪಕ್ಕದಲ್ಲೇ ಕೊಳವೆ ಬಾವಿ ಹಾಕಿಸುತ್ತೇವೆನ್ನುವುದರಲ್ಲಿ ಅರ್ಥವಿಲ್ಲ. ಸರಿಸುಮಾರು ಇಂಥ ಒಂದು ಸ್ಕೀಮಿಗೆ ಒಂದು ಲಕ್ಷ ಆಗುತ್ತದೆ. ಸರ್ಕಾರಕ್ಕೆ ಜವಾಬ್ದಾರಿ ಇದ್ದರೆ ಅದನ್ನು ಮಾಡಿಸಲಿ. ಇಲ್ಲ, ನೀರು ಕೊಡುವುದಿಲ್ಲ ಒಂದು ಹೇಳಿಬಿಡಿ, ಜನ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ದುಡ್ಡಿದೆಯೋ ಇಲ್ಲವೋ ಎಂದು ನೋಡಿಕೊಳ್ಳುವ ಮೊದಲೇ ಬರೀ ಮಾತಾಡಿದರೆ ಏನು ಪ್ರಯೋಜನ ಬಂತು?

ಶ್ರೀ ಸಿ. ಬೈರೇಗೌಡ : ಏಕೆಂದರೆ ದುಡ್ಡಿನ ಬಗ್ಗೆ ಏನಾಗುತ್ತದೆಂದು ನಿನ್ನೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಓದಿದ್ದೇನೆ. ಇವತ್ತು ಈ ರಾಜ್ಯವನ್ನು ಯಾರು ಆಳುತ್ತಿದ್ದಾರೆಂದರೆ ಈ ರಾಜ್ಯದಲ್ಲಿರತಕ್ಕ ಎಕ್ಸೈಸ್ ದೊರೆಗಳು ಈ ರಾಜ್ಯವನ್ನು ಆಳುತ್ತಿದ್ದಾರೆ. ಅವರು ಹೇಳಿದ ಹಾಗೆ ಡ್ಯಾನ್ಸ್‌ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅದಕ್ಕಾಗಿ ನಾನು ಬಹಿರಂಗವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನೂರಕ್ಕೆ ನೂರರಷ್ಟು ಸತ್ಯವನ್ನು ಹೇಳಿರುವುದಕ್ಕೆ ಬಹಿರಂಗವಾಗಿ ಅಭಿನಂದಿಸುತ್ತೇನೆ. ಖಜಾನೆಯಲ್ಲಿ ಹಣ ಇಲ್ಲದಿರುವುದು ನಿಜ, ಅದು ನನ್ನ ಗಮನಕ್ಕೆ ಬಂದಿದೆ. ಎಕ್ಸೈಜ್ ಹಣ ಏನಾಗುತ್ತದೆಂದು ಈ ಸಂದರ್ಭದಲ್ಲಿ ಅಲ್ಲ, ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ತಾವು ನನ್ನ ನೆರವಿಗೆ ಬಂದಿದ್ದೀರಿ, ನಾವು ಹೇಳಬೇಕಾದ ಮಾತನ್ನು ತಾವು ಹೇಳಿದ್ದೀರಿ, ಅದಕ್ಕೆ ಧನ್ಯವಾದಗಳು.

+ ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು) : ನನಗೆ ಕೆಲಸ ಇತ್ತು ಎಂದು ಮೇಲೆ ಹೋಗಿದ್ದೆ. ಹೋದಾಗ, ವಿರೋಧ ಪಕ್ಷದ ನಾಯಕರು, ವಾಟಾಳ್ ನಾಗರಾಜ್ ಮತ್ತಿತರರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನನ್ನು ಕರೆಸಲೇಬೇಕೆಂದರು, ಅದಕ್ಕೆ ಬಂದಿದ್ದೇನೆ. ನಾನು ಬೆಳಿಗ್ಗೆ ಮೊಟ್ಟಮೊದಲ ಪ್ರಶ್ನೆಗೆ ಉತ್ತರ ಕೊಡುವಾಗಲೇ ಹೇಳಿದ್ದೆ, 3-4 ದಿನಗಳಲ್ಲಿ. ಕುಡಿಯುವ ನೀರಿನ ಬಗ್ಗೆ ಹೇಳಿಕೆ ನೀಡುತ್ತೇನೆಂದು. ಇದು ಬಹಳ ಅವಶ್ಯಕವಾದುದು ಮತ್ತು ವಿಶೇಷವಾದ ಪರಿಸ್ಥಿತಿ ಇರುವುದರಿಂದ ಹೇಳಿಕೆ ನೀಡುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಅಧಿಕಾರಿಗಳನ್ನು ಕರೆದು ಮಾತನಾಡಲಿಕ್ಕೆ ಮೇಲೆ ಹೋಗಿದ್ದೆ. ಹಣ ಎಷ್ಟಿದೆ, ಎಷ್ಟು ಖರ್ಚಾಗಿದೆ, ಎಷ್ಟು ಖರ್ಚು ಮಾಡಬಹುದು, ಯಾವ ತಾಲ್ಲೂಕಿಗೆ ಎಷ್ಟು ಬೇಕಾಗಬಹುದೆಂದು ಪರಿಶೀಲನೆ ಮಾಡುತ್ತಿದ್ದೇವೆ, ಆ ಬಗ್ಗೆ ವಿವರವಾದ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೇನೆ. ಪೈಪಡ್ ವಾಟರ್ ಬಗ್ಗೆ ಸಲಹೆ ಕೊಡಿ. ಅದನ್ನು ಹೇಗೆ ಅಳವಡಿಸಿಕೊಳ್ಳಬೇಕೆಂದು ವಿಚಾರ ಮಾಡುತ್ತೇನೆ. ಕೆರೆಯಿಂದ, ನದಿಯಿಂದ ಅಥವಾ ಬೋರ್ ಹಾಕಿ ಎಂದು ಹೇಳಿದ್ದೀರಿ. ಇಂಥ ಉತ್ತಮ ಸಲಹೆಗಳನ್ನು ಪರಿಶೀಲಿಸುತ್ತೇನೆ. ನಾನು ಆಗಲೇ ಹೇಳಿದ ಹಾಗೆ ಸೆಕ್ಷನ್ 182 ಪ್ರಕಾರ ಜಿಲ್ಲಾ

ಪರಿಷತ್ತುಗಳಿಗೆ ಈ ಇಲಾಖೆಯನ್ನು ನಾವು ಕೊಟ್ಟಿಲ್ಲ, 1987ರಲ್ಲಿ ಒಂದು ಸರ್ಕಾರಿ ಹುಕುಂ ಮಾಡಿದ್ದೇವೆ. ಅದು 1987-88ಕ್ಕೆ ಅನ್ವಯಿಸುತ್ತಿತ್ತು. ನಂತರ ಸರ್ಕಾರೀ ಹುಕುಂಅನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ, ಇಲ್ಲಿ ಏನಾಗಿದೆ ಎಂದರೆ ಮಂಡಲ ಪಂಚಾಯಿತಿ ಅವರೇ ಬೋರ್‌ವೆಲ್‌ಗಳನ್ನು ಮೆಯಿನ್‌ಟೇನ್ ಮಾಡಬೇಕೆಂದು ಇದೆ. ಆದರೆ ಮೆಯಿಂಟೇನ್ ಮಾಡುವುದಕ್ಕೆ ಶಕ್ತಿ ಇಲ್ಲ, ಹಣ ಇಲ್ಲ. ಆದುದರಿಂದ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಕೊಟ್ಟಿದ್ದೇವೆ. ಎಲ್ಲೆಲ್ಲಿ ಬೋರ್‌ವೆಲ್‌ಗಳು ಕೆಟ್ಟುಹೋಗುತ್ತವೆ ಅಲ್ಲೆಲ್ಲಾ ರಿಪೇರಿ ಮಾಡಬೇಕು ಮತ್ತು ನೀರು ಇಲ್ಲದ ಕಡೆ ಆಳ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ಟೇಟ್‌ಮೆಂಟ್ ಕೊಡಬೇಕೆಂದರೆ ಮೊದಲು ವಿಚಾರವನ್ನು ತಿಳಿದುಕೊಂಡು ಕೊಡಬೇಕು. ಯಾವಾಗ ಆದೇಶ ಕೊಟ್ಟಿದ್ದೀರಿ, ಸ್ವಲ್ಪ ಯೋಚಿಸಿ ನೋಡಿ.

ಶ್ರೀ ಎಸ್.ಹೆಚ್. ಕೌಜಲಗಿ : ಜಿಲ್ಲಾ ಪರಿಷತ್ತುಗಳಲ್ಲಿ ಯಾವ ಆದೇಶವೂ ಬಂದಿಲ್ಲವೆಂದು ಹೇಳುತ್ತಾರೆ. ಶ್ರೀ ಬಿ. ಬಸವಲಿಂಗಪ್ಪ : ಆದೇಶ ಬಾರದೆ ಇದ್ದರೆ ಇವತ್ತಲ್ಲ ನಾಳೆ ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಂತ್ರಿಗಳು 1987ರಲ್ಲಿ ಆದೇಶವಾಗಿದೆ ಎಂದು ಹೇಳುತ್ತಿದ್ದಾರೆ. ಮಂಡಲ ಪಂಚಾಯಿತಿಯವರು ಮಾಡಬೇಕೆಂದು ಮಾಡಿದ ಮೇಲೆ ಏನಾಗಿದೆ ಎಂದು ಗೊತ್ತಿಲ್ಲ. ಮಂಡಲ ಪಂಚಾಯಿತಿಯ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದಿರುವುದರಿಂದ ಜಿಲ್ಲಾ ಪರಿಷತ್ತಿನವರು ಮಾಡಬೇಕೆಂದು ಹುಕುಂ ಹೊರಡಿಸಿದ್ದೇವೆಂದು ಹೇಳಿದರು. ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಹುಕುಂ ತಲುಪಿಲ್ಲ, ಈಗ ಹೇಳುತ್ತಿದ್ದಾರೆ ಆದೇಶ ಬರಬಹುದು ಎಂದು. ಮಂತ್ರಿಗಳು ಮಾತನಾಡತಕ್ಕ ಮಾತು ಸರ್ಕಾರದ ಮಾತು ಎಂದು ಭಾವಿಸಬೇಕಾಗುತ್ತದೆ. ಬಸವಲಿಂಗಪ್ಪನವರ ಮಾತು ಆಗುವುದಿಲ್ಲ. ಅದು ಕರ್ನಾಟಕ ರಾಜ್ಯ ಸರ್ಕಾರದ ಮಾತಾಗುತ್ತದೆ. ಬೀದರ್. ಬೆಳಗಾಂನಲ್ಲಿ ಇಂಪ್ಲಿಮೆಂಟ್ ಮಾಡಬೇಕೆಂದರೆ ಕಷ್ಟವಾಗುತ್ತದೆ. ಈ ರೀತಿ ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಕೊಡುವುದು ಸರಿಯಲ್ಲ. ಬರಬಹುದು, ಬಂದಿರಬಹುದು ಎಂದು ಹೇಳುವುದು ಸರಿಯಲ್ಲ. ಬಂದಿದ್ದರೆ ಕಾಪಿ ಕೊಡಿ ನೋಡೋಣ.

ಶ್ರೀ ಬಿ. ಬಸವಲಿಂಗಪ್ಪ : ಸಿಂಧ್ಯರವರು ನಮ್ಮ ಆಳುವ ಪಕ್ಷದಲ್ಲಿ ಏನೇನು ಮಾತುಗಳು ಸಿಗುತ್ತವೆಂದು ಕಾಯುತ್ತಿರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವರ ಪರವಾಗಿ ಡೋಲು ಹೊಡೆಯಬೇಕೆ? ಶ್ರೀ ಬಿ. ಬಸವಲಿಂಗಪ್ಪ : ಎಲ್ಲದಕ್ಕೂ ಎದ್ದು ನಿಂತುಕೊಳ್ಳುವುದೆ? ನಮ್ಮ ಹತ್ತಿರ ನಿಮಗೆ ಹುಳುಕು ಹುಡುಕುವುದಕ್ಕಾಗುವುದಿಲ್ಲ. ನಾರು ಮಾಡುವುದು ಮಾಡುವುದೆ. ಮಂಡಲ ಪಂಚಾಯಿತಿಗಳಿಗೆ ರಿಪೇರಿ ಮಾಡುವುದಕ್ಕೆ, ಮೆಯಿಂಟೇನ್ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ದೂರು ಬಂದಿದೆ. ಜಿಲ್ಲಾ ಪರಿಷತ್ತಿನವರು ಈ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕೆಂದು ಹೇಳಿದ್ದೇವೆ. ಮಂಡಲ ಪಂಚಾಯಿತಿಗೆ ಕೊಡತಕ್ಕ ಹಣದಲ್ಲಿ ಏನು ರಿಪೇರಿ ಮಾಡಿದ್ದಾರೆ ಅದನ್ನು ಕಟಾವು ಮಾಡಿಕೊಂಡು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇವೆ. ಈಗಲೇ ಮಾಡಿ ಎಂದು ಹೇಳಿದರೆ ಹೇಗೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇದು ಉಪಯೋಗವಿಲ್ಲ. ಎಂದು ಮಾಡುತ್ತೀರಿ ಅದನ್ನು ಹೇಳಿ?

ಶ್ರೀ ಬಿ. ಬಸವಲಿಂಗಪ್ಪ : ಏನು ತಪ್ಪಾಗಿದೆ?

(ಗೊಂದಲ)

ಶ್ರೀ ಸಿ. ಭೈರೇಗೌಡ : ಇವರಿಗೆ ಆರ್ಡರೇ ಬೇಕಾಗಿಲ್ಲ. ಇವತ್ತು ಆರ್ಡರ್ ಆರ್ಡರ್ ಎಂದು ಹೇಳುತ್ತಾರೆ. ಇದು ಅನಾವಶ್ಯಕ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಏನಾದರೂ ಒಂದು ಖಚಿತವಾಗಿ ಹೇಳಿ.

ಶ್ರೀ ಸಿ. ಭೈರೇಗೌಡ : ಅವರ ಆರ್ಡರ್ ಏಕೆ ಬೇಕು. ಅವೆಲ್ಲಾ ಕಸದ ಬುಟ್ಟಿಗೆ ಹೋಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ : ಈ ವಿಷಯವನ್ನು ಮುಗಿಸಿಬಿಡುತ್ತೇನೆ, ಆಮೇಲೆ ನೀವು ಮಾತನಾಡಿ. ಜಿಲ್ಲಾ ಪರಿಷತ್‌ನವರು ಈ ಒಂದು ಭಾರವನ್ನು ವಹಿಸಿಕೊಂಡು ಈ ಕೆಲಸವನ್ನು ಮಾಡಲು ಮುಂದೆ ಬಂದಿದ್ದಾರೆ. ಇದಕ್ಕೆ ಏನು ಖರ್ಚಾಗುತ್ತದೆ ಅದನ್ನು ನಂತರ ಹಿಂತಿರುಗಿಸುವ ವ್ಯವಸ್ಥೆಯನ್ನು ಸರ್ಕಾರ ಯೋಚಿಸಿದ್ದು, ಇದರ ಬಗ್ಗೆ ನಾನು ನಮ್ಮ ಸೆಕ್ರೆಟರಿಯವರಿಗೆ ಆದೇಶ ಕೊಟ್ಟಿದ್ದು ನಿಜ. ಅವರು ಇಶ್ಯೂ ಮಾಡಿದ್ದಾರೋ ಬಿಟ್ಟಿದ್ದಾರೋ ಅದನ್ನು ನೋಡೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರ ವಾದ ತಲೆಗೆ ಬಾಲ ಬುದ್ಧಿ ಹೇಳಿದಂತೆ ಇದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಹೇಳಿದ್ದೇನೆ, ನನ್ನ ಸೆಕ್ರೆಟರಿಯವರು ಮಾಡಿಲ್ಲ, ಹೇಗೆಂದು ಹೇಳಿದರೆ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ : ಶ್ರೀ ಕೌಜಲಗಿಯವರೆ, ಇದನ್ನು ನಾನು ಬಹಳ ದಿವಸದಿಂದ ನೋಡಿದ್ದೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೋಡಿದ್ದೇನೆ, ನೋಡಿದ್ದೇನೆ ಎಂದರೆ ಹೇಗೆ? ಇದನ್ನು ಕೇಳಿದರೆ ಭಯವಾಗುತ್ತದೆ. ನೀವು ಎಲ್ಲರನ್ನೂ ನೋಡಿದ್ದೀರಿ, ನಿಮ್ಮನ್ನು ಎಲ್ಲರೂ ನೋಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ ಮಂತ್ರಿಯವರೆ, ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರನ್ನು ಕರೆದು ಅಧ್ಯಕ್ಷರ ಮೇಲೆ ಎತ್ತಿಕಟ್ಟುವುದಕ್ಕೆ ಆಗುತ್ತದೆ. ಈ ಆರ್ಡರ್ ಇಶ್ಯೂ ಮಾಡುವುದಕ್ಕೆ ಅವರ ಕೈಯಲ್ಲಿ ಆಗುವುದಿಲ್ಲವೆಂದು ಹೇಳಿದರೆ ಹೇಗೆ? ಚೀಫ್ ಸೆಕ್ರೆಟರಿ, ಜಿಲ್ಲಾ ಪರಿಷತ್, ಇವರನ್ನು ಕರೆದು ಅಧ್ಯಕ್ಷರನ್ನು ಕೇಳಿ ನೋಡಿ ಎಂದು ಹೇಳುತ್ತೀರಿ. ನಂತರ ಪ್ರೆಸ್ ಸ್ಟೇಟ್‌ಮೆಂಟ್ ಕೊಡುತ್ತೀರಿ. ಈ ಆರ್ಡರನ್ನು ಅವರು ಮಾಡುತ್ತಾರೋ ಇಲ್ಲವೋ ಎಂದು ಹೇಳಿದರೆ ಏನು ಅರ್ಥ?

ಶ್ರೀ ಬಿ. ಬಸವಲಿಂಗಪ್ಪ : ಇದಕ್ಕೆ ನ್ಯೂನತೆ ಬರುವುದಿಲ್ಲ. ನನ್ನ ಉದ್ದೇಶ ಇಷ್ಟೇ. ನಾನು ಹೇಳುತ್ತೇನೆ ಕೇಳಿ, ನೀವು 7 ಜನ ಒಟ್ಟೊಟ್ಟಿಗೆ ನಿಂತುಕೊಂಡು ಮಾತನಾಡಿದರೆ ಹೇಗೆ? ಕುಳಿತುಕೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದಕ್ಕೆ ತೊಂದರೆ ಏನೂ ಇಲ್ಲ. ಇದನ್ನು ಇನ್ನೂ ತೀವ್ರಗತಿಯಿಂದ ಮಾಡಬೇಕು ಎನ್ನುವುದು ನಮ್ಮ ವಾದ.

ಶ್ರೀ ವಾಟಾಳ್ ನಾಗರಾಜ್ : ಏಳು ಜನ ಎದ್ದು ನಿಲ್ಲಬೇಕಾದರೆ ಏನೋ ಶಕ್ತಿ ಇದೆಯೆಂದು ಹೇಳುತ್ತೇನೆ. ನೀವು ಏನು ಮಾಡಿಕೊಳ್ಳುತ್ತೀರಿ. ಅದಕ್ಕೋಸ್ಕರ ನೀವು ಎದ್ದರೆ ಏಳರಿಂದ ಎಪ್ಪತ್ತು ಜನ ಎದ್ದು ನಿಲ್ಲುತ್ತಾರೆ. ನಿಮ್ಮಲ್ಲಿ ಏನೋ ಗುಣ ಇದೆ. ಅದು ಒಳ್ಳೆಯ ಗುಣ.

ಶ್ರೀ ಬಿ. ಬಸವಲಿಂಗಪ್ಪ : ಅವರು ನನ್ನಲ್ಲಿ ಪ್ರೀತಿಯಿಂದ, ನಂಬಿಕೆಯಿಂದ ಹೇಳುತ್ತಾರೆ. ನಾನು ಸ್ಪಷ್ಟ ಮಾಡುತ್ತೇನೆ. ಅಭಾವ ಪರಿಸ್ಥಿತಿ ಏನಿದೆ, ಕುಡಿಯುವ ನೀರಿನ ವ್ಯವಸ್ಥೆ ಏನು ಮಾಡುವುದಿದೆ, ಅವನ್ನು ಬಹಳ ತೀವ್ರತೆಯಿಂದ ಪರ್ಯಾಲೋಚನೆ ಮಾಡಿ ಒಂದೂ ಕಂಪ್ಲೇಂಟ್ ಬರದಹಾಗೆ ನೋಡಿಕೊಳ್ಳುವ ಜವಾಬ್ದಾರಿಯಿದೆ, ಧರ್ಮವಿದೆ. ಇನ್ನು ಈ ಆರ್ಡರ್ ವಿಚಾರ ಏನಿದೆ ಅದನ್ನು ಮಾಡೋಣ. ಈ ವಿಚಾರವಾಗಿ 2-3 ದಿನದಲ್ಲಿ ಸ್ಟೇಟ್‌ಮೆಂಟ್ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ಎಂ. ನಾಗಮಾರಪಲ್ಲಿ : ದಯವಿಟ್ಟು ಯಾವಾಗ ಮಾಡುತ್ತೀರಿ ಎಂದು ಹೇಳಿ?

ಅಧ್ಯಕ್ಷರು : ನಿಮಗೆ ಅವರು ಮಾಡಿದ ಮೇಲೆ ಹೇಳುತ್ತಾರೆ. ಅಲ್ಲಿಯವರೆಗೆ ನೀವು ಅವರಿಗೆ ಅವಕಾಶ ಕೊಡಿ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರೆ, ಇವರೇನೋ ಆದೇಶ, ಆದೇಶ ಎಂದು ಹೇಳುತ್ತಿದ್ದಾರೆ. ಈಗಾಗಲೇ ಆದೇಶ ಆಗಿರತಕ್ಕಂಥದ್ದರ ಗತಿ ಏನಾಗಿದೆ ಎನ್ನತಕ್ಕಂಥದ್ದು ತಮ್ಮ ಗಮನಕ್ಕೂ, ಮಾನ್ಯ ಬಸವಲಿಂಗಪ್ಪರವರ ಗಮನಕ್ಕೂ ತರುವುದಕ್ಕೆ ಇಷ್ಟಪಡುತ್ತೇನೆ. ಆಫೀಸ್ ಆಫ್ ದಿ ಇಂಜಿನಿಯರಿಂಗ್ ಇನ್ ಚೀಫ್ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಅವರು ಒಂದು ಆಜ್ಞೆ ಮಾಡಿದ್ದಾರೆ. Order No. EIC, PHE-MC-AP-ADL/90-91 to the Deputy Commissioner, Bangalore Urban District, Bangalore, to the Chief Secretary, Kolar,

Preparation of programmes for implementation of rural watersupply schemes out of proposed additional grant of Rs. 25 crores for the year 1990-91. Piped Water Supply scheme, mini Watersupply scheme, Borewell with hand pump, revival of a exixting piped watersupply scheme, mini water supply scheme, augmentation of piped water supply scheme...

ಬಹುಶಃ ರಾಜ್ಯದಲ್ಲಿರತಕ್ಕಂಥ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೂ ಕೂಡ ಇದನ್ನು ಕಳುಹಿಸಿದ್ದಾರೆ. ಇದರಲ್ಲಿ ಏನೇನು ಮಾಡಬೇಕೆಂದು ಹೇಳಿದ್ದಾರೆ. ಅಂದರೆ 5 ತರಹ ಕುಡಿಯುವ ನೀರಾವರಿ ಮಾಡಬೇಕೆಂದು ಇದೆ.

ಈ 5 ಹೆಡ್‌ಗಳಲ್ಲಿ ಇದನ್ನು ರಿಪೇರಿ ಮಾಡಬೇಕು ಎಂದು ತಿಳಿಸಿದ್ದಾರೆ. ಇದರಲ್ಲಿ ನಿಮ್ಮ ಜಿಲ್ಲೆಗೆ 1.23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ನೀವು ಎಲ್ಲಾ ಯೋಜನೆಗಳನ್ನು ತಯಾರು ಮಾಡಿ ಕಳುಹಿಸಿ ಎಂದು ಅವರೇ ಕಳುಹಿಸಿಕೊಟ್ಟಿರತಕ್ಕಂಥದ್ದು ಇದೆ. ಇದು ಬಂದಮೇಲೆ ನಮ್ಮ ಜಿಲ್ಲೆಯಲ್ಲಿರತಕ್ಕ ಎಲ್ಲಾ ಶಾಸಕರು ಒಬ್ಬರಿಗೊಬ್ಬರು ಕಚ್ಚಾಡಿ ನನ್ನ ಕ್ಷೇತ್ರದ್ದು ಈ ಊರು ಸೇರಿಸಬೇಕು, ಆ ಊರು ಸೇರಿಸಬೇಕು ಎಂದು ಹೇಳಿ ಕಡೆಗೆ ಯೋಜನೆಯನ್ನು ಕಳಿಸಿದ್ದಾಯಿತು. ಆದರೆ ಇದುವರೆಗೂ ಯಾವ ಒಂದು ಯೋಜನೆಗೂ ಒಂದು ಕಿಲುಬುಗಾಸು ಕೂಡ ಬಿಡುಗಡೆಯಾಗಲಿಲ್ಲ. ಇವರು ಏನೋ ಆದೇಶ ಬೇಕು ಎಂದು ಹೇಳುತ್ತಿದ್ದಾರೆ. ಬಸವಲಿಂಗಪ್ಪನವರ ಆದೇಶ ಏತಕ್ಕೆ ಬೇಕು. ಅದು ಏನು ಕೆಲಸಕ್ಕೆ ಬರುತ್ತದೆ. ಈ ಆಜ್ಞೆ ನೇರವಾಗಿ ಕಸದಬುಟ್ಟಿಗೆ ಹೋಗಿದೆ.

ಶ್ರೀ ಬಿ. ಬಸವಲಿಂಗಪ್ಪ : ಚೀಫ್ ಇಂಜಿನಿಯರ್ ಲೆವೆಲ್‌ನಲ್ಲಿ ಇದು ಏನೋ ಒಂದು ಹುಕುಂ ಮಾಡಿದ್ದಾರೆ, ಅದು ಪ್ಲಾನ್‌ಗೋಸ್ಕರ, ಪ್ರೋಗ್ರಾಮ್‌ಗೋಸ್ಕರ ಮಾಡಿಕೊಂಡಿದ್ದಾರೆ. ಏಕೆಂದರೆ, ಸರ್ಕಾರದಿಂದ ಅವರಿಗೆ ಹಣ ಕೊಟ್ಟಿರುವಂಥದ್ದು ಇರುತ್ತದೆ. ಚೀಫ್ ಇಂಜಿನಿಯರ್ ಹೇಗೆ ಕೆಲಸ ಮಾಡಿದ್ದಾರೆ ಎನ್ನುವ ಬಗ್ಗೆ ಅದನ್ನು ನಾವು ಪರ್ಯಾಲೋಚನೆ ಮಾಡುತ್ತೇವೆ. ಅವರು ಮಾಡುವಂಥ ಕೆಲಸ ಅವರು

ಮಾಡಿದ್ದಾರೆ. ಈಗ ಮಾನ್ಯ ಸದಸ್ಯರು ಅವರ ಸ್ಕೀಮ್ ಕಳುಹಿಸಿದ್ದಾರೋ, ಬಿಟ್ಟಿದ್ದಾರೋ ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಅವರು ಕಳುಹಿಸಿದಂಥ ಸ್ಕೀಮ್ ಮಾಡದೇ ಹೋದ ಮೇಲೆ ಒಂದು ವರ್ಷ ಕಾಲ ಏತಕ್ಕೆ ಸುಮ್ಮನೆ ಇದ್ದರು?. ನನ್ನ ಹತ್ತಿರ ಬಂದು ಏತಕ್ಕೆ ಹೇಳಲಿಲ್ಲ. ತಾವು ಒಂದೇ ಒಂದು ಕಾಗದ ಏನಾದರೂ ಬರೆದಿದ್ದೀರಾ? ನಾವು ಈ ರೀತಿ ಯೋಜನೆಗಳನ್ನು ಕಳುಹಿಸಿದ್ದೇವೆ. ಒಂದೂ ಮಂಜೂರಾಗಿಲ್ಲ ಎಂದು ನನಗೆ ಏನಾದರೂ ಕಾಗದ ಬರೆದಿದ್ದೀರಾ ಅಥವಾ ಬಂದು ಹೇಳಿದ್ದೀರಾ? ನೀವು ಯಾವುದೋ ಒಂದು ಹಾಲಿನ ವಿಚಾರದ ಬಗ್ಗೆ ಹೇಳಿದಿರಿ, ನಾನು ಮಾಡುತ್ತೇನೆಂದು ಹೇಳಿ,ಇದನ್ನು ಮಾಡಿದೆ. ಈಗ ತಾವು ಈ ವಿಚಾರ ಹೇಳಿದ್ದೀರಿ, ಇದರ ಬಗ್ಗೆ ಕಾಗದ ಬರೆಯಿರಿ ನಾನು ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಇವರು ಮುಖ್ಯಮಂತ್ರಿಗಳಿಗಿಂಥ ಮೇಲೆ ಇರತಕ್ಕಂಥವರೋ ಅಥವಾ ಮುಖ್ಯಮಂತ್ರಿಗಳಿಗಿಂಥ ಕೆಳಗಿರುವವರೋ ಎಂದು ಹೇಳಲಿ, ನಾನು ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರಬರೆದಿದ್ದೇನೆ. ನಮ್ಮ ಜಿಲ್ಲೆಗೆ 1.23 ಕೋಟಿ ರೂಪಾಯಿಯಷ್ಟು ಹಣ ಇಂಜನಿಯರಿಂಗ್ ಇನ್‌ಚೀಫ್ ಅವರು ಬಿಡುಗಡೆ ಮಾಡಿಲ್ಲ, ಒಂದು ಕಿಲುಬುಕಾಸು ಬಂದಿಲ್ಲ ಎಂದು ನಾನು ಅರ್ಜೆಂಟ್ ನಂಬರ್ ಹಾಕಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ : ಅದು ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ : ಹಾಗಾದರೆ, ನಿಮಗೂ ಅವರಿಗೂ ಏನಿದೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಸಂಬಂಧಪಟ್ಟ ಪೋರ್ಟ್ ಪೋಲಿಯೋ ಮಿನಿಸ್ಟರ್‌ಗೆ ಬರೆಯುವುದು ಬಿಟ್ಟು, ಮುಖ್ಯಮಂತ್ರಿಗಳಿಗೆ ಬರೆದಿದ್ದೇನೆಂದು ಹೇಳಿದರೆ ನಾನು ಅದಕ್ಕೆ ಏನು ಹೇಳಲಿ.

ಶ್ರೀ ಸಿ. ಬೈರೇಗೌಡ : ರಾಜ್ಯದ ಮುಖ್ಯಮಂತ್ರಿಗಳು ನಿಮ್ಮ ಮೇಲೆ ಇದ್ದಾರೆಂದು ನಾನು ಭಾವಿಸಿದ್ದೇನೆ. ನೀವು ಅವರ ಮೇಲೆ ಇದ್ದಂತೆ ನೀವು ಭಾವಿಸಿಕೊಂಡಿದ್ದರೆ ಏನೂ ಅಡ್ಡಿಯಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಯಾರು ಮೇಲೆ, ಯಾರು ಕೆಳಗೆ ಇಲ್ಲ. ನಾವೆಲ್ಲಾ ಕೊಲಿಗ್ಸ್.

ಶ್ರೀ ಸಿ. ಬೈರೈಗೌಡ : ನಾನು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಮಾನ್ಯ ಖರ್ಗೆಯವರು ಬಂದಾಗಲೂ ತಿಳಿಸಿದ್ದೇನೆ. ಪ್ರತಿದಿವಸ ಬೆಳಗಾದಾಗೆಲ್ಲಾ ನಮಗೆ ಕಾಗದ ಬರೆಯುವ ಕೆಲಸ ಏನು.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಬಸವಲಿಂಗಪ್ಪನವರು ಹೇಳುವುದೇನೆಂದರೆ, ನೀವು ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೀರಿ, ಅವರನ್ನೇ ಕೇಳಿ, ನನ್ನನ್ನು ಏತಕ್ಕೆ ಕೇಳುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮನ್ನು ರೇಗಿಸುತ್ತಿದ್ದಾರೆ. ಮಂತ್ರಿಗಳು ಹುಷಾರಾಗಿರಬೇಕು. ನೀವು ರೇಗಿಕೊಳ್ಳಬೇಡಿ. ಸ್ವಲ್ಪ ಎಚ್ಚರಿಕೆಯಿಂದ ಇರಿ.

ಶ್ರೀ ಸಿ. ಬೈರೇಗೌಡ : ಇದಕ್ಕೆ ನಾನು ಕೃತಜ್ಞತೆಗಳನ್ನರ್ಪಿಸಿದ್ದೇನೆ. ಆದರೆ ನಮ್ಮ ಜಿಲ್ಲೆಗೆ ಏನು ಹಣವನ್ನು ಕೊಡಬೇಕೋ ಅದನ್ನು ಕೊಟ್ಟಿಲ್ಲ.

ಶ್ರೀ ಬಿ.ಬಸವಲಿಂಗಪ್ಪ : ಕಾಗದ ಬಂದಿಲ್ಲ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಈ ಅರ್ಜೆಂಟ್‌ಗೆ ಏನು ಅರ್ಥ? ವರ್ಷಕ್ಕೆ ಬಿಡುಗಡೆ ಆಗಬೇಕಾದ ಹಣದು. 25 ಕೋಟಿ ರೂಪಾಯಿ ಕೊಡುತ್ತೇವೆಂದು ಏತಕ್ಕೆ ಹೇಳಿದ್ದೀರಿ?

ಶ್ರೀ ಬಿ. ಬಸವಲಿಂಗಪ್ಪ : ಈಗಲೂ ಸಮಯ ಮೀರಿಲ್ಲ. ನನ್ನ ಹತ್ತಿರ ಹಣ ಇದೆ ದಯವಿಟ್ಟು ಪತ್ರವನ್ನು ಬರೆಯಿರಿ ಯಾವ ಯಾವ ಸ್ಕೀಂಗಳಿಗೆ ಎಂಬುದನ್ನು ತಿಳಿಸಿ. ಯಾವ ಯಾವ ಸ್ಕೀಂಗಳನ್ನು ಮಂಜೂರು ಮಾಡಬೇಕೋ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಮಾನ್ಯ ಸಭಾಪತಿಯವರೇ ಮಾನ್ಯ ಸದಸ್ಯರು ಮಾನ್ಯ ಸಚಿವರು ಹತ್ತಿರ ನೇರವಾಗಿ ಹೋಗಿ ರೆಗ್ಯುಲರ್ ಪ್ರೋಗ್ರಾಂ, ಪ್ಲಾನ್ಡ್ ಸ್ಕೀಂ ಏನಿವೆ ಅದನ್ನು ಕುಳಿತು ಮಾಡಿಸಿಕೊಳ್ಳಲಿ.

ಶ್ರೀ ಸಿ.ಬೈರೇಗೌಡ : ಇದು ಕುಡಿಯುವ ನೀರಿನ ವಿಚಾರ. ಅವರು ಏನು ಮಂಜೂರು ಮಾಡುವುದಕ್ಕೆ ಹೊರಟಿದ್ದಾರೆ ನೋಡೋಣ.

ಶ್ರೀ ಬಿ.ಬಸವಲಿಂಗಪ್ಪ : ಈಗ ನಾನು ತಮಗೆ ಹೇಳಿದ್ದೇನೆ. ಇದಕ್ಕಿಂತಲೂ ನೀವು ಇನ್ನೂ ಮುಂದುವರಿದರೆ ನಾನು ಯಾವುದನ್ನೂ ಮಾಡುವುದಿಲ್ಲ.

ಶ್ರೀ ಸಿ.ಬೈರೇಗೌಡ : ಹೋಗಲಿ ನಿಮ್ಮನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ : ಇದು ನಮ್ಮ ಕರ್ಮ. ಈ ಮಟ್ಟಕ್ಕೆ ಬರಬೇಕಾಯಿತು. ಆಗಲಿ ಇದನ್ನು ಮಾಡುತ್ತೇನೆಂದು ಮಾನ್ಯಮಂತ್ರಿಗಳು ಹೇಳಿದರು. ಆದರೆ ಈಗ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ನಮ್ಮ ಮಂತ್ರಿಗಳ ಬಗ್ಗೆ ಏನ ಹೇಳಬೇಕೋ ತಿಳಿಯದು.

ಶ್ರೀ ಬಿ. ಬಸವಲಿಂಗಪ್ಪ : ನಾವು ಮಾಡುತ್ತೇವೆಂದು ಹೇಳಿದ ಮೇಲೂ ಇವರು ತಮ್ಮ ವಾದವನ್ನು ಮುಂದುವರಿಸಿದ್ದಾರೆ. ನಿಮ್ಮ ಪ್ಲಾನ್ಡ್ ಸ್ಕೀಂಸ್ ಏನೇನಿವೆ, ಯಾವುದನ್ನು ಮಂಜೂರು ಮಾಡಬೇಕೆಂಬುದನ್ನು ಯೋಚನೆ ಮಾಡಿನೋಡಬೇಕಾಗುತ್ತದೆ. ಇವತ್ತು ನಿಮ್ಮ ಜಿಲ್ಲೆಗಳಲ್ಲಿ ಏನೇನು ಯೋಜನೆಗಳಿವೆ. ಅವುಗಳನ್ನು ನಾಳೆಯ ದಿನ ತನ್ನಿ ಕುಳಿತು ಮಾತನಾಡೋಣ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಇಂಜಿನಿಯರಿಂಗ್ ಚೀಫ್ ಹತ್ತಿರ ಅವು ಇವೆ. ಅದನ್ನು ಮಾಡುತ್ತೇವೆಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಈ ರಾಜ್ಯದಲ್ಲಿ 25 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಈ ದಿಸೆಯಲ್ಲಿ ಹೊರಟಿದ್ದಾರೆ. ಇದನ್ನು ಈ ವರ್ಷದ ಆಖೈರಿನೊಳಗೆ ಮಾಡುತ್ತಾರೋ ಇಲ್ಲವೋ ಎಂಬುದನ್ನು ಹೇಳಬೇಕು.

ಶ್ರೀ ಬಿ.ಬಸವಲಿಂಗಪ್ಪ : ಹೊಸದಾಗಿ ಒಂದು ಪ್ರಶ್ನೆಯನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಕೇಳಿದ್ದಾರೆ. ಅದು 25 ಕೋಟಿ ರೂಪಾಯಿಗಳು ಕುಡಿಯುವ ನೀರಿನ ಯೋಜನೆ ಖರ್ಚಾಗಿದೆಯೋ ಇಲ್ಲವೋ ಎಂಬುದು. ಇದು ನನಗೆ ಗೊತ್ತಿಲ್ಲ. ನಾಳೆ ನೀವು ತನ್ನಿ, ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಜಿಲ್ಲಾ ಪರಿಷತ್ತುಗಳವರೂ 25 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯನ್ನು ಕಳುಹಿಸಿಕೊಟ್ಟಿದ್ದಾರೆ.ಅದನ್ನು ತಾವು ಮಾರ್ಚ್ 31 ರೊಳಗೆ ಅಂದರೆ ಈ ಆರ್ಥಿಕ ವರ್ಷ ಮುಗಿಯುವುದರೊಳಗೆ ಕಾರ್ಯಗತ ಮಾಡುತ್ತೀರಾ?

ಶ್ರೀ ಆರ್. ನಾರಾಯಣ : ಮಾನ್ಯ ಅಧ್ಯಕ್ಷರೇ, ಈ ಸ್ಕೀಂ ಬಂದಾಗ "ಸಮಸ್ಯಾತ್ಮಕ ಗ್ರಾಮಗಳಿಗೆ ಕುಡಿಯುವ ನೀರಿಗೋಸ್ಕರ 25 ಕೋಟಿ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿದೆ" ಎಂದು ರೇಡಿಯೋದಲ್ಲಿ ಬಂತು. ನಾನು 4 ತಾಲ್ಲೂಕುಗಳನ್ನು ಪ್ರತಿನಿಧಿಸುತ್ತಿದ್ದೇನೆ. ಪ್ರತಿಯೊಬ್ಬರೂ ಬಂದು ನೋಡಿ. ಒಳ್ಳೊಳ್ಳೆಯ

ಸ್ಕೀಂಗಳು ಬಂದಿವೆ ರಿವೈವಲ್, ಆಗ್ಮೆಂಟೇಷನ್ ಮುಂತಾದೆಲ್ಲಾ ಇವೆ. ಇವರಲ್ಲಿ ಒಂದೊಂದು ತಾಲ್ಲೂಕಿಗೆ 2ಲಕ್ಷ, 3ಲಕ್ಷದಂತೆ ಹಾಕಿದರೆ ಬಹಳ ಅನುಕೂಲವಾಗುತ್ತದೆಂದು ಹೇಳಿದರು.ಇವರು 25 ಕೋಟಿ ರೂಪಾಯಿಗಳನ್ನು ಕೊಡುವುದು ಇರಲಿ, ಕೊಟ್ಟಿದ್ದಂಥ ಮಾಮೂಲಿ ಗ್ರ್ಯಾಂಟ್‌ನಲ್ಲೇ ಇನ್ನೂ 10 ಕೋಟಿ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆಂದು ಜಿಲ್ಲಾ ಪರಿಷತ್ತಿನವರು, ಜಿಲ್ಲಾಧಿಕಾರಿಗಳು ಹೇಳಿದರು. ನಿಜವಾಗಿಯೂ ನನಗೆ ಬಹಳ ವ್ಯಥೆಯಾಗುತ್ತದೆ. ಇವರ ಬಗ್ಗೆ ಇಷ್ಟೊಂದು ಲಘುವಾಗಿ ಇಲ್ಲಿ ಚರ್ಚೆಮಾಡುತ್ತಿರುವುದನ್ನು ನೋಡಿದರೆ ಬಹುಶಃ ಕುಡಿಯುವ ನೀರಿನ ಯೋಜನೆಯ ಬಗ್ಗೆ ನಮಗೆ ಯಾವ ರೀತಿಯ ಕಾಳಜಿ ಇದೆ ಎನ್ನುವ ಬಗ್ಗೆ ಕಣ್ಣೀರನ್ನು ಹಾಕಿ ಹೇಳಬೇಕಾಗುತ್ತದೆ. ನಾನು ಇದನ್ನು ಉತ್ಪ್ರೇಕ್ಷೆ ಮಾಡಿ ಮಾತನಾಡುತ್ತಿಲ್ಲ. ನಮ್ಮ ತುಮಕೂರು ಜಿಲ್ಲೆಗೆ ಸುಮಾರು 1ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಖರ್ಚುಮಾಡಿದ್ದೇವೆ. ಇನ್ನೂ 3 ಕೋಟಿ ರೂಪಾಯಿ ಕೊಟ್ಟರೂ ಸಹ ನಮ್ಮಲ್ಲಿ ನೀರಿನ ಬವಣೆ ತಪ್ಪುವುದಿಲ್ಲ. ಇದು ಬಹಳ ಉತ್ತಮವಾದ ಸ್ಕೀಂ ಎಂದು ನಮ್ಮೀವ ಪ್ರೊಪೋಸಲ್ಸ್ ಬಂದು 4 ತಿಂಗಳಾಗಿವೆ. ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ನನಗೆ ಪತ್ರ ಬರೆಯಿರಿ ಎಂದು. ಬಹುಶಃ ಸರ್ಕಾರದ ಆಜ್ಞೆಯನ್ನು ಇಂಪ್ಲಿಮೆಂಟ್ ಮಾಡತಕ್ಕ ಜವಾಬ್ದಾರಿ, ಮಾನಿಟರ್ ಮಾಡತಕ್ಕ ಜವಾಬ್ದಾರಿಯನ್ನು ನಾವು ಪತ್ರವನ್ನು ಬರೆಯುವುದರ ಮೂಲಕ ಜ್ಞಾಪಿಸುವುದಾದರೆ ಇದು ಅತ್ಯಂತ ದುಃಖದ ವಿಚಾರ ಎಂದು ಹೇಳಬೇಕಾಗುತ್ತದೆ. ನಾನು ಒಬ್ಬ ಕಾಂಗ್ರೆಸ್ ಸದಸ್ಯನಾಗಿ ಈ ಸಂದರ್ಭದಲ್ಲಿ ಇಲ್ಲಿ ಮಾತನಾಡುವುದು ಸರಿಯಲ್ಲವೆಂದು ಅನಿಸಿದರೂ ವಿಧಿಯಿಲ್ಲದೆ ಅತ್ಯಂತ ದುಃಖದಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಖಂಡಿತವಾಗಿಯೂ ಲಘುವಾಗಿ ಮಾತನಾಡತಕ್ಕ ವಿಷಯವಲ್ಲ.

ಮಾನ್ಯ .ಒಬ್ಬ ಸದಸ್ಯರು : ದೇವಲೋಕದಿಂದ ಗಂಗೆಯನ್ನು ತಂದುಬಿಟ್ಟರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯ ಸ್ನೇಹಿತರಾದಂಥ ನಾರಾಯಣ್‌ರವರು ಹೇಳಿದರು. ಅದಕ್ಕಿಂತ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈಗಲೂ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದಷ್ಟೇ.ಇದು ಕೇವಲ ಒಂದು ಜಿಲ್ಲೆಯಲ್ಲಿಯಲ್ಲ, ಇಡಿ ರಾಜ್ಯದ ಪ್ರಶ್ನೆ ಕೂಡ. ಇದರಲ್ಲಿ ಅಡಗಿದೆ. ತಕ್ಷಣ 25 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕು. ನಮ್ಮ ಜಿಲ್ಲೆಗೆ ಬರಬೇಕಾದಂಥ 1 ಕೋಟಿ 23 ಲಕ್ಷ ರೂಪಾಯಿಗಳ ಯೋಜನೆಯನ್ನು ತತ್‌ಕ್ಷಣ ಮಂಜೂರು ಮಾಡುತ್ತೇವೆನ್ನುವ ಹೇಳಿಕೆಯನ್ನು ಇಲ್ಲಿ ಕುಳಿತಿರತಕ್ಕಂಥ ಮಾನ್ಯ ಕಂದಾಯ ಸಚಿವರು ಹೇಳಬೇಕು. ಮಾನ್ಯ ಸದಸ್ಯರಾದ ನಾರಾಯಣರವರು ಮಾತನಾಡಿರುವ ವಿಚಾರದಲ್ಲಿ ನಾನು ಮಾತನಾಡಿ ಅದರ ಬಗ್ಗೆ ಡಯಲ್ಯೂಟ್ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ಬಗ್ಗೆ ಮಾತನಾಡಿ ಅಷ್ಟಕ್ಕೆ ಸಾಕುಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿಯೇ ಅಲ್ಲ ಇಡಿ ರಾಜ್ಯದಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಮಾನ್ಯ ಅಧ್ಯಕ್ಷರೇ ಈಗ ಬೈರೆಗೌಡರು ಹೇಳಿದರು. ಹಿಂದಿನ ಸರ್ಕಾರದವರು 25 ಕೋಟಿ ರೂಪಾಯಿಗಳನ್ನು ಅಡಿಶನಲ್ ಗ್ರಾಂಟ್ ಕೊಡುತ್ತೇವೆಂದು ಹೇಳಿದರು. ಅದರ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲೂ ಯೋಜನೆಗಳನ್ನು ತಯಾರು ಮಾಡಿ ಇಟ್ಟಿದ್ದಾರೆ. ಅದಕ್ಕೆ ತಾವು ಅಪ್ರೂವಲ್ ಕೊಡಿ ಎಂದು ಕೇಳುತ್ತಿದ್ದೀರಿ. ರಿಲೀಫ್ ವರ್ಕ್‌ಗಳಲ್ಲಿ ಬಹುಶಃ ಆದ್ಯತೆ ಕಂಡುಬಂದರೆ ರೆಗ್ಯುಲರ್ ಪ್ರೋಗ್ರಾಮ್ ವರ್ಕ್ಸ್ ಆಗಿ ತೆಗೆದು ಕೊಳ್ಳತಕ್ಕಂಥದ್ದು ಇದೆ. ನಮ್ಮ ಸ್ಕೇರಿಸಿಟಿ ವರ್ಕ್ಸ್‌ಗಳಲ್ಲಿ 88 ಲಕ್ಷ ಇದೆ. ನಾನು ಕೊಟ್ಟಿದ್ದೇನೆ. ಬೇರೆ ಕೆಲವು

ಸ್ಕೀಮ್‌ಗಳಿಗೆ ಸೀಮಿತವಾಗಿದ್ದು ಅದನ್ನು ಸಂಬಂಧಪಟ್ಟ ಡಿಪಾರ್ಟ್‌ಮೆಂಟ್ ವತಿಯಿಂದ ರೆಗ್ಯುಲರ್ ಫಂಡಿನಿಂದ ಕೊಡತಕ್ಕದ್ದೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ : ಈಗ 25 ಕೋಟಿ ರೂಪಾಯಿಗಳ ಸ್ಕೀಮ್‌ಗಳನ್ನು ಕಳುಹಿಸಿಕೊಡಿ ಎಂದು ಹೇಳಿದರಲ್ಲ ಅದಕ್ಕೋಸ್ಕರ ಸುಮ್ಮನಿದ್ದೆ. 25ಕೋಟಿ ರೂಪಾಯಿಗಳ ಬಗ್ಗೆ ಅವರು ಪ್ರಸ್ತಾಪ ಮಾಡಿರಬಹುದು. ನಾನು ಆರ್‌ಡಿಪಿ ಮಂತ್ರಿಯಾಗಿದ್ದೆ. ನನ್ನ ಮಿತ್ರರಾದಂಥ ಮಾನ್ಯ ಘೋರ್ಪಡೆಯವರು ಮಂತ್ರಿಗಳಾಗಿದ್ದ ಕಾಲದಲ್ಲಿ ಅವರು 25 ಕೋಟಿ ರೂಪಾಯಿಗಳೆಲ್ಲವನ್ನು ಕೊಟ್ಟು ಬಿಡೋಣವೆಂದು ಅದಕ್ಕೆ ಸ್ಕೀಮ್ ತರಿಸುತ್ತೇವೆಂದು ಹೇಳಿರಬಹುದು. ಅದರ ಬಗ್ಗೆ ಕಳುಹಿಸಿದ್ದಾರೆ. ಎಷ್ಟೆಷ್ಟು ಸ್ಕೀಮ್ ಬಂದಿದೆ. ಎಷ್ಟು ಮಾಡಿದ್ದಾರೆ. ಎನ್ನುವುದು ಒಂದು ವಿಚಾರ ಇದೆ. 25 ಕೋಟಿ ರೂಪಾಯಿಗಳು ಇರಬೇಕಲ್ಲ? ಅದಕ್ಕೆ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಇಂಥ ಒಂದು ಅಭಾವ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡೋಣವೆಂದು ನಾವು ಬಹಿರಂಗವಾಗಿ ಹೇಳುತ್ತಿದ್ದೇವೆ. ಅದನ್ನೇ ಒಂದು ತಪ್ಪು ಮಾಡಿಕೊಂಡರೆ ಹೇಗೆ? ಪ್ರತಿಯೊಂದು ಕ್ಷೇತ್ರಕ್ಕೂ ಕೊಡಬೇಕೆಂಬ ಆ ಒಂದು ಹಿನ್ನೆಲೆಯಲ್ಲಿ ನಾನು ಮಾತನಾಡಿದ್ದುದು. ಇಡೀ 25 ಕೋಟಿ ರೂಪಾಯಿಗಳು ನಮ್ಮ ಹತ್ತಿರ ಇಲ್ಲ. ಶ್ರೀಮಾನ್ ಘೋರ್ಪಡೆಯವರು ಮಂತ್ರಿಗಳಾಗಿದ್ದಾಗ ಸ್ಕೀಮ್‌ನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ತೀವ್ರವಾಗಿ ಗಮನ ಕೊಟ್ಟು ಯಾವ ರೀತಿ ಈ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದು ನಾನು ಯೋಜನೆ ಮಾಡುತ್ತಿದ್ದೇನೆ. ಈಗ ಯಾರಿಗಾದರೂ ಕಣ್ಣಲ್ಲಿ ನೀರು ಬಂತು ಎಂದು ಇಟ್ಟುಕೊಳ್ಳೋಣ. ಕಣ್ಣಲ್ಲಿ ನೀರುಬಂದರೆ ಒರಿಸಿಕೊಳ್ಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಸದನದಲ್ಲಿ ಒಬ್ಬ ಸದಸ್ಯರು ಕಳಕಳಿಯಿಂದ ಮಾತನಾಡುತ್ತಿರುವಾಗ ಕಣ್ಣೀರು ಬಂದರೆ ಒರಿಸಿಕೊಳ್ಳಿ ಎಂದು ಹೇಳಿದರೆ. ಯಾವರೀತಿ? ಅವರು ಈ ರೀತಿ ಮಾತನಾಡತಕ್ಕಂಥದ್ದು ಸರಿಯಲ್ಲ. ನಮಗೂ ಮಂತ್ರಿಗಳ ಬಗ್ಗೆ ಬಹಳ ಗೌರವಿದೆ. ಅವರು ಹೀಗೆ ಮಾತನಾಡತಕ್ಕಂಥದ್ದು ಸರಿಯಲ್ಲ. ಮಾನ್ಯ ಬಸವಲಿಂಗಪ್ಪನವರು ಬಹಳ ಹಿರಿಯ ಸದಸ್ಯರು. ಇವತ್ತು ಅವರಿಗೆ ಶಪಬಾಸ್‌ಗಿರಿ ಕೊಡಬೇಕಾಗಿತ್ತು. ಆಡಳಿತ ಪಕ್ಷದವರು ಈ ಮಾತನ್ನು ಹೇಳುತ್ತಿರುವಾಗ ಅವರಿಗೆ ಶಪಬಾಸ್‌ಗಿರಿ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಕಣ್ಣೀರು ಒರೆಸಿಕೊಳ್ಳಿ ಎಂದು ಹೇಳ[illegible]ಥದ್ದು ಸರಿಯಾದುದಲ್ಲ. (ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆ ಎನ್ನುವುದನ್ನು ತಾವೂ ಕೂಡಾ ನೋಡುತ್ತಿದ್ದೀರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಆಡಿದಂಥ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. The Minister is also a Member of the Cabinet in the Government. How can he say that?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಅಹಂಕಾರದ ಪರಮಾವಧಿ There is limit. We will not allow the proceedings to go on like this......

(ಗೊಂದಲ)

ಶ್ರೀ ಗುರುಪಾದಪ್ಪ ಎಂ. ನಾಗಮಾರಪಲ್ಲಿ : ಈ ರೀತಿ ಹೇಳುವುದಾದರೆ ನಾವು ಏತಕ್ಕೆ ಇಲ್ಲಿಗೆ ಬರಬೇಕು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಮಾತನ್ನು ಅವರು ವಾಪಸ್ ಪಡೆಯಬೇಕು.

(ಗೊಂದಲ)

ಶ್ರೀ ಆರ್. ವಿ. ದೇಶ್‌ಪಾಂಡೆ : ಇದೇನು ಹುಡುಗಾಟಿಕೆಯೇ? ಸೀರಿಯಸ್ ಬೇಡವೇ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಂತ್ರಿಯಾಗಿ ಏನೂ ಬೇಕಾದರೂ ಹೇಳಬಹುದು. ಎಂದು ಅವರು ಅಂದುಕೊಂಡಿದ್ದಾರೆಯೇ?

(ಗೊಂದಲ)

ಶ್ರೀವಾಟಾಳ್ ನಾಗರಾಜ್ : ಒಬ್ಬ ಸದಸ್ಯರು ತಮ್ಮ ಕಳಕಳಿಯನ್ನು ಪ್ರದರ್ಶನ ಮಾಡಿದಾಗ ಇಷ್ಟು ಬೇಜವಾಬ್ದಾರಿಯಿಂದ ಇಷ್ಟು ಉದ್ಧಟತನದಿಂದ ಮಾತನಾಡತಕ್ಕಂಥದ್ದು ಯಾರಿಗೂ ಶೋಭೆ ತರತಕ್ಕಂಥದಲ್ಲ . ಆದರೆ ಬಸವಲಿಂಗಪ್ಪನವರು ಈ ರೀತಿ ಏತಕ್ಕೆ ಮೈ ಪರಚಿಕೊಳ್ಳುತ್ತಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ. ಇದು ಒಳ್ಳೆಯ ನೀತಿಯಲ್ಲ. ಇದು ಸರಿಯಲ್ಲ. ಕುಡಿಯುವ ನೀರಿನ ಬಗ್ಗೆ ಇಂಥ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ. ಕುಡಿಯುವ ನೀರಿನ ಬಗ್ಗೆ ಅವರು ಹೇಳುತ್ತಿದ್ದಾರೆ. ಅಂತಃ ಕರಣದಿಂದ ಹೃದಯಬಿಚ್ಚಿ ಕಣ್ಣೀರು ಹಾಕುತ್ತಿದ್ದಾರೆ. ಎನ್ನತಕ್ಕಂಥ ಮಾತನ್ನು ಕಣ್ಣೀರು ಒರೆಸಿಕೊಳ್ಳಲಿ ಎಂದು ಹೇಳತಕ್ಕಂಥದ್ದು ಸರಿಯಲ್ಲ. ಇದು ಯಾರಿಗೂ ಕೂಡಾ ಸಲ್ಲತಕ್ಕಂಥದ್ದಲ್ಲ. ಇದು ಅಗೌರವದ ಮಾತು.ಇಡೀ ಸಭೆಗೆ, ಇಡೀ ಸದನಕ್ಕೆ ಅಗೌರವವಾಗಿದೆ. ಯಾರೋ ಒಬ್ಬರು ಸದಸ್ಯರಿಗೆ ಎನ್ನತಕ್ಕಂಥ ಮಾತಲ್ಲ. ಇದು ನಮ್ಮೆಲ್ಲರಿಗೂ ಅಪಮಾನವಾಗಿದೆ. ಇಡೀ ಸಭೆಗೆ ಅಪಮಾನವಾಗಿದೆ. ಈ ಮಾತು ಒಳ್ಳೆಯದಲ್ಲ. ಮಾನ್ಯ ಬಸವಲಿಂಗಪ್ಪನವರಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇವೆ. ಅವರು ಆಡಿದಂಥ ಮಾತನ್ನು ಈ ಸಭೆಯಲ್ಲಿ ಹಿಂತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದು. ಒಳ್ಳೆಯ ಸಂಪ್ರದಾಯ. ಈ ರೀತಿ ಮಾತನಾಡುವುದು ಒಳ್ಳೆಯದಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಬಸವಲಿಂಗಪ್ಪನವರು ಹೇಳುವಂಥ ಮಾತು ಏನು ಇದೆ. ಇದಕ್ಕೆ ಸ್ವಲ್ಪ ಹಿನ್ನೆಲೆಯನ್ನು ಅವರು ಅರ್ಥಮಾಡಿಕೊಂಡಿದ್ದಾರೆ.

(ಗೊಂದಲ)

ಇಲ್ಲಿ ಏನು ಪ್ರಶ್ನೆಯಾಗಿದೆ ಎಂದು ಹೇಳಿದರೆ ಹಿಂದೆ ವೀರೇಂದ್ರ ಪಾಟೀಲರ ನೇತೃತ್ವದ ಸರ್ಕಾರ ಇದ್ದಾಗ ಮಾನ್ಯ ರಾಜಶೇಖರ ಮೂರ್ತಿಯವರು ಒಂದು ಹೇಳಿಕೆಯನ್ನು ಕೊಟ್ಟರು. ಏನು ಕೊಟ್ಟರು ಎಂದರೆ ಅಬ್ಕಾರಿಯಲ್ಲಿ ಬಹಳ ಲೂಟಿಯಾಗುತ್ತಿತ್ತು. ಹಣವನ್ನು ಹೆಚ್ಚು ವಸೂಲು ಮಾಡಿದ್ದೇವೆ. ಮತ್ತು ರಾಜ್ಯದ ಆದಾಯ ಹೆಚ್ಚಾದುದರಿಂದ ಇದರಲ್ಲಿ ಕೆಲವು ಭಾಗವನ್ನು ನಾವು ಇಂಥಿಂಥ ಕಾರ್ಯಗಳಿಗೋಸ್ಕರ ನಾವು ಉಪಯೋಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆ ಸಂದರ್ಭದಲ್ಲಿ ಅಂದು ಇದ್ದಂಥ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಆಗ ಇದ್ದಂಥ ಸರ್ಕಾರ 25 ಕೋಟಿ ರೂಪಾಯಿಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ನೀರು ಕುಡಿಸಲಿಕ್ಕೆ ಒಂದು ಕಾರ್ಯಕ್ರಮವನ್ನು ಯೋಜಿಸಿಕೊಂಡು ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು 25 ಕೋಟಿ ರೂಪಾ[illegible] ಏನು ಇದೆ, 25 ಕೋಟಿ ರೂಪಾಯಿಗಳನ್ನು

ಖರ್ಚು ಮಾಡುವುದಕ್ಕೆ ಪ್ರಸ್ತಾವನೆಗಳನ್ನು ಸಂಬಂಧಪಟ್ಟವರಿಂದ ಅವರು ತರಿಸಿದರ್, ಆ ರೀತಿ ತರಿಸಿದಮೇಲೆ ಈಗ ಇವರು ನನಗೆ ಗೊತ್ತಿರಲಿಲ್ಲ,ಅದು ಏನಾಗಿದೆ ಎಂದು ಹೇಳುವುದಾದರೆ ಇದನ್ನು ನೀವಾಗಲೀ ನಾವಾಗಲೀ ಒಪ್ಪುವುದಕ್ಕೆ ಸಾಧ್ಯವೇ? ಈ ಹಿನ್ನೆಲೆಯನ್ನು ಏನೂ ಗೊತ್ತಿಲ್ಲದೇ ಬಸವಲಿಂಗಪ್ಪನವರು ಹೇಳಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಒಂದು ಪಕ್ಷ ನಾನು ತಿಳಿದುಕೊಂಡಿರುವುದು ಸರಿಯಲ್ಲ ಎಂದು ಹೇಳಿದರೆ ಮಾನ್ಯ ರಾಜಶೇಖರಮೂರ್ತಿಯವರು ಇದ್ದಾರೆ.

ಅವರು ಅದರ ಬಗ್ಗೆ ವಿವರಣೆಯನ್ನು ಕೊಡಲಿ. ಆದಾಯ ಹೆಚ್ಚಾಗಿ ಆದುದರಿಂದ ಹೆಚ್ಚುವರಿ, ಆದಾಯದಲ್ಲಿ 25 ಕೋಟಿ ರೂಪಾಯಿಗಳನ್ನು ಈ ಬಾಬ್ತಿಗೆ ಸರ್ಕಾರ ಖರ್ಚು ಮಾಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದೆ. ಈ ತೀರ್ಮಾನದ ಫಲವಾಗಿ ಈ ಪ್ರಸ್ತಾಪನೆಗಳನ್ನು ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳಿಂದ ಮತ್ತು ಜಿಲ್ಲಾಪರಿಷತ್ತಿನಿಂದ ಅವರು ತರಿಸಿಕೊಂಡು ಇದನ್ನು ಮಾಡಲಿಕ್ಕೆ ಸರ್ಕಾರ ಆದೇಶ ಮಾಡಿತ್ತು, ಇದು ಸರಿಯೇ? ಅಲ್ಲವೇ? ವಸ್ತುಸ್ಥಿತಿಯನ್ನು ಮೊದಲು ಅವರು ಹೇಳಲಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಇದು ನಾಲ್ಕು ಕೋಟಿ ಜನರ ಸಮಸ್ಯೆ. ಕುಡಿಯುವ ನೀರು ಪ್ರತಿಯೊಬ್ಬರಿಗೂ ಬೇಕು.

ಶ್ರೀ ಹೆಚ್. ಏಕಾಂತಯ್ಯ : ಬೈರೇಗೌಡರೆ, first of all let us get the reply from the Minister.

ಶ್ರೀ ಎಂ.ಪಿ. ವೆಂಕಟೇಶ್ : ಕಣ್ಣೀರು ಒರೆಸಿಕೊಳ್ಳಬೇಕು ಎಂಬ ಮಾತನ್ನು ಮೊದಲು ವಾಪಸ್ ತೆಗೆದುಕೊಳ್ಳಲಿ. ಆಮೇಲೆ ಉತ್ತರ ಕೇಳೋಣ. ಕಣ್ಣೀರು ಒರೆಯಿಸಿಕೊಳ್ಳುವುದಕ್ಕಾಗಿ ನಾವು ಇಲ್ಲಿ ಬಂದಿರುವುದು? ಜಿಲ್ಲಾ ಪರಿಷತ್ತಿನ ನಾರ್ಮ್ಸ್ ಪ್ರಕಾರ 250 ಪ್ರಜಾಸಂಖ್ಯೆ ಇದ್ದರೆ ಬೋರ್‌ವೆಲ್ ಹಾಕಿಕೊಡುತ್ತಾರೆ. ಯಾವ ಜಿಲ್ಲಾ ಪರಿಷತ್ತಿನಲ್ಲಿ ಈಗ ಹಾಕಿಕೊಡುತ್ತಿದ್ದಾರೆ? ಅದಕ್ಕೇ ಶಾಸಕರು ಇಲ್ಲಿ ಬಂದು ಸಾಯುತ್ತಿರುವುದು ಬೋರ್‌ವೆಲ್ ಹಾಕಿಕೊಡಿ ಎಂದು. ಕೆ.ಹೆಚ್. ಪಾಟೀಲರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಹಳ್ಳಿಗಳಲ್ಲಿ ಬೋರ್‌ವೆಲ್ ತೆಗೆಸಿರಿ ಎಂದು ಹೇಳಿದರು ಎಲ್ಲಿ ಹಾಕಿದ್ದರೆ ಬೋರ್‌ವೆಲ್‌ಗಳನ್ನು? ಅಲ್ಲಿಗೆ ಎಲ್ಲಿ ದುಡ್ಡು ಬಂದಿದೆ?

ಶ್ರೀ ಎಸ್.ಎಚ್. ಕೌಜಲಗಿ : ಮಂತ್ರಿಗಳಿಗೆ ಹಳ್ಳಿ ಪರಿಸ್ಥಿತಿ ಗೊತ್ತಾಗುವುದಿಲ್ಲ. ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಹಿಂದೆ ಕೆ. ಎಚ್. ಪಾಟೀಲರು ಕಂದಾಯ ಸಚಿವರಾಗಿದ್ದಾಗ ತಾಲ್ಲೂಕುಗಳಲ್ಲಿ ಎಷ್ಟು ಬೋರ್‌ವೆಲ್‌ಗಳು ಬೇಕೋ ಅಷ್ಟು ತೆಗೆಯಿಸಿ ಸರ್ಕಾರ ದುಡ್ಡು ಕೊಡುತ್ತದೆ ಎಂದು ಹೇಳಿದರು. ಅವರಿಗೆ ಮಂತ್ರಿಸ್ಥಾನ ಹೋಯಿತು. ದುಡ್ಡೂ ಇಲ್ಲ, ಬೋರ್‌ವೆಲ್ಲೂ ಇಲ್ಲ. ಜನ ಎಲ್ಲಾ ನಮ್ಮನ್ನು ಕೇಳುತ್ತಾರೆ ಬೋರ್‌ವೆಲ್ ಎಲ್ಲಿ ಎಂದು. ಅಲ್ಲಿ ಕೇಳಿದರೆ ಜಿಲ್ಲಾ ಪರಿಷತ್‌ನಿಂದ ನಾರ್ಮ್ಸ್ ಕೇಳುತ್ತಾರೆ. ಈಗ ಮೊದಲು ಮಾನ್ಯ ಬಸವಲಿಂಗಪ್ಪನವರು ಹೇಳಿದ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು. ನಂತರ ಉತ್ತರ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸದಸ್ಯರಾದ ನಾರಾಯಣ್ ಅವರು ಕುಡಿಯುವ ನೀರಿನ ವಿಚಾರವನ್ನು ನಮಗೆಲ್ಲರಿಗೂ ಹೃದಯಕ್ಕೆ ತಗಲುವ ರೀತಿಯಲ್ಲಿ ಹೇಳಿದ್ದಾರೆ. ನಿಜವಾಗಿ ತಮ್ಮ ಕ್ಷೇತ್ರದಲ್ಲೂ (ಮಾನ್ಯ ಅಧ್ಯಕ್ಷರಿಗೆ) ಈ ಸಮಸ್ಯೆ ಇದೆ. ಕುಡಿಯುವ ನೀರಿನ ಸಮಸ್ಯೆ ಜ್ವಲಂತ ಸಮಸ್ಯೆ. ಬರಗಾಲದ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡಿದೆವು.

ಸಾಮಾನ್ಯವಾಗಿ ನಮ್ಮ ಪರಂಪರೆ ಏನಿದೆ ಎಂದರೆ ರಾಜ್ಯಪಾಲರ ಭಾಷಣ ಆದಮೇಲೆ ಅವರಿಗೆ ವಂದನೆ ಅರ್ಪಿಸತಕ್ಕದ್ದು ಸದನದ ಸಂಪ್ರದಾಯ, ಪದ್ಧತಿ, ಪರಂಪರೆ. ಅದನ್ನು ಬಿಟ್ಟು ರಾಜ್ಯದಲ್ಲಿ ಭೀಕರ ಬರಗಾಲ ಇದೆ ಎಂದು ಮಧ್ಯಾಹ್ನದಿಂದ ಇದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಕಂದಾಯ ಸಚಿವರು ಇದಕ್ಕೆ ಒಂದು ಹೇಳಿಕೆಯನ್ನೂ ಕೊಟ್ಟಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ನಮಗೆ ಬಹಳ ಸಂತೋಷವಾಗುತ್ತಿತ್ತು. ಸದನದಲ್ಲಿ ಎರಡೂಮುಕ್ಕಾಲು ಘಂಟೆಗೆ ಬೆಲ್ ಬಾರಿಸಿದಾಗ ಇದರ ಬಗ್ಗೆ ಕಳಕಳಿ ಇರತಕ್ಕ ಅಥವಾ ಕೊನೆಯಪಕ್ಷ ಸಂಬಂಧಪಟ್ಟ ಕೃಷಿ ಇಲಾಖೆ ಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಿಗಳು, ನಗರಾಭಿವೃದ್ಧಿ ಇಲಾಖೆ ಮಂತ್ರಿಗಳು, ಸಹಕಾರಿ ಮಂತ್ರಿಗಳು ಇರಬೇಕಾಗಿತ್ತು. ಅದಕ್ಕೂ ಮುಕ್ಕಾಲು ಘಂಟೆಗಳ ಕಾಲ ಚರ್ಚೆ ಮಾಡಿದೆವು. ಆದರೂ ನಮ್ಮ ನಾಯಕರು ಚರ್ಚೆಯನ್ನು ಪ್ರಾರಂಭಮಾಡಿದರು. ಇವರು ಬಂದು ಮುಕ್ಕಾಲು ಘಂಟೆಯಾಗಿದೆ. ಇವರ ಉತ್ತರದ ಧಾಟಿ ಏನಿದೆ? ನಾನು ಆಜ್ಞೆ ಮಾಡಿದ್ದೇನೆ, ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಆಜ್ಞೆ ಹೋಗಿಲ್ಲ ಎಂದರೆ ಕಾರ್ಯದರ್ಶಿಗೆ ಹೇಳಿದ್ದೇನೆ ಎಂದು ಹೇಳಿದರು. ನೀವು ಕಾರ್ಯದರ್ಶಿಗೆ ಏನು ಹೇಳುತ್ತೀರಿ, ಯಾವುದು ಆಜ್ಞೆಯಾಗಬೇಕು ಯಾವುದು ಆಜ್ಞೆಯಾಗುವುದಿಲ್ಲ, ಮಂತ್ರಿಗಳು ಬರೆವ ತಕ್ಷಣವೇ ಅದು ಆಜ್ಞೆಯಾಗುತ್ತದೆಯೇ ಅದು ಒಂದಾಯಿತು.

ಅದಾದಮೇಲೆ ಮಾನ್ಯ ನಾರಾಯಣ್ ಅವರು ಈ ರೀತಿ ಮಾತನಾಡಿದಮೇಲೂ ಕೂಡ ಇವರ ಹೃದಯ ಏತಕ್ಕೆ ಕಲ್ಲಾಗಿದೆ ಎಂದು ಅರ್ಥವಾಗುತ್ತಿಲ್ಲ. ಏತಕ ಉದ್ಧಟತನದಿಂದ ಮಾತನಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ಇವರ ಭಾಷೆಯ ಮೇ ಇವರಿಗೆ ಹಿಡಿತ ಇದೆಯೇ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವರೇ ಸಚಿವಸಂಪುಟ ಸದಸ್ಯರಾಗಿದ್ದರು. ಅದೇ ಸಚಿವಸಂಪುಟದಲ್ಲಿ ತೆಗೆದುಕೊಂಡ ತೀರ್ಮಾನ ಅದು. 2 ಕೋಟಿ ರೂಪಾಯಿ ಕುಡಿಯುವ ನೀರಿಗೆ ಖರ್ಚು ಮಾಡುತ್ತೇವೆಂದು ಹೇ ಒಂದೊಂದು ತಾಲ್ಲೂಕಿಗೆ ಎರಡು ಲಕ್ಷ ಮೂರು ಲಕ್ಷ ಬಿಡುಗಡೆ ಮಾಡಲಿ ಆಗಿಲ್ಲ. ಹಣಕಾಸಿನ ಪರಿಸ್ಥಿತಿ ಹೀಗಿದೆ ಎಂದು ಎರಡೂ ಕಡೆಯ ಸದನ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಏನಾದರೂ ಒಂದು ಕೆಲಸ ಮಾಡೋ ಎಂದು ಹೇಳುವುದು ಬಿಟ್ಟು ಹಿರಿಯ ಸದಸ್ಯರ ಬಗ್ಗೆ, ನಿಮ್ಮ ಪಕ್ಷದ ಸದಸ್ಯ ಬಗ್ಗೆ, ನಿಮ್ಮ ಸಹೋದ್ಯೋಗಿಗಳ ಬಗ್ಗೆ ಈ ರೀತಿ ಮಾತನಾಡಿದರೆ ಜನತೆ ನಿವ ಬಗ್ಗೆ, ನಿಮ್ಮ ಸರ್ಕಾರದ ಬಗ್ಗೆ, ನಿಮ್ಮನ್ನು ಇಟ್ಟು ಕೊಂಡಿರತಕ್ಕ ಪಕ್ಷದ ಬ ಗೌರವ ಇಟ್ಟುಕೊಳ್ಳುತ್ತದೆಯೇ ಎಂಬುದನ್ನು ನೀವು ಯೋಚನೆ ಮಾಡಬೇಕೆಂದು ನಾ ಕಿರಿಯವನಾದರೂ ನೊಂದು ಹೇಳುತ್ತಿದ್ದೇನೆ. ಈ ಸದನ ಮಹತ್ವದ ವಿಚಾರದ ಬ ಚರ್ಚೆ ಮಾಡತಕ್ಕಮ ಸಂದರ್ಭದಲ್ಲಿ ದೊಡ್ಡ ಜವಾಬ್ದಾರಿ ಹೊತ್ತಿರತಕ್ಕ ನೀವು ಈ ರೀತಿ ಉತ್ತರ ಕೊಡತಕ್ಕದ್ದನ್ನು ಸಂಪೂರ್ಣವಾಗಿ ನಾವು ಪ್ರತಿಭಟನೆ ಮಾಡುತ್ತೇ ಈ ರೀತಿ ಅಗೌರವದಿಂದ ಮಾತನಾಡಿದ್ದಕ್ಕೆ ನೀವು ನಿಮ್ಮ ಸಹೋದ್ಯೋಗಿಗಳ ಮತ್ತು ಸದನಕ್ಕೆ ಕ್ಷಮೆ ಕೇಳಬೇಕಾಗುತ್ತದೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ...

ಶ್ರೀ ಆರ್. ಎನ್. ನಾಯಕ್ : ಯಾವುದರ ಮೇಲೆ ಮಾತನಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಕಣ್ಣೀರಿನ ಮೇಲೆ ಮಾತನಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಮೊದಲನೆಯದಾಗಿ ಚರ್ಚೆ ನಡೆಯು ಇರುವುದು ಕಣ್ಣೀರಿನ ಮೇಲೆ. ಎರಡನೇ ಚರ್ಚೆ ಕಣ್ಣೀರು ಒರೆಯಿಸಿಕೊಳ್ಳಿ ಎಂಬು ಮೇಲೆ.

ಶ್ರೀ ಆರ್.ಎನ್. ನಾಯಕ್ : ಕಣ್ಣೀರು ಒರೆಯಿಸಿಕೊಳ್ಳಿ ಎಂದು ಹೇಳಿದರು. ಮತ್ತೆ ಇನ್ನೇನು ಮಾಡಬೇಕೆಂದು ಹೇಳುತ್ತೀರಿ ನೀವು?

ಶ್ರೀ ವಾಟಾಳ್ ನಾಗರಾಜ್ : ನಾವು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ.

ತಾವು ಈ ಸದನದಲ್ಲಿ ಇದ್ದೀರಿ. ತಮ್ಮಲ್ಲಿ ನಾವು ಅತ್ಯಂತ ಪ್ರಾಮಾಣಿಕವಾಗಿ ಮನವಿ ಮಾಡುತ್ತಿದ್ದೇವೆ. ಒಬ್ಬ ಆಳುವ ಪಕ್ಷದ ಸದಸ್ಯರು ಈ ವಿಚಾರವನ್ನು ಬಹಿರಂಗಪಡಿಸಿ ಕಣ್ಣೀರನ್ನು ಇಡುತ್ತೇವೆಂದಾಗ ಮಾನ್ಯ ಸಚಿವರು ನೀವು ಒರೆಯಿಕೊಳ್ಳಿ ಎಂದು ಹೇಳಿದರು. ಈ ಪರಿಸ್ಥಿತಿಯಲ್ಲಿ ಏನು ಹೇಳಬೇಕು ಎಂಬುದನ್ನು ತಾವೇ ಹೇಳಬೇಕೆಂದು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ನಾವು ಈ ಸಭೆಯ ಮುಖಾಂತರ ಅನೇಕ ಸಾರಿ ಹೇಳುತ್ತಿದ್ದೇವೆ. ಈ ಪರಿಸ್ಥಿತಿಯಬ್ಬಿ ಅವರು ವಾಪಸ್ಸು ತೆಗೆದುಕೊಳ್ಳದೇ ಇದ್ದರೆ ಏನು ಮಾಡಬೇಕೆಂದು ದಯಮಾಡಿ ತಾವು ಉತ್ತರ ಕೊಡಬೇಕು. ನಿಜಕ್ಕೂ ಇದು ಘನತೆಗೆ ಅತ್ಯಂತ ಕಳಂಕ ತರುವ ಮಾತಾಗಿದೆ. ಅವರ ಬಗ್ಗೆ ನಮಗೆ ಗೌರವ ಇದೆ. ಅವಮಾನ ಮಾಡಬೇಕೆನ್ನುವ ಉದ್ದೇಶ ಇಲ್ಲ. ಹಿರಿಯ ಸಚಿವರು ಬಾಯಿತಪ್ಪಿ ಈ ರೀತಿ ಮಾತನಾಡುತ್ತಾರೆ. ಏಕೆ ಮಾತನಾಡುತ್ತಾರೋ ಎಂದು ನನಗೆ ಅರ್ಥವಾಗುತ್ತಿಲ್ಲ. ಅವರು ನಗುನಗುತ್ತಾ ಇದ್ದಾರೆ. ಇದ್ದಕ್ಕಿದ್ದಹಾಗೆ ಮಾತೇ ಅವರಿಗೆ ಮಿತ್ರಾಗಿದೆಯೇ ಹೊರತು ಅನೇಕ ಸಾರಿ, ಪ್ರತಿ ಸಾರಿ ಆ ಮಾತನ್ನು ಮೈಮೇಲೆ ಹಾಕಿಕೊಳ್ಳುತ್ತಾರೆಯೇ ಹೊರತು ಬೇರೆ ಏನೂ ಕೆಲಸ ಆಗುತ್ತಾ ಇಲ್ಲ. ಇದು ಒಂದೇ ಅಲ್ಲ, ಅನೇಕ ವಿಚಾರಗಳಲ್ಲಿ ಮಾತನ್ನು ಎಳೆದು ಬೀದಿಗೆ ಬಿಟ್ಟು, ಚರ್ಚೆಗೆ ಬಿಟ್ಟು ದೊಡ್ಡ ಗೊಂದಲಮಯ ಮಾಡತಕ್ಕದ್ದು ಅವರ ಜಾಯಮಾನ ಆಗಿದೆ. ಇವತ್ತು ನಿಜಕ್ಕೂ ಈ ಮಾತಿನಿಂದ ಎಲ್ಲಾ ಸದಸ್ಯರಿಗೂ ಅವಮಾನವಾಗದೆ ದಯಮಾಡಿ ಇದಕ್ಕೆ ಉತ್ತರ ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

\+ ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ) ; ಮಾನ್ಯ ಅಧ್ಯಕ್ಷರೇ, ಇಂತಹ ಭೀಕರವಾಗಿರತಕ್ಕ ಪರಿಸ್ಥಿತಿಯಲ್ಲಿ ನಾವು ಇವತ್ತು ಚರ್ಚೆ ಮಾಡುವಾಗ ನಾವು ಹುಡುಗಾಟಿಕೆ ಮಾತುಗಳೆನ್ನೆಲ್ಲಾ ಈ ಸಭೆಯಲ್ಲಿ ಹೇಳತಕ್ಕದ್ದು ಸೂಕ್ತವಲ್ಲ. ಏಕೆಂದರೆ ನೀರು ಸಿಗದ ಹಳ್ಳಿಗಳಲ್ಲಿ ಆ ಹೆಣ್ಣುಮಕ್ಕಳು ನೀರಿಗಾಗಿ ಪಡುತ್ತಿರುವ ಕಷ್ಟ, ಒಂದು ಅರಬ್ಬಿ ನೀರಿಗಾಗಿ ಪಡುತ್ತಿರುವ ಕಷ್ಟ ಎಷ್ಟೆಂಬುದನ್ನು ಕಣ್ಣಾರೆ ನೋಡಿದವರಿಗೆ ಈ ಮಾತನ್ನು ಸಹಿಸುವುದಕ್ಕೆ ಆಗುವುದಿಲ್ಲ. ಎಷ್ಟೇ ಕೋಟಿ ರೂಪಾಯಿ ಹಣ ಖರ್ಚು ಆಗಲಿ ಕುಡಿಯುವ ನೀರನ್ನು ಕೊಡದೇ ಇದ್ದರೆ ನಾವು ಸರ್ಕಾರ ಏಕೆ ಇರಬೇಕು? ನಾವು ಸರ್ಕಾರ ನಡೆಸುತ್ತೇವೆಂದು ಬೀದೀಲಿ ನಾವು ಹೇಳಿಕೊಳ್ಳಬೇಕಾದುದು ಏನು ಇದೆ? ಈ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಇವತ್ತು ಅನೇಕ ಊರುಗಳಿಗೆ ಹೋಗಿ ನೋಡಿದರೆ ಬಸವಲಿಂಗಪ್ಪನವರಿಗೆ ಅಷ್ಟೇ ಅಲ್ಲ ಕಠಿಣ ಹೃದಯ ಇರುವವರ್ಯಾರಿಗಾದರೂ ಕೂಡಾ ಅದನ್ನು ನೋಡಿ ಕಣ್ಣೀರು ಬರಬೇಕಾಗಿದೆ.

ನಾರಾಯಣ್‌ರವರು ಹೇಳಿದರೆ ಕಣ್ಣೀರು ಒರೆಸಿಕೊಳ್ಳಿ ಎಂದು ಹೇಳಿದರೆ ಎಷ್ಟು ಎಲ್ಲೆ ಮೀರಿದ ಹುಡುಗಾಟಿಕೆಯ ಮಾತು ಇದು ಆಗುತ್ತದೆ ಎಂಬುದನ್ನು ನಾವು ಕೇಳಬೇಕಾಗುತ್ತದೆ. ನಾನು ಕಾಂಗ್ರೆಸ್ ಪಕ್ಷದ ಒಬ್ಬ ಸದಸ್ಯನಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಎಷ್ಟೇ ಕಷ್ಟ ಆದರೂ ನಿಮ್ಮ ಎಲ್ಲಾ ಕಾರ್ಯಕ್ರಮಗಳನ್ನು ನಿಲ್ಲಿಸಿ ಕುಡಿಯುವ ನೀರನ್ನು ಕೊಡುವ ವ್ಯವಸ್ಥೆ ಮಾಡದೇ ಹೋದರೆ ನಾವು ಇದ್ದೂ ಪ್ರಯೋಜನ ಇಲ್ಲ ಎಂದು ನನ್ನ ಅಭಿಪ್ರಾಯ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇಲ್ಲ. ನಮ್ಮ ಸಭೆಯ ಅಧ್ಯಕ್ಷರ ಮುಖಾಂತರ ನಾನು ಮುಖ್ಯಮಂತ್ರಿಯವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಬಗ್ಗೆ, ಉದ್ಯೋಗ ಇಲ್ಲದೇ ಇರುವವರಿಗೆ

ಉದ್ಯೋಗ ಒದಗಿಸುವ ಬಗ್ಗೆ ಆದ್ಯ ಗಮನ ಕೊಡಬೇಕು. ಉದಾಹರಣೆಗೆ ಹೇಳುವುದಾದರೆ ನಮ್ಮ ಕುಣಿಗಲ್ ತಾಲ್ಲೂಕಿನ 169 ಕೆರೆಗಳಲ್ಲಿ ಒಂದರಲ್ಲೂ ಕೂಡಾ ಹಕ್ಕಿಗಳು ಕುಡಿಯಲಿಕ್ಕೂ ನೀರಿಲ್ಲ, ದನಕರುಗಳಿಗೆ ನೀರಿಲ್ಲ. ಜನರಿಗೆ ಬೋರ್ವೆಲ್ ತೋಡಿ ನೀರು ಕೊಟ್ಟರೆ ಅದು 15 ದಿವಸದಲ್ಲಿ ಕೆಟ್ಟುಹೋಗುತ್ತದೆ ಅಥವಾ 300, 400 ಅಡಿ ತೋಡಿದರೂ ಬರೀ ಮಣ್ಣು ಸಿಗುವ ಪರಿಸ್ಥಿತಿ ಇದೆ. ಎಷ್ಟೋ ಹಳ್ಳಿಗಳಿಗೆ ಪ್ರಾಬ್ಲಮಾಟಿಕ್ ವಿಲೇಜಸ್ ಎಂದು ಹೆಸರಿಟ್ಟರೂ ಅಲ್ಲಿ ಏನು ಮಾಡುವುದಕ್ಕೂ ಕೂಡ ಸಾಧ್ಯವಿಲ್ಲದೇ ಇರುವ ಪರಿಸ್ಥಿತಿ ಇದೆ. ಮಾನ್ಯ ಕಂದಾಯ ಮಂತ್ರಿಗಳು ಜಿಲ್ಲೆಗಳಿಗೆ ಹೋಗಿ ಶಾಸಕರ ಜೊತೆ, ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಬಂದಿದ್ದಾರೆ.

ಈ ಸ್ಥಿತಿಯಲ್ಲಿ ಯಾವುದನ್ನೂ ಹಿಂದೆಮುಂದೆ ನೋಡದೇ ಕುಡಿಯುವ ನೀರಿನ ಬಗ್ಗೆ ಹಣ ಒದಗಿಸಬೇಕು. ಜನರಿಗೆ ಉದ್ಯೋಗ ಒದಗಿಸುವುದಕ್ಕೆ ಖರ್ಚು ಮಾಡಬೇಕು. ಇದನ್ನು ಮಾಡದೇ ಈ ಸಭೆ ನಡೆದರೂ ಉಪಯೋಗವಿಲ್ಲವೆಂದು ನನ್ನ ಅಭಿಪ್ರಾಯ. ತಾವು ಈಗಲೂ ಮುಖ್ಯ ಮಂತ್ರಿಗಳ ಜೊತೆ ಆಲೋಚನೆ ಮಾಡಿ ಈ ಅಧಿವೇಶನ ಮುಗಿಯುವದರೊಳಗೆ, ಕುಡಿಯುವ ನೀರನ್ನು ಒದಗಿಸುವ ಬಗ್ಗೆ, ಕೆಲಸ ಒದಗಿಸುವುದರ ಬಗ್ಗೆ ಎಷ್ಟು ಹಣವನ್ನು ಒದಗಿಸಬೇಕೋ ಅದನ್ನು ಒದಗಿಸಿ ಈ ಸಭೆಗೆ ಪೂರ್ಣ ಭರವಸೆ ಕೊಟ್ಟು ಸಮಾಧಾನ ಮಾಡಬೇಕು. ಬಸವಲಿಂಗಪ್ಪನವರು ಆಡಿರತಕ್ಕ ಮಾತು ಸರಿಯಾದುದಲ್ಲ. ಎಂತಹವರಿಗೂ ಮನಸ್ಸು ನೋಯುವ ಪರಿಸ್ಥಿತಿ ಇದೆ. ಅದರ ಮೇಲೆ ಅವರಿಗೆ ಯಾವ ರೀತಿ ತೋರುತ್ತದೆಯೋ ಹಾಗೆ ಮಾಡಲಿ. ಬಹಳ ದಿವಸ ಕೆಲಸ ಮಾಡಿರುವ ಅನುಭವಿಗಳು ಅವರು ಎಂದು ನಾನು ತಿಳಿದು ಕೊಂಡಿದ್ದೇನೆ. ಈ ಬಗ್ಗೆ ಅವರು ಆಡಿದ ಮಾತು ತಪ್ಪು ಎಂದು ಪರಿಗಣಿಸಿದರೆ ವ್ಯಥೆ ವ್ಯಕ್ತಪಡಿಸುವುದು ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ತಾವು ಅಪ್ಪಣೆ ಕೊಟ್ಟರೆ ಒಂದು ಮಾತನ್ನು ಹೇಳಬಯಸುತ್ತೇನೆ. ಹಿರಿಯ ಸದಸ್ಯರಾದ ಮಾನ್ಯ ಹುಚ್ಚಮಾಸ್ತಿ ಗೌಡರು ಬಹಳ ಉದ್ವೇಗದಿಂದ ಮಾತನಾಡಿದರು ಮತ್ತು ಮಾನ್ಯ ನಾರಾಯಣ ಅವರು ಕೂಡ ಕೆಲವು ಮಾತನ್ನು ಹೇಳಿದರು. ಮಾನ್ಯ ಹುಚ್ಚಮಾಸ್ತಿಗೌಡರು ಮಾತನಾಡುತ್ತಾ ಮಾನ್ಯ ಬಸವಲಿಂಗಪ್ಪನವರು ಆಡಿದ ಮಾತು ಸರಿ ಇಲ್ಲವೆಂದು ಹೇಳಿದರು. ಬರಗಾಲದ ಬಗ್ಗೆ ಅತ್ಯಂತ ಪ್ರಾಮಾಣಿಕವಾಗಿ ತನ್ನ ವಿಚಾರಧಾರೆಯನ್ನು ಈ ಸರಕಾರ ಇವತ್ತು ಇಲ್ಲಿ ಮಂಡಿಸಿದೆ. ನಮ್ಮ ಕಂದಾಯ ಮಂತ್ರಿಗಳು ಮಂಡಿಸಿರುವಂತಹ ಹೇಳಿಕೆ ಅತ್ಯಂತ ಪ್ರಾಮಾಣಿಕವಾಗಿ ಇದೆ. ಸರಕಾರದ ಧೋರಣೆ ಏನು ಎನ್ನುವುದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಪ್ರಾಮಾಣಿಕವಾಗಿ ಎರಡೇ ಪದದಲ್ಲಿ ಹೇಳಿದ್ದಾರೆ. ಬರಗಾಲದಿಂದ ಬಂದ ಸಮಸ್ಯೆಗಳಿಂದ ನಿಮಗೆ ಕಣ್ಣೀರು ಬಂದರೆ ಒರೆಯಿಸಿಕೊಳ್ಳಿ ಎಂದು ಈ ಸರಕಾರದ ಪ್ರಾಮಾಣಿಕ ಧೋರಣೆ ಎಂದು ಹೇಳಿದರು. ಆ ಮಾತುಗಳನ್ನು ಮಾನ್ಯ ಬಸವಲಿಂಗಪ್ಪನವರು ವಾಪಸ್ಸು ತೆಗೆದುಕೊಳ್ಳಬೇಕಾಗಿಲ್ಲವೆಂದು ನನ್ನ ಅಭಿಪ್ರಾಯ. ಮತ್ತೆ ಆ ಪ್ರಾಮಾಣಿಕತೆ ಸರಿ ಇಲ್ಲವೆಂದು ಹೇಳುವಂತಹ ಸದಸ್ಯರು ಆ ಪಕ್ಷದಲ್ಲಿ ಉಳಿಯಬಾರದು ಅಷ್ಟೇ.

ಶ್ರೀ ಆರ್.ಎನ್. ನಾಯಕ್ : 25 ಕೋಟಿ ರೂಪಾಯಿ ಬಗ್ಗೆ ಹೇಳುತ್ತಿದ್ದರು ಆಮೇಲೆ ಎದ್ದು ಎದ್ದು ....

ಒಬ್ಬ ಮಾನ್ಯ ಸದಸ್ಯರು : ಅವರವರ ಅಭಿಪ್ರಾಯವನ್ನು ಹೇಳುವುದು ತಪ್ಪು ಅಲ್ಲ. ಇಲ್ಲಿ ರಾಜಕೀಯ ತರಬೇಡಿ.

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ಹಾಗೇ ಕಣ್ಣೀರು ಸುರಿಸುತ್ತಾ ಇರುವುದಕ್ಕೆ ಆಗುತ್ತದೆಯೇ ? ಕಡತವನ್ನು ಬೇಕಾದರೆ ತೆಗೆಸಿ ನೋಡಿ. ನಮ್ಮ ಹತ್ತಿರ ದುಡ್ಡು ಇದೆ ಏನಾದರೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ತಿರುಗಿ ಅದನ್ನೇ ತೆಗೆದು ತಮಾಷೆ ಮಾಡುತ್ತೇನೆ ಅದು ಇದು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು ನಿಮ್ಮನ್ನು ಕೆಣಕುತ್ತಿದ್ದೇವೆ ಎಂದು. ಅವರು ಪ್ಲಾನ್ ಹೇಳುತ್ತಿದ್ದರು ಆಗ ಅರ್ಥ ಮಾಡಿಕೊಳ್ಳಲಾಗಲಿಲ್ಲ. ಬರಗಾಲ ನಿಲ್ಲುವುದು ನಿಮಗೆ ಬೇಕಾಗಿಲ್ಲ. ಇಂಥಾದ್ದೊಂದು ಕಥೆ ಬೇಕು ನಿಮಗೆ ಅಷ್ಟೇ. ಆ ಧೋರಣೆ ಬಿಡಿ. ಎಲ್ಲರೂ ಸೇರಿ ಸರಕಾರದಿಂದ ಹಣ ತೆಗೆದುಕೊಂಡ ಕೆಲಸ ಮಾಡಿ.

ಶ್ರೀ ಸಿ. ಬೈರೇಗೌಡ : ಕಣ್ಣೀರಿನ ಮಾತನ್ನು ಬಿಟ್ಟು ನೀರಿನ ಬಗ್ಗೆ ಮಾತನಾಡಿ. ಯಾರೋ ಏನೋ ಮಾತನಾಡಿದರು ಎಂದು ಕಣ್ಣೀರಿನ ಬಗ್ಗೆ ಹೇಳುತ್ತೀರಿ. ನೀರಿನ ಸಮಸ್ಯೆ ಬಗ್ಗೆ ಮಾತನಾಡಿ.

(ಗೊಂದಲ)

ಆರ್.ಎನ್. ನಾಯಕ್ : ಸರಕಾರದಿಂದ ಹಣ ತೆಗೆದುಕೊಂಡು ಕೆಲಸ ಮಾಡಿಸಿಕೊಳ್ಳಿ.

(ಗೊಂದಲ)

ಶ್ರೀ ಸಿ. ಬೈರೇಗೌಡ: ನೀವು ಕುಳಿತುಕೊಳ್ಳಿ ಇಷ್ಟು ನಿಷ್ಠೂರವಾಗಿ....

(ಗೊಂದಲ)

ಶ್ರೀ ಆರ್.ಎನ್. ನಾಯಕ್: ಕುಳಿತುಕೊಳ್ಳುವುದು ಬಿಡುವುದು ನನಗೆ ಸೇರಿದ್ದುದು.

ಶ್ರೀ ಎಲ್.ಆರ್. ಶಿವರಾಮೇಗೌಡ: ಎಲ್ಲರನ್ನೂ ಕೂಡಿಸಿ ನೀವೊಬ್ಬರೇ ಮಾತನಾಡಬೇಕೆಂದು ಇದ್ದೀರಾ? ಅವರೂ ಕೂಡ ಈ ಸದನದ ಸದಸ್ಯರು ನಿಮ್ಮ ಸ್ನೇಹಿತರು ಗೌರವದಿಂದ ಮಾತನಾಡಿ. ಅವರೇನು ಕಡಲೇಕಾಯಿ ತಿನ್ನುವುದಕ್ಕೆ ಬಂದಿದ್ದಾರೆಯೇ?

(ಗೊಂದಲ)

ಶ್ರೀ ಸಿ. ಬೈರೇಗೌಡ: ಬೇಕಾದರೆ ಬೇವಿನ ಕಾಯಿ ತಿನ್ನಿ. ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ತಾವು ಹಿರಿಯ ಸದಸ್ಯರಾಗಿದ್ದೀರಿ ಗೌರವದಿಂದ ಮಾತನಾಡಿ ಬಾಯಿ ತಪ್ಪಿ ಮಾತನಾಡಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಇನ್ನಾರು ತಿಂಗಳು ಕಳೆದರೆ ಶಿವರಾಮೇಗೌಡರೂ ಇದೇ ಮಾತನಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಬಾಯಿ ತಪ್ಪಿ ಮಾತನಾಡಿದರೆ ಅದನ್ನೇ ಇಷ್ಟು ದೊಡ್ಡದಾಗಿ ಮಾತನಾಡುತ್ತಿದ್ದೀರಿ. ಅನಿವಾರ್ಯವಾಗಿ ಅಂದಿರಬಹುದು. ಇನ್ನೂ ಬಹಳ ಹೊಲಸು ಮಾತನಾಡಿರತಕ್ಕಂಥಾದ್ದು ಸದನದ ರೆಕಾರ್ಡಿನಲ್ಲಿ ಇದೆ.

ಶ್ರೀ ಎಂ. ವೆಂಕಟೇಶ್ : ಈ ಸದನದ ಹಿರಿಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಮಾತನಾಡುವುದು ಓಡಿಸಲಿಲ್ಲವೆಂದು ಹೇಳಿದರೆ ಇನ್ಯಾರು ಮಾತನಾಡುವುದು ಹಿಡಿಸುತ್ತದೆಯೋ ನನಗೆ ಗೊತ್ತಿಲ್ಲ. ಅವರು ಕಣ್ಣೀರು ಹಾಕುತ್ತಾ ಹೇಳಿದ್ದಾರೆ ಹಾಗಾದರೂ ಅವರಿಗೆ ಅರ್ಥವಾಗಲಿಲ್ಲವೆಂದರೆ ಇನ್ನೇನು ಅವರಿಗೆ ಅರ್ಥವಾಗುತ್ತದೋ ಗೊತ್ತಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಕೆಲವು ಮಾತುಗಳು ಹೆಚ್ಚೂ ಕಡಿಮೆಯಾಗಬಹುದು.

ಶ್ರೀ ಸಿ. ಭೈರೇಗೌಡ : ಏನೂ ಕೆಲಸವಿಲ್ಲವೆಂದರೆ ಅದಕ್ಕೆ ಏನಾದರೂ ಅರ್ಥವಿದೆಯೆ? ಬೇಜವಾಬ್ದಾರಿಯಿಂದ ಯಾರು ಮಾತನಾಡುತ್ತಾರೆ ಅವರು ಕುಳಿತುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಇಷ್ಟು ನಾವು ದೀರ್ಘವಾಗಿ ಸದ್ದು ಮಾಡುವುದು ಸರಿಯಲ್ಲ. ಈಗ 25ಕೋಟಿ ಉಂಟು ಎಂದು ಹೇಳಿದರೆ ಅವರು ಪೂರ್ತಿ ಮಾಡಲಿಕ್ಕೆ ಸಾಧ್ಯತೆ ಉಂಟು. ಆದರಿಂದ ಕಣ್ಣೀರು ಒರೆಸಲಿಕ್ಕೆ ಸಾಧ್ಯತೆ ಉಂಟು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಚರ್ಚೆ ಪ್ರಾರಂಭ ಮಾಡಿ. ಇಲ್ಲದೆ ಇರುವುದನ್ನು ಏತಕ್ಕೆ ಚರ್ಚೆ ಮಾಡುತ್ತೀರಿ? 25ಕೋಟಿ ಎಲ್ಲಿದೆ ನೋಡೋಣ. ಈಗ ಏನಿದೆ ಅದರ ಬಗ್ಗೆ ಚರ್ಚೆಮಾಡಿ ತಮ್ಮ ಸಲಹೆಗಳನ್ನು ಕೊಡಿ, ನಾವೇನು ಸಹಾಯ ಮಾಡಬಹುದು ಅದನ್ನು ಮಾಡೋಣ. ತಾವು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದ ಮೇಲೆ ನಾನು ಉತ್ತರ ಕೊಡಲೇಬೇಕು. ನಾನು ಉತ್ತರ ಕೊಡಬಾರದೆಂದು ಇದ್ದೆ. ಏಕೆಂದರೆ ಪ್ರಮುಖವಾಗಿ ನಾನು ಬೆಳಿಗ್ಗೆಯಿಂದ ಹೇಳುತ್ತಾ ಬಂದಿದ್ದೇನೆ. ಈಗ ಸಮಗ್ರವಾಗಿರತಕ್ಕ ನೀರಿನ ಪರಿಸ್ಥಿತಿಯನ್ನು ಯೋಚನೆ ಮಾಡಿ, ಎಷ್ಟು ಹಣ ಇಟ್ಟುಕೊಳ್ಳಬೇಕು ಅದನ್ನು ಯೋಚನೆ ಮಾಡಿ, ಮಿತಿಮೀರಿ ಈವೊಂದು ಕಷ್ಟಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಅದಕ್ಕೋಸ್ಕರ ಒಂದು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಅದರ ಮೇಲೆ ತಾವು ಚರ್ಚೆಮಾಡಿಯೆಂದು ಬೆಳಿಗ್ಗೆಯಿಂದ ಹೇಳುತ್ತಿದ್ದೇನೆ. ಸ್ಟೇಟ್‌ಮೆಂಟ್ ತಮ್ಮ ಮುಂದಿಲ್ಲ. ಅದರ ಬಗ್ಗೆ ತಾವು ಕೇಳಿದ್ದೀರಿ. ಅದಕ್ಕೋಸ್ಕರ ನಾನು ಮೇಲೆ ಹೋಗಿ ಬಂದೆ. ಮಧ್ಯಪ್ರವೇಶ ಮಾಡಿ ಮಾತನಾಡಿದೆ. ಏನು ಭಾಷೆ ಬೇಕಾದರೂ ಮಾತನಾಡಬಹುದೇ? ನಾನು ಏನು ಬೇಕಾದರೂ ಭಾಷೆ ಮಾತನಾಡಬಹುದೇ? ನಾನು ಎಷ್ಟೇ ಸೌಜನ್ಯವಾಗಿ ಹೇಳಿದರೂ ಕಠಿಣವಾದ ಚುಚ್ಚುವ ರೀತಿಯಲ್ಲಿ ಬೇಜವಾಬ್ದಾರಿ ಪದ ಉಪಯೋಗಿಸುವುದು, ಉದ್ಧಟತನ ಎಂದು ಪದ ಉಪಯೋಗಿಸುವುದು, ಯಾವ ವಿವೇಚನೆಯಿಲ್ಲದೆ ಆವೇಶದಿಂದ ಮಾತನಾಡತಕ್ಕ ವಿಷಯ ಏನಿದೆ. ಹಳ್ಳಿಗಳಲ್ಲಿ ಅವಶ್ಯಕವಾಗಿ ಯಾವ ಸಮಸ್ಯೆ ಇದೆ ಅದರ ಬಗ್ಗೆ ಸಮಗ್ರವಾಗಿ ಅಭ್ಯಾಸಮಾಡಿ ಮೂರು ನಾಲ್ಕು ದಿವಸಗಳಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆ. ಅದರ ಮೇಲೆ ನೀರು ಚರ್ಚೆಮಾಡಿ. ತಾವೇನು ಆದೇಶ ಕೊಡುತ್ತೀರಿ ಅದರ ಪ್ರಕಾರ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು -ಸ್ಪಷ್ಟವಾಗಿ ಹೇಳುತ್ತಾ ಬಂದಿದ್ದೇವೆ. ಅದು ಯಾವುದೂ ಇಲ್ಲದೇ ಏನೋ ಆವೇಶದಿಂದ ಹೇಳುತ್ತಿದ್ದಾರೆ. ಕಷ್ಟಗಳು ಇವೆ, ನಾವೇನು ಮಾಡಬೇಕು? ಕೈಲಾದಷ್ಟು ಮಿತಿಮೀರಿ ಕೆಲಸ ಮಾಡುತ್ತಿದ್ದೇವೆ. ಮೊನ್ನೆ 14 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಎಂಪ್ಲಾಯಿಮೆಂಟ್ ರಿಸೋರ್ಸಸ್ ಇರತಕ್ಕದ್ದನ್ನು ನಾವು ಮಾಡಿದ್ದೇವೆ. ಪುನಃ ಜಾಸ್ತಿ ಜಾಸ್ತಿ ಮಾಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಸರ್ಕಾರ ಆದ್ಯತೆಯ ಆಧಾರದ ಮೇಲೆ ನೀರಿನ ಅವಶ್ಯಕತೆ ಎಲ್ಲಿದೆ ಅದನ್ನು ಪರಿಹಾರ ಮಾಡಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದೇವೆ. ಎಷ್ಟು ಹಣವಾದರೆ ಏನಂತೆ? ನಾವು ಅದನ್ನು ಮಾಡುತ್ತೇವೆ. ಅದರಲ್ಲಿ ಏನಾದರೂ ಅವ್ಯವಹಾರ ನಡೆದರೆ ಅದರ ಬಗ್ಗೆ ಮಾತನಾಡಿ. ಅದನ್ನು ತಪ್ಪು ತಿಳಿದುಕೊಂಡು ತಿರುಗುಬಾಣ ಬಿಡತಕ್ಕ ವ್ಯವಸ್ಥೆಯಲ್ಲಿದ್ದೀರಿ. ಸ್ವಾಮಿ ನಾನು ಹೇಳುತ್ತೇನೆ, ತಾವು ಮಾತನಾಡಿ ಅದಕ್ಕೆ ನನ್ನ ಅಭ್ಯಂತರವಿಲ್ಲ. ಕೈಮುಗಿದು ಹೇಳುತ್ತೇನೆ, ಭಾಷೆಯನ್ನು ಮಾತ್ರ ಹಿಡಿತದಲ್ಲಿಟ್ಟುಕೊಂಡು ಮಾತನಾಡಿದರೆ ಆಗ ನನಗೆ ಆನಂದವಾಗುತ್ತದೆ ಸಂತೋಷವಾಗುತ್ತದೆ. ನಾವು ಅಧಿಕಾರದಲ್ಲಿದ್ದೇವೆಂದು ಏನು ಬೇಕಾದರೂ ಮಾತನಾಡಬಹುದೇ ಅದು ಸರಿಯಲ್ಲ, ತಾವು ಕೂಡ ಏನು ಬೇಕಾದರೂ ಕೇಳುತ್ತಾರೆಂದು ಹೇಳುವುದು ಸರಿಯಲ್ಲ. ಮಾನ್ಯ ವಾಟಾಳ್‌ನಾಗರಾಜ್‌ರವರು ನನಗೆ ಬುದ್ಧಿ ಹೇಳುತ್ತಾರೆ. ಅವರು ಹೇಳಿದ್ದನ್ನು ನಾನು ಕಿವಿಯಿಂದ ಕೇಳಿದ್ದೇನೆ. ನಾನು ಉತ್ತರ ಕೊಡುವುದಕ್ಕೆ ಹೋಗಲಿಲ್ಲ.

ಮತ್ತೆ ಕೆಲವು ಸದಸ್ಯರು ಏನು ಬೇಕಾದರೂ ಹೇಳುತ್ತಾರೆ, ಅದಕ್ಕೆ ದಯಮಾಡಿ ಕೇಳಿರಿ, ನನ್ನ ಉದ್ದೇಶ ಪವಿತ್ರವಾಗಿರತಕ್ಕದ್ದು. ನಿಮಗೆ ಏನು ಅವಶ್ಯಕತೆಯಿದೆ ಅದನ್ನು ನಿವಾರಣೆ ಮಾಡುವುದಕ್ಕೆ ನನಗೆ ಮೂರ್‍ನಾಲ್ಕು ದಿವಸ ಟೈಮ್ ಕೊಡಿಯೆಂದು ಹೇಳಿದ್ದೇನೆ. ನಾನೊಂದು ಸ್ಟೇಟ್‌ಮೆಂಟ್ ಮಾಡುತ್ತೇನೆ. ತಾವು ಆಮೇಲೆ ತರ್ಕ ಮಾಡಿ. ನೀವು ಏನು ಸಲಹೆ ಕೊಡುತ್ತೀರಿ ಕೊಡಿ. ಅದರ ಪ್ರಕಾರ ಹಣ ಎಷ್ಟು ಕೊಡಿಯೆಂದು ಹೇಳುತ್ತೀರಿ. ಅದನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಇದರ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ನನಗೆ ಮೂರು ದಿವಸ ಟೈಮ್ ಕೊಡಿ. ಅದು ಆದಮೇಲೆ ನೀವು ಏನು ಹೇಳುತ್ತೀರಿ ಅದನ್ನು ಕೇಳೋಣ. ಯಾವ್ಯಾವ ಊರಿನಲ್ಲಿ ಏನೇನು ನಡೆದಿದೆ, ಯಾವ ಊರಿನಲ್ಲಿ ಏನು ಅವಶ್ಯಕತೆಯಿದೆ ಅದನ್ನು ಪರಿಶೀಲನೆ ಮಾಡಿ ಅದನ್ನು ನಿವಾರಣೆ ಮಾಡತಕ್ಕ ಮಾರ್ಗವನ್ನು ಹುಡುಕಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯಸದಸ್ಯರಾದ ನಾರಾಯಣ್‌ರವರು ಕುಡಿಯುವ ನೀರಿನ ಸಮಸ್ಯೆ ನೋಡಿದರೆ ನನಗೆ ಕಣ್ಣಿನಲ್ಲಿ ನೀರು ಬರುತ್ತದೆಂದು ಹೇಳಿದರು. ಸದಸ್ಯರು ಮಾತನಾಡುವುದಕ್ಕೆ ಹಕ್ಕುಂಟು. ಮಾನ್ಯ ಹುಚ್ಚಮಾಸ್ತಿಗೌಡರು ನನ್ನ ಮನಸ್ಸಿಗೆ ಬೇಸರವಾಯಿತು ಬಸವಲಿಂಗಪ್ಪನವರು ಆ ಮಾತು ಆಡಬಾರದಾಗಿತ್ತು ಎಂದು ಹೇಳಿದರು. ನಾನು ನನ್ನ ಭಾಷೆಯಲ್ಲಿ ಮಾತನಾಡಿದ್ದೇನೆ.

ಕಣ್ಣೀರು ಒರೆಸಿಕೊಳ್ಳಿ ಎಂದು ಹೇಳಿದೆ. ಅದು ಬೇಡವೆಂದರೆ ನಾನು ಬಂದು ಅವರ ಮುಖ ತೊಳೆಯಬೇಕೇ?

ಶ್ರೀ ಆರ್. ನಾರಯಣ : ಕಣ್ಣಲ್ಲಿ ನೀರು ಬರುತ್ತದೆ ಎಂದರೆ ಒರೆಯಿಸಿಕೊಳ್ಳಿ ಎಂದರೆ ಹೇಗೆ? ಇದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ: ನೀವು ಏನು ಬೇಕಾದರೂ ಮಾತನಾಡಬಹುದೇ. ಶ್ರೀ ದೇಶಪಾಂಡೆಯವರೇ, ನೀವು ಇಲ್ಲಿ ಬಂದು ಕುಳಿತುಕೊಳ್ಳುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ: ನಾವು ಬರ್‍ತೇವೆ.

ಶ್ರೀ ಬಿ. ಬಸವಲಿಂಗಪ್ಪ: ನೀವು ಛಿದ್ರಛಿದ್ರವಾಗಿ ಒಡೆದುಹೋಗುತ್ತಿದ್ದೀರಿ. ನೀವು ಇಲ್ಲಿ ಬರುವ ಪ್ರಶ್ನೆಯೆ ಇಲ್ಲ. ಇಲ್ಲಿ ಬಂದು ಮಾತನಾಡಿದರೆ ಜನ ಬೆಂಬಲ ಕೊಡುತ್ತಾರೆ ಎಂದು ತಿಳಿದಿದ್ದೀರಾ? ಈಗ ಮೂರು ದಿವಸಗಳ ಹಿಂದೆ ಶ್ರೀ ನಾರಾಯಣ ಅವರಿಗೆ ಹೇಳಿದ್ದೇನೆ. ತುಮಕೂರು ಜಿಲ್ಲೆಗೆ ಇಷ್ಟು ಹಣ ಬಿಡುಗಡೆ ಮಾಡಿದ್ದೇನೆ, ಇದನ್ನು ಪೂರೈಸಿ ಆದಮೇಲೆ ಎಷ್ಟು ಬೇಕಾದರೂ ಕೊಡಲಿಕ್ಕೆ ತಯಾರಿದ್ದೇನೆ ಎಂದು ಅವರು ನನ್ನ ಚೇಂಬರ್‌ಗೆ ಬಂದಿದ್ದಾಗ ಹೇಳಿದ್ದೇನೆ. ಈಗ ಪಾಪ, ಅವರ ಕಳಕಳಿಯನ್ನು ಅವರು ವ್ಯಕ್ತಪಡಿಸಿದ್ದಾರೆ. ನಾನೂ ಕೂಡ ಕಳಕಳಿಯನ್ನು ಹೊಂದಿದ್ದೇನೆ. ಈಗ ನೀರು ಒಮ್ಮೆಗ್ಗೆ ಕೆಳಗೆ ಹೋಗಿದೆ. ಮುನ್ನೂರು ಅಡಿ ಕೆಳಗೆ ಹೋದರೆ 150 ಬೋರ್‌ವೆಲ್‌ಗಳು ಏನಾಗಬೇಕು? ಅವುಗಳು ಬತ್ತಿಹೋಗಿಬಿಡುತ್ತವೆ. ಅವನ್ನು ಕೂಡ ಆಳವಾಗಿ ಮಾಡಬೇಕಾಗುತ್ತದೆ. ನಾನು ಹೀಗೆ ಹೇಳಿದರೆ ಅದರ ಮನಸ್ಸೇನೂ ನೋಯುವುದಿಲ್ಲ. ನಾವು ಹಗಲೆಲ್ಲ ಅದೇ ಮಾತನಾಡುವುದು. ಪ್ರೀತಿಯ ಸಲುಗೆಯಿಂದ ಮಾತನಾಡಿದ್ದು ತಪ್ಪಾಗುತ್ತದೆ. ಅಕಸ್ಮಾತ್ ಈಗ ತಪ್ಪಾಯಿತು ಎಂದು ಇಟ್ಟುಕೊಳ್ಳೋಣ. ಈಗ ಏನಾದರೂ ಅವರ ಮನಸ್ಸಿಗೆ ಬೇಸರವಾಗಿದ್ದರೆ ನಾನು ಅದನ್ನು ವಾಪಾಸ್ಸು ತೆಗೆದುಕೊಳ್ಳುತ್ತೇನೆ. ಅವರಿಗೆ ಬೇಸರವಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರ ಮೇಲೆ ನನಗೆ ಹಕ್ಕು ಇದೆ.

ಶ್ರೀ ಆರ್. ನಾರಾಯಣ್: ಅಧ್ಯಕ್ಷರೇ, ನನಗೆ ಬೇಸರವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಅವರಿಗೆ ಯಾವ ಭಾಷೆ ಉಪಯೋಗಿಸಬೇಕು

ಎಂಬ ವಿವೇಚನೆ ಇದೆಯೆಂದು ತಿಳಿದುಕೊಂಡಿದ್ದೆ. ನನ್ನ ತಿಳುವಳಿಕೆ ತಪ್ಪಾಗಿರಬಹುದು. ಅವರಿಗೆ ಆ ಭಾಷೆಯೇ ಸೂಕ್ತವೆಂದರೆ ಅದು ಅವರ ಇಚ್ಛೆ.

ಅಧ್ಯಕ್ಷರು : ಈಗ ಸದನ ಏನು ನಿರೀಕ್ಷೆ ಮಾಡುತ್ತದೆ ಎಂದರೆ ಎಲ್ಲರೂ ಒಟ್ಟಿಗೆ ಸೇರಿ ಕಣ್ಣೀರನ್ನು ಒರೆಸಬೇಕಾಗಿರತಕ್ಕಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಕುಡಿಯುವ ನೀರಿನ ಸಮಸ್ಯೆ ಮೂಲಭೂತವಾದ ಸಮಸ್ಯೆ, ಜ್ವಲಂತವಾದ ಸಮಸ್ಯೆ. ನಮಗೆಲ್ಲರಿಗೂ ಗಾಭರಿ ಹುಟ್ಟಿಸತಕ್ಕಂಥ ಸಮಸ್ಯೆ. ಆದ್ದರಿಂದ ಮಾನ್ಯ ಸಚಿವರು ಶ್ರೀ ನಾರಾಯಣ ಅವರ ಸಮಸ್ಯೆಯನ್ನು, ಕಳಕಳಿಯನ್ನು ಗಮನಿಸಿದ್ದಾರೆ, ಅರ್ಥಮಾಡಿಕೊಂಡಿದ್ದಾರೆ. ಆದರೆ ಅವರು ಅಭಿವ್ಯಕ್ತಿ ಮಾಡಿರತಕ್ಕಂಥ ರೀತಿನೀತಿಗಳ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಸಚಿವರಿಗೆ ಅದರ ಬಗ್ಗೆ ಕಳಕಳಿ ಇದೆ. ಬೆಳಿಗ್ಗೆಯಿಂದ ಅವರು ಹೇಳುತ್ತಲೇ ಬಂದಿದ್ದಾರೆ. ಎರಡು ಮೂರು-ದಿವಸ ಟೈಮ್ ಕೊಡಿ, ಕುಡಿಯುವ ನೀರಿನ ಬವಣೆ ನಿವಾರಣೆ ಮಾಡುವುದರ ಬಗ್ಗೆ ಹೇಳಿಕೆ ಕೊಡುತ್ತೇನೆ ಎಂದು. ಆದ್ದರಿಂದ ಈಗ ಶ್ರೀ ಬೈರೇಗೌಡರೇ, ನೀವು ಮುಂದುವರೆಸಿ.

ಶ್ರೀ ಸಿ. ಬೈರೇಗೌಡ : ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನಮ್ಮ ಜಿಲ್ಲೆಗೆ ಬಂದಾಗಲೂ ಕೂಡ ಅವರು ಒಪ್ಪಿದ್ದಾರೆ. ನಾವು ಇಷ್ಟು ಹೊತ್ತಿನವರೆಗೆ ಜನರಿಗೆ ಕುಡಿಯುವ ನೀರು ಕೊಡುವ ಬಗ್ಗೆ ಮಾತನಾಡಿದ್ದೇವೆ. ಆದರೆ ಜಾನುವಾರುಗಳ ಬಗ್ಗೆ ಅಷ್ಟಾಗಿ ಗಮನಿಸಿಲ್ಲ. ಆದ್ದರಿಂದ ಎಲ್ಲೆಲ್ಲಿ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ಗಳಿವೆ, ಅಲ್ಲೆಲ್ಲಾ ನೀರಿನ ತೊಟ್ಟಿಗಳನ್ನು ಕಟ್ಟಿ ನೀರು ಕೊಡತಕ್ಕಂಥಾದ್ದು ಬಹಳ ಯೋಗ್ಯ ಇದೆ. ಇದನ್ನು ಅವರು ಒಪ್ಪಿದ್ದಾರೆ. ತತ್‌ಕ್ಷಣದಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಹಣ ಬೇಕಾದರೂ ಬಿಡುಗಡೆ ಮಾಡುತ್ತೇನೆ, ನೀವು ಮಾಡಿ ಎನ್ನತಕ್ಕಂಥ ಮಾತನ್ನು ಕೂಡ ನಮ್ಮ ಜಿಲ್ಲೆಯಲ್ಲಿ ಹೇಳಿ ಬಂದಿದ್ದಾರೆ. ಅದೇ ರೀತಿ ರಾಜ್ಯದಾದ್ಯಂತ ಜಾನುವಾರುಗಳಿಗೆ ನೀರು ಕೊಡುಲಿಕ್ಕೆ ತೊಟ್ಟಿಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ಮಾಡಬೇಕೆಂಬ ಸಲಹೆಯನ್ನು ಅವರಿಗೆ ಕೊಡುವುದಕ್ಕೆ ಬಯಸುತ್ತೇನೆ. ಮತ್ತೆ ವಿದ್ಯುಚ್ಛಕ್ತಿ ಬಗ್ಗೆ ನಾನು ಈಗಾಗಲೇ ಹೇಳಿದೆ. ಸ್ವಲ್ಪಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಸುಧಾರಣೆಯಾಗುತ್ತಿದೆ. ಆದರೆ ಇರತಕ್ಕಂಥ ಎಲ್ಲಾ ತಾಲ್ಲೂಕುಗಳಲ್ಲಿ, ಎಲ್ಲಾ ಹಳ್ಳಿಗಳಲ್ಲೂ ಸಮಸ್ಯೆ ಸಮರ್ಪಕವಾಗಿ ಬಗೆಹರಿದಿದೆ ಎಂದು ಹೇಳಿದರೆ, ಇಲ್ಲ. ಈಗ ಕೆಲವು ತಾಲ್ಲೂಕುಗಳಲ್ಲಿ, ಅದರಲ್ಲೂ ಪ್ರಮುಖವಾಗಿ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಈ ವಿದ್ಯುಚ್ಛಕ್ತಿ ಸರಬರಾಜು ಬಹಳ ಅಧೋಗತಿಗೆ ಇಳಿದುಬಿಟ್ಟಿದೆ. ಈಗಲೂ ಕೂಡ ರಾತ್ರಿ ಎರಡು-ಮೂರು ಗಂಟೆಗೆ ಹೋಗಿ ಪ್ಯಾನಲ್ ಬೋರ್ಡಿನ ಗುಂಡಿಯನ್ನು ಒತ್ತಿದರೆ 180-200 ವೋಲ್ಟ್‌ಗಿಂತ ಕಡಿಮೆ ಇರತಕ್ಕಂಥಾದ್ದನ್ನು ನಾವು ಅನೇಕ ಹಳ್ಳಿಗಳಲ್ಲಿ ಕಾಣುತ್ತಿದ್ದೇವೆ. ಇವತ್ತು ನಮಗೆ ಕೆರೆಯಲ್ಲಿ ನೀರು ಇಲ್ಲವೆಂದು ಹೇಳಿದ್ದೇವೆ. ಭೂಮಿಯ ಒಳಗಡೆ ಇರತಕ್ಕಂಥ ನೀರನ್ನು ತರುವುದು ನಮ್ಮ ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ತೊಂದರೆಯಾಗಿದೆ. ಈಗಾಗಲೇ ಡೀಸೆಲ್ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ್ದೇವೆ. ಟ್ರಾಕ್ಟರುಗಳಿಗೆ ಡೀಸೆಲ್ ಇಲ್ಲದೇ ಹೋದರೆ, ವ್ಯವಸಾಯ ಮುಂದುವರಿಯುವುದಾದರೂ ಹೇಗೆ? ವಿದ್ಯುಚ್ಛಕ್ತಿ ಇಲ್ಲದೆ ತೊಂದರೆಯಾಗಿದೆ.

ನನ್ನ ಹತ್ತಿರ ಕೆಲವು ಅಂಕಿ ಅಂಶ ಇವೆ. ಬೆಳೆದು ನಿಂತಿರತಕ್ಕ ಆಲೂಗಡ್ಡೆ ಬೆಳೆ ಇದೆ, ಇದು ಬಹಳ ಸೂಕ್ಷ್ಮವಾದ ಬೆಳೆ. ಈ ಬೆಳೆಗೆ ಮೂರು ದಿವಸಗಳಿಗೊಮ್ಮೆ ನೀರನ್ನು ಕೊಡಲೇಬೇಕು. ನೀರು ಕೊಡದೇ ಹೋದರೆ ಬೆಳೆ ಹಾಳಾಗಿ ಹೋಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಕ್ವಿಂಟಾಲ್ ಅಥವಾ 70-80 ಕೆ.ಜಿ. ಆಲೂಗಡ್ಡೆ ಬಿತ್ತನೆ ಗಡ್ಡೆಗೆ, ಒಂದು ಸಾವಿರ ರೂಪಾಯಿವರೆಗೂ ರೈತರು ಕೊಟ್ಟು ತಂದಿದ್ದಾರೆ. ಸುಮಾರು 5 ಸಾವಿರ ಎಕರೆಯಲ್ಲಿ ಈ ಬೆಳೆ ಬೆಳೆದು ನಿಂತಿದೆ. ವಿದ್ಯುತ್

ಅಭಾವದಿಂದ ಇಷ್ಟು ಭೂಮಿಯಲ್ಲಿ ಬೆಳೆದು ನಿಂತಿರುವ ಈ ಬೆಳೆ ಹಾಳಾಗತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ತ್ವರಿತವಾಗಿ ವಿದ್ಯುತ್ತನ್ನು ಒದಗಿಸಬೇಕು ಮತ್ತು ಈ ಸ್ಥಿತಿಯಿಂದ ರೈತರನ್ನು ಪಾರು ಮಾಡಬೇಕಾದ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಭಿನ್ನೈಸುತ್ತೇನೆ. ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೂಡ ಇಲ್ಲ, ವಿವರವಾಗಿ ಹೇಳುವುದಕ್ಕೆ ನಾನು ತಯಾರಿದ್ದೇನೆ. ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಪರಿಸ್ಥಿತಿ ಎಂಬ ಬಗ್ಗೆ ವಿವರವಾದ ಚಿತ್ರ ನನ್ನ ಹತ್ತಿರ ಇದೆ. ಇಲ್ಲಿ ಸಂಬಂಧಪಟ್ಟವರು ಇಲ್ಲದಿರುವ ಕಾರಣದಿಂದ, ನಾನು ಹೇಳಿದರೂ ಕೂಡ ಅದು ವ್ಯರ್ಥವಾಗುತ್ತದೆ. ಆದ್ದರಿಂದ, ಇಷ್ಟಕ್ಕೇ ಸೀಮಿತಗೊಳಿಸುತ್ತೇನೆ. ಮುಖ್ಯವಾಗಿ ನಮಗೆ ಬೇಕಾಗಿರುವುದು ಕುಡಿಯುವ ನೀರು ಮತ್ತು ವಿದ್ಯುತ್ ಸರಬರಾಜು. ಇವೆರಡನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಆದ್ಯತೆ ಕೊಡಬೇಕು. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ನದಿ ನಾಲೆಗಳಾಗಲೀ, ನೀರಿನ ದೊಡ್ಡ ಆಶ್ರಯಗಳು ಯಾವುವೂ ಇಲ್ಲದಿರುವ ಪರಿಸ್ಥಿತಿ ಇರುವಾಗ, ನಮಗೆ ಗತಿ ಯಾವುದು. 500-600 ಅಡಿ ಒಳಗಡೆ ಇರತಕ್ಕ ನೀರೇ ಗತಿ. ಈ ನೀರನ್ನು ತೆಗೆಯುವುದಕ್ಕೆ ಮತ್ತು ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳಿ, ಇಷ್ಟು ಅವಕಾಶವನ್ನು ತಾವು ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ನಾರಾಯಣ ಸ್ವಾಮಿ (ಬೆಳ್ಳಾವಿ) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸದನದಲ್ಲಿ ನಡೆಯುತ್ತಿರತಕ್ಕ ಬರಗಾಲ ಪರಿಸ್ಥಿತಿ ಬಗ್ಗೆ ಈಗಾಗಲೇ ಸಾಕಷ್ಟು ವಿವರವಾಗಿ ಚರ್ಚೆಯಾಗಿದೆ. ನಾನಾದರೂ ಸಹ ಈ ಸಂದರ್ಭದಲ್ಲಿ 3-4 ಸಲಹೆಗಳನ್ನು ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಬರಗಾಲದ ಪರಿಸ್ಥಿತಿಯಲ್ಲಿ ಯಾವುದೇ ಸರ್ಕಾರ ಮೂರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಕುಡಿಯುವ ನೀರಿನ ಸಮಸ್ಯೆ ಬದಣೆ, ಎಂಪ್ಲಾಯ್‌ಮೆಂಟ್ ಜನರೇಷನ್ ಮತ್ತು ಫಾಡರ್. ಇವು ಯಾವುದೇ ಒಂದು ರಿಲೀಫ್ ಪ್ರೋಗ್ರಾಮ್‌ನಲ್ಲಿ ಮಾಡತಕ್ಕಂಥ ಕರ್ತವ್ಯಗಳು ಮತ್ತು ಅವಶ್ಯಕತೆಗಳು. ಈ ಕುಡಿಯುವ ನೀರಿನ ಸಮಸ್ಯೆ ಬಗ್ಗೆ 3-4 ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾಕಷ್ಟು ಚರ್ಚೆ ನಡೆದು, ಅದು ನಾನಾ ರೀತಿಯ ಕಡೆ ಹೋಗಿ, ಒಳ್ಳೆಯ, ಉತ್ತಮವಾದ ಫಲಿತಾಂಶವನ್ನು ನೀಡಿದೆ ಮತ್ತು ತೀವ್ರವಾಗಿ ಸರ್ಕಾರದ ಗಮನ ಸೆಳೆಯುವುದಕ್ಕೆ ಈ ಸದನದ ಎಲ್ಲಾ ಸದಸ್ಯರೂ ಭಾಗಿಗಳಾಗಿದ್ದಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಇವತ್ತು ನಮ್ಮ ಭೈರೇಗೌಡರು ಎತ್ತಿರತಕ್ಕ ಕೆಲವು ವಿಚಾರಗಳಲ್ಲಿ, ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಸರ್ಕಾರದವರು ಸಾಕಷ್ಟು ಹಣವನ್ನು ಖರ್ಚು ಮಾಡುತ್ತಾರೆ. ನನ್ನ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ, ನಮ್ಮ ಸರ್ಕಾರದ ವೆಲ್ ಬೋರಿಂಗ್ ಡಿವಿಜನ್‌ನಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಿಗ್‌ಗಳು ಇಲ್ಲವೆಂದು ಎಲ್ಲರಿಗೂ ತಿಳಿದಿರುವ ವಿಷಯ. ನಾವು ಹೆಚ್ಚು ಹೆಚ್ಚು ಬೋರ್‌ಗಳನ್ನು ಪ್ರೈವೇಟ್ ರಿಗ್‌ಗಳಿಂದಲೇ ಕೊರೆಸುತ್ತಿದ್ದೇವೆ. ಇವರು ನಮ್ಮ ಸರ್ಕಾರದಿಂದ ಡೀಸೆಲ್ ಪಡೆದುಕೊಳ್ಳುತ್ತಿದ್ದಾರೆ. ಪ್ರೈವೇಟ್‌ನವರಿಂದಲೇ ಬೇರೆ ಕಡೆ ಜಮೀನುಗಳಲ್ಲೂ ಬೋರ್‌ಗಳನ್ನು ಹಾಕಿಸತಕ್ಕಂಥ ವಾಡಿಕೆ ಜಾಸ್ತಿಯಾಗಿದೆ. ತಕ್ಷಣ ಸರ್ಕಾರದವರು ಯಾವುದಾದರೊಂದು ರೀತಿಯಲ್ಲಿ ಈ ಪ್ರೈವೇಟ್ ರಿಗ್‌ನವರ ಮೇಲೆ ಕಂಟ್ರೋಲ್ ತರದೇ ಹೋದರೆ, ಕಷ್ಟವಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ, ರಿಲೀಫ್ ಕಾರ್ಯಕ್ರಮದಲ್ಲಿ ಎರಡು ತಿಂಗಳಲ್ಲಿ, ವರ್ಕ್ ಆರ್ಡರ್ ಕೊಟ್ಟಿರುವ ಬೋರ್‌ವೆಲ್‌ಗಳು ಇಲ್ಲಿಯವರೆಗೂ ಇಲ್ಲ.

ಕೆಲವು ಬೋರ್‌ವೆಲ್‌ನವರು ಡ್ರಿಲ್ ಮಾಡಿಲ್ಲ, ಇದಕ್ಕೆ ಕಾರಣ ಕೇಳಿದರೆ, ಬೇರೆ ಕಡೆ ಅಲ್ಲಿ, ಇಲ್ಲಿ ಹೋಗುತ್ತಿದ್ದೇವೆ ಎಂದು ಹೇಳುತ್ತಾರೆ. ಸಾಕಷ್ಟು ಕಡೆ ಪ್ರೈವೇಟ್ ರಿಗ್‌ಗಳು ದೊರೆಯುತ್ತವೆ. ಇವುಗಳನ್ನು ಯಾವುದಾದರೊಂದು

ಹಿಡಿತದಲ್ಲಿಟ್ಟುಕೊಳ್ಳಬೇಕು ಮತ್ತು ಬರಗಾಲ ಕಾರ್ಯಕ್ರಮದಲ್ಲಿ ಪ್ರಿಯಾರಿಟಿ ಮೇಲೆ ಈ ಬೋರ್‌ವೆಲ್ ಕೊರೆಯುವುದಕ್ಕೆ ಅವರ ಮೇಲೆ ಹಿಡಿತ ತರದೇ ಹೋದರೆ, ನಾವು ಎಷ್ಟು ದುಡ್ಡು ಕೊಟ್ಟರೂ ಸಹ ಸಕಾಲದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದು ಕಷ್ಟವಾಗುತ್ತದೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತುಮಕೂರು ಜಿಲ್ಲೆಯ ಬಗ್ಗೆ ಸೀಮಿತವಾಗಿ ಮಾತನಾಡುವುದಾದರೆ, ಈಗಾಗಲೇ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಖರ್ಚು ಮಾಡಿದೆ. ಬಹುಶಃ ಇಲ್ಲಿಯವರೆಗೂ ಮಾಡಿರುವ ಸಮರ್ಥನೆ, ನಿಜವಾದ ಬರಗಾಲದ ಪರಿಸ್ಥಿತಿ ಮಾರ್ಚಿ, ಏಪ್ರಿಲ್, ಮೇ ಎನ್ನುವುದು ಎಲ್ಲಾರಿಗೂ ಅರಿವಾಗಿದೆ.

ಇದನ್ನು ನಾವು ವಾರ್‌ಫುಟಿಂಗ್ ರೀತಿಯಲ್ಲಿ ಮಾಡಬೇಕಾಗುತ್ತದೆ. ನನ್ನ ಅನುಭವದ ಆಧಾರದ ಮೇಲೆ ಮಾತನಾಡುವುದರೆ ನಮ್ಮ ಜಿಲ್ಲೆಯಲ್ಲಿ 145 ಮಂಡಲ್‌ಗಳು ಇವೆ. ಪ್ರತಿ ಮಂಡಲಕ್ಕೆ ಕನಿಷ್ಟ ಐದು ಬೋರ್‌ವೆಲ್ ಆದರೂ ಈ ತಿಂಗಳ ಒಳಗಡೆ ಬೇಕಾದಂಥ ಒಂದು ಪರಿಸ್ಥಿತಿ ಇದೆ. ಇವತ್ತು ನಾವು ಹರಿಜನರ ಉದ್ಧಾರದ ಮಾತನಾಡುತ್ತೇವೆ. ಇವತ್ತು ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಹರಿಜನರು ಬೇರೆ ತೋಟಗಳಿಂದ, ಪಂಪ್‌ಸೆಟ್‌ಗಳಿಂದ ಕುಡಿಯುವ ನೀರನ್ನು ತೆಗೆದುಕೊಂಡು ಬಂದು, ಅದನ್ನು ಕೂಲಿ ಮಾಡುವ ಮೂಲಕ ತೀರಿಸುವ ಪರಿಸ್ಥಿತಿ ಇದೆ. ಇದು ಉತ್ಪ್ರೇಕ್ಷೆಯೇನೂ ಅಲ್ಲ. ಅವರ ದುಸ್ಥಿತಿ ನನ್ನ ಮನಸ್ಸಿಗೆ ಬಂತು. ನಾನು ಹಳ್ಳಿ ಕಡೆ ಹೋದಾಗ ಆ ಊರಿನ ಹರಿಜನ ಕೇರಿಯವರು ಬಂದು, ಹರಿಜನ ಕೇರಿಗೆ ಒಂದೂ ಬೋರ್‌ಇಲ್ಲ, ಬೇರೆ ದೊಡ್ಡ ಶ್ರೀಮಂತರ ತೋಟಗಳಲ್ಲಿ ನೀರು ತಂದು ಅದನ್ನು ಕೂಲಿ ಮಾಡುವುದರ ಮೂಲಕ ತೀರಿಸುತ್ತಿದ್ದೇವೆ ಎಂದು ಹೇಳಿದರು. ನಮಗೆ ಸ್ವಾತಂತ್ರ್ಯ ಬಂದು 44 ವರ್ಷಗಳಾದರೂ ಕುಡಿಯುವ ನೀರಿನ ಸಮಸ್ಯೆ ಯಾವ ಮಟ್ಟದಲ್ಲಿದೆ ಎಂದು ನೋಡಬಹುದಾಗಿದೆ. ಸರಕಾರ ಏನೂ ಮಾಡಿಲ್ಲ ಎಂಬ ಪ್ರಶ್ನೆ ಇಲ್ಲ. ಸರಕಾರ ಸಾಕಷ್ಟು ಮಾಡಿದೆ. ಆದರೆ ಇವತ್ತು ಹೊಸದಾಗಿ ಬೋರ್‌ವೆಲ್ ಹಾಕುವುದು ಒಂದು ಸಮಸ್ಯೆಯಾದರೆ, ಇನ್ನೊಂದು ಪ್ರಮುಖ ಸಮಸ್ಯೆ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದು. ತುಮಕೂರು ಜಿಲ್ಲೆಗೆ 30 ಲಕ್ಷರೂಪಾಯಿಗಳನ್ನು ಮಾನ್ಯ ಕಂದಾಯ ಸಚಿವರು ಬಂದು ರಿವ್ಯೂ ಮಾಡಿದ ಮೇಲೆ ಕೊಟ್ಟರು. ಬಹಳ ಚೆನ್ನಾಗಿ ರಿವ್ಯೂ ಮಾಡಿದರು. ಮ್ಯಾರಥಾನ್ ರಿವ್ಯೂ ಎಂದು ಹೇಳಿದರೆ ತಪ್ಪಾಗಲಾರದು. 5 ಘಂಟೆಗಳ ಕಾಲ ಸತತವಾಗಿ ಮಾಡಿದರು, ಬಹಳ ಫಲಪ್ರದವಾದ ರಿವ್ಯೂ ಆಯಿತು. ಅದರಲ್ಲಿ 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರಲ್ಲಿ, ಅದನ್ನು ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಕೊಡುವುದು ಬೇಡ ಎಂದು ಒಂದು ಅಂಡರ್‌ಸ್ಟ್ಯಾಂಡಿಂಗ್ ಬಂದ ಮೇಲೆ, ಎಲ್ಲಾ ದುಡ್ಡನ್ನೂ ಬೋರ್‌ವೆಲ್‌ಗಳಿಗೆ ಹಾಕಿದ್ದೇವೆ. ಪ್ರತಿ ತಾಲ್ಲೂಕಿಗೆ ಎರಡು ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ ತೆಗೆಯಲು, ಹಾಗೂ ಒಂದು ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ ರಿಪೇರಿಗೆ ಕೊಟ್ಟಿದ್ದೇವೆ. ಆದರೆ ನನ್ನ ದೃಷ್ಟಿಯಲ್ಲಿ, ಪ್ರತಿ ತಾಲ್ಲೂಕಿಗೆ ಬೋರ್‌ವೆಲ್ ರಿಪೇರಿಗೆ ಐದು ಲಕ್ಷರೂಪಾಯಿಗಳನ್ನು ಕೊಟ್ಟರೆ ಬಹಳ ಉತ್ತಮವಾದ ಕೆಲಸ ಮಾಡಿದಹಾಗೆ ಆಗುತ್ತದೆ. ಬೋರ್‌ವೆಲ್‌ಗಳು ಅಲ್ಪಸ್ವಲ್ಪ ಕೆಟ್ಟು ಹೋಗುತ್ತವೆ. ಕೆಟ್ಟು ಹೋಗುವುದಕ್ಕೆ ನಾನಾ ಕಾರಣಗಳು ಇವೆ.

ಬೋರ್‌ವೆಲ್‌ನಲ್ಲಿ ನೀರಿದ್ದರೂ ಸಹ, ಬಹಳ ನೀರು ಬರುವ ಕಡೆ, ಒಳ್ಳೆಯ ಕ್ವಾಲಿಟಿ ಪೈಪ್ ಹಾಕದೇ ಲೀಕ್ ಆಗಿ ಸರಿಯಾಗಿ ನೀರು ಬರುವುದಿಲ್ಲ. ಕೆಲವು ಕಡೆ ಚೈನ್ ಸರಿ ಇರುವುದಿಲ್ಲ. ಕೆಲವು ಕಡೆ ಹ್ಯಾಂಡ್ ಪಂಪ್ ಸರಿ ಇರುವುದಿಲ್ಲ. ಈ ರೀತಿ ನಾನಾ ರೀತಿಯ ಮೇಜರ್ ರಿಪೇರ್ಸ್ ಎನಿಸಿದೆ, ಇದಕ್ಕಾಗಿ ಪ್ರತಿ ತಾಲ್ಲೂಕಿಗೆ ಐದು ಲಕ್ಷ ರೂಪಾಯಿಗಳನ್ನು ರಿಪೇರಿಗೆ ಕೊಟ್ಟರೆ ಸಾಕಷ್ಟು ರೀತಿ

ನಮ್ಮದೂ ಬೋರ್‌ವೆಲ್‌ಗಳನ್ನೂ ನೀರು ಬರತಕ್ಕಂಥ ಸ್ಥಿತಿಗೆ ತರಬಹುದು ಎಂದು ನನ್ನ ಭಾವನೆ. ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಇದುವರೆಗೆ ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಖರ್ಚು ಮಾಡಿಲ್ಲ ಎಂದು ನನ್ನ ಭಾವನೆ. ನಾವೇ ನಮ್ಮ ತುಮಾಕೂರು ಜಿಲ್ಲೆಯಲ್ಲಿ ಇದು ಬೇಡ ಎಂದು ಹೇಳಿದೆವು. ಆದರೆ ಈಗ ಪರಿಸ್ಥಿತಿ ಬಹಳ ಬಿಗಡಾಯಿಸಿರುವುದರಿಂದ ಕನಿಷ್ಟ ಒಂದು ಮಂಡಲ್‌ಪಂಚಾಯತಿಗೆ ಐದು ಲಕ್ಷ ರೂಪಾಯಿಗಳನ್ನಾದರೂ ಎಂಪ್ಲಾಯ್‌ಮೆಂಟ್ ಜನರೇಷನ್‌ಗೆ ಪ್ರತಿ ತಿಂಗಳೂ ಕೊಡಬೇಕಾದ ಪರಿಸ್ಥಿತಿಯನ್ನು ನಾವು ತಲುಪಿದ್ದೇವೆ. ಎಂದು ನಾನು ಭಾವನೆ ಮಾಡಿದ್ದೇನೆ. ಸರಕಾರ ನೀರಾವರಿ ಪಂಪ್‌ಸೆಟ್‌ಗಳ ಎನರ್ಜೈಸೇಷನ್ ಬಗ್ಗೆ ಒಂದು ನಿಲುವು ತೆಗೆದುಕೊಂಡು 40 ಸಾವಿರ ಇದ್ದುದನ್ನು 60 ಸಾವಿರಕ್ಕೆ ಹೆಚ್ಚಿಸಿ, ಸಾಕಷ್ಟು ಪ್ರಮಾಣದಲ್ಲಿ ಎನರ್ಜೈಸ್ ಮಾಡಿರುವುದರಿಂದ, ರಿಲೀಫ್ ಕಾಮಗಾರಿಯಲ್ಲಿ ಇದೂ ಒಂದು ರೀತಿಯ ಸಹಾಯ ಮಾಡಿದೆ ಎಂದು ನನ್ನ ಭಾವನೆ. ಈಗ ನಾನು ಸರಕಾರಕ್ಕೆ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾರ್ಚ್ ಏಪ್ರಿಲ್ ಬರುತ್ತಿದ್ದ ಹಾಗೆ ಟ್ರಾನ್ಸ್ ಫರ್ ಬಗ್ಗೆ ಅಧಿಕಾರಿಗಳ ಕಾಟ ಪ್ರಾರಂಭವಾಗಿದೆ. ಎಲ್ಲಾ ಶಾಸಕರಿಗೂ ಬಂದಿರತಕ್ಕಂಥ ಸಾಮಾನ್ಯವಾದ ಪರಿಸ್ಥಿತಿ ಇದು. ಒಂದು ಸಣ್ಣ ಉದಾಹರಣೆ ಕೊಡಬೇಕೆಂದರೆ, ಮಧುಗಿರಿಯಲ್ಲಿದ್ದ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್‌ರವರನ್ನು ಜಿಲ್ಲಾ ಪರಿಷತ್‌ನವರು ಟ್ರಾನ್ಸ್‌ಫರ್ ಮಾಡಿದರು. ಆ ಸ್ಥಳಕ್ಕೆ ಬೇರೆಯವರನ್ನು ಹಾಕಿಲ್ಲ. ಮೊನ್ನೆ ಅಲ್ಲಿ ಹೋದಂಥ ಕಾಲದಲ್ಲಿ 20 ಬೋರ್‌ವೆಲ್‌ಗಳ ಬಗ್ಗೆ ಚರ್ಚೆ ಮಾಡಿ, 10 ಬೋರ್‌ವೆಲ್ ಪಾಯಿಂಟ್‌ಗಳನ್ನು ಅಲ್ಲಿನ ಎ.ಸಿ.ಯವರು, ನಾವು, ನಮ್ಮ ಶಾಸಕಮಿತ್ರರಾದ ಡಾ. ಪರಮೇಶ್ವರ ಅವರು ಎಲ್ಲಾ ಕುಳಿತುಕೊಂಡು ವಿವರ ಕೊಟ್ಟೆವು. ಮಧುಗಿರಿ ಹೋಬಳಿ ನನಗೆ ಅರ್ಧ ನಮ್ಮ ಪರಮೇಶ್ವರ ಅವರಿಗೆ ಅರ್ಧ ಬರುವುದರಿಂದ ನಾವು ಸೇರಿದ್ದೇವು. ಆದರೆ ಅಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಎಂಜಿನಿಯರ್ ಪೋಸ್ಟ್ ಖಾಲಿ ಇರುವುದರಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸಗಳು ಆಗುತ್ತಿಲ್ಲ. ನನ್ನ ಒಂದು ಸಲಹೆ ಏನೆಂದರೆ ಯಾರು ಯಾರು ಅಧಿಕಾರಿಗಳು ಈ ರಿಲೀಫ್ ಕಾಮಗಾರಿಗಳಲ್ಲಿ ಇನ್‌ವಾಲ್ವ್ ಆಗಿರುತ್ತಾರೋ, ಅವರನ್ನು ಕನಿಷ್ಟ ಪಕ್ಷ ಆ ಕಾಮಗಾರಿ ಮುಗಿಯುವವರೆಗಾದರೂ ಟ್ರಾನ್ಸ್‌ಫರ್ ಮಾಡುವುದಿಲ್ಲ ಎಂದು ಸ್ಪಷ್ಟವಾದ ನಿಲುವನ್ನು ಸರಕಾರ ತೆಗೆದುಕೊಳ್ಳಬೇಕು. ಈ ರೀತಿ ತೆಗೆದುಕೊಂಡರೆ ಅಧಿಕಾರಿಗಳು ಬರಗಾಲ ಕಾಮಗಾರಿಗಳಲ್ಲಿ ತೊಡಗುವುದಕ್ಕೆ, ಇನ್‌ವಾಲ್ವ್ ಆಗುವುದಕ್ಕೆ ಅವಕಾಶವಾಗುತ್ತದೆ. ಏತಕ್ಕೆಂದರೆ ಕೆಲವರು ಹೇಳುವ ಹಾಗೆ ಅಧಿಕಾರಿಗಳು ಒಳ್ಳೊಳ್ಳೆಯ ಜಾಗಗಳನ್ನು ಹುಡುಕುತ್ತಾರೆ. ಅದನ್ನು ಬಾಯಿಬಿಟ್ಟು ಹೇಳಬೇಕಾದ ಪರಿಸ್ಥಿತಿ ಇಲ್ಲ.

ಒಳ್ಳೊಳ್ಳೆಯ ಅಧಿಕಾರಿಗಳೂ ಸಹ ಇರುತ್ತಾರೆ. ಅಯಾ ಅಧಿಕಾರಿಗಳು ಅಲ್ಲಲ್ಲೇ ಇರಿಸಿದರೆ, ಬರಗಾಲ ಕಾಮಕಾರಿಗಳ ಎಫೆಕ್ಟೀವ್ ಇಂಪ್ಲಿಮೆಂಟೇಷನ್ ಹಾಗೂ ಪ್ರಾಪರ್ ಮಾನೀಟರಿಂಗ್‌ಗೆ ಗೈಡೆನ್ಸ್‌ಗೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಕಷ್ಟವಾಗುತ್ತದೆ. ಬರಗಾಲ ಪರಿಸ್ಥಿತಿ ಈಗಷ್ಟೇ ಪ್ರಾರಂಭವಾಗಿದೆ. ಇನ್ನು 15 ದಿವಸಗಳು ಹೋದರೆ ಬರಗಾಲಕ್ಕೆ ಸಿಕ್ಕಿದ ಜನಗಳ ಕಷ್ಟ ದೇವರಿಗೇ ಪ್ರೀತಿಯಾಗುತ್ತದೆ. ಅಧಿಕಾರಿಗಳು ತಮ್ಮ ಅನುಕೂಲದ ಉದ್ದೇಶದಿಂದ ತಮ್ಮ ಮೇಲೆ ನಮ್ಮನ್ನು ಇಟ್ಟುಕೊಳ್ಳುವುದು, ನಾವು ಬಂದು ಮಂತ್ರಿಗಳಿಗೆ ಹೇಳುವುದು ಒಂದು ವಾಡಿಕೆಯಾಗಿದೆ. ಇದು ತಪ್ಪಿದರೆ ಒಂದು ರೀತಿ ನಾವು ಹೆಚ್ಚಿನ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ, ಮತ್ತು ಸರಕಾರ ಇದರ ಬಗ್ಗೆ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಫಾಡರ್ ಬ್ಯಾಂಕ್, ಗೋಶಾಲೆ ಇವೆಲ್ಲಾ ಸಾಮಾನ್ಯವಾಗಿ ರಿಲೀಫ್ ಕಾಮಗಾರಿಯಲ್ಲಿ ತೆಗೆದುಕೊಳ್ಳತಕ್ಕದ್ದೇ ಆಗಿದೆ.

ಇದರಲ್ಲಿ ನಾವು ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳ ಮೇಲೆ ಹೆಚ್ಚು ಹೊರಿಸಬೇಕಾಗುತ್ತದೆ. ಇಲ್ಲಿ ಪ್ರಾಪರ್ ಕೋ ಆರ್ಡಿನೇಶನ್ ಇರುವುದು ಅಗತ್ಯವೆಂದು ಕಾಣುತ್ತದೆ. ಇಲ್ಲಿ ನಾವು ಆಡಳಿತಾತ್ಮಕವಾದಂತಹ ಗೊಂದಲಗಳನ್ನು ನೋಡುತ್ತಿದ್ದೇವೆ. ನಮ್ಮ ಈ ಒಂದು ವ್ಯವಸ್ಥೆ ಪ್ರಕಾರ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡುತ್ತಾರೆ. ಅದು ಎ.ಸಿ. ಯವರಿಗೆ ಹೋಗುತ್ತದೆ. ತಹಶೀಲ್ದಾರ್‌ರವರು ಚೆಕ್ ಕೊಡುತ್ತಾರೆ. ಅದನ್ನು ಜಿಲ್ಲಾಪರಿಷತ್ತಿನ ಅಸಿಸ್ಟೆಂಟ್ ಇಂಜನೀಯರ್ಸ್ ಎಗ್ಜಿಕ್ಯೂಟೀವ್ ಇಂಜನೀಯರ್ಸ್ ಮಾನಿಟರ್ ಮಾಡಬೇಕು ಸೂಪರ್‌ವೈಜ್ ಮಾಡಿ ಸಿ.ಆರ್. ಕಂಪ್ಲೀಶನ್ ರಿಪೋರ್ಟ್ ಕೊಡಬೇಕಾಗುತ್ತದೆ. ಅದು ಎಷ್ಟರಮಟ್ಟಿಗೆ ಇವತ್ತು ಎಫೆಕ್ಟೀವ್ ಆಗಿ ಆಗುತ್ತಿದೆ ಎನ್ನುವುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಪಸ್ವಲ್ಪ ಕೋ ಆರ್ಡಿನೇಶನ್ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ. ಮತ್ತು ಎಲ್ಲಿ ಹೆಚ್ಚು ಬರಗಾಲ ಇದೆ ಅಲ್ಲಿ ಇವನ್ನು ಇನ್‌ವಾಲ್ವ್ ಮಾಡಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ ಮಂಡಲ ಪಂಚಾಯಿತಿ ಪ್ರಧನರನ್ನು ಇದರಲ್ಲಿ ಇನ್‌ವಾಲ್ವ್ ಮಾಡಬೇಕೆನ್ನುವುದು ಬಹಳ ಮುಖ್ಯವಾದುದು ಎಂದು ಹೇಳಿದರೆ ಅದು ತ-ಗಲಾರದು. ನಾನು ಶಾಸಕನಾಗಿ ಬೆಳ್ಳಾವಿ ಕ್ಷೇತ್ರವನ್ನು ಪ್ರತಿನಿಧಿಸುತ್ತೇನೆ. ಅಲ್ಲಿ ಸುಮಾರು 500 ಹಳ್ಳಿಗಳು ಬರುತ್ತವೆ. ನಾಲ್ಕು ತಾಲ್ಲೂಕುಗಳು ಬರುತ್ತವೆ. ಅಲ್ಲಿ ಬರಗಾಲ ಇದೆ ಎನ್ನುವುದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲಿ ಯಾವ ಸಮಸ್ಯೆ ಇದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಬಹುಶಃ ಅದು ನಮ್ಮ ಶಕ್ತಿಗೆ ಮೀರಿದ್ದುದು. ನಾನು ಒಂದು ಉದಾಹರಣೆ ಹೇಳುವುದಾದರೆ ಒಂದು ತಾಲ್ಲೂಕಿಗೆ 5 ಬೋರ್‌ವೆಲ್ ಬಂದಿವೆ ಎಂದರೆ ನಮ್ಮ ಪ್ರಕಾರ ಯಾವ ತಾಲ್ಲೂಕಿಗೆ ಎಲ್ಲಿಗೆ ಬೋರ್‌ವೆಲ್ ಕೊಡಬೇಕೆನ್ನುವುದು ತಕ್ಷಣ ನಮಗೆ ಪ್ಲಾಷ್ ಆಗುವುದು ಕಷ್ಟವಾಗುತ್ತದೆ. ಮೊನ್ನೆ ನಾವು ಗುಬ್ಬಿ ತಾಲ್ಲೂಕಿನಲ್ಲಿ ಶಿವನಂಜಪ್ಪನವರು ನಾವು ಎಲ್ಲರೂ ಮಂಡಲ ಪಂಚಾಯಿತಿ ಪ್ರಧಾನರನ್ನು ಕರೆಯಿಸಿದ್ದೆವು. ವಿಲೇಜ್ ಅಕೌಂಟೆಂಟ್ಸ್‌ನ್ನು ಕರೆಯಿಸಿದ್ದೆವು. ಮಂಡಲ ಪಂಚಾಯಿತಿ ಸೆಕ್ರೆಟರಿಗಳನ್ನು ಕರೆಯಿಸಿದ್ದೆವು. ರೆವಿನ್ಯೂ ಇನ್ಸ್‌ಪೆಕ್ಟರ್ಸ್‌ನ್ನು ಕರೆಯಿದ್ದೆವು. ಕೆಳ ಹಂತದ ಅಧಿಕಾರಿಗಳನ್ನು ಇದರಲ್ಲಿ ಹೆಚ್ಚು ಇನ್‌ವಾಲ್ವ್ ಮಾಡಬೇಕಾಗುತ್ತದೆ.

ಒಂದು ವಾಡಿಕೆ ಬೋರ್‌ವೆಲ್ ಬಂದ ತಕ್ಷಣ ಸ್ವಾಮಿ ನಮ್ಮಲ್ಲಿ ನೀರು ಇಲ್ಲ ಎಂದು ಹೇಳಿಬಿಡುತ್ತಾರೆ. ಅದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಇಂಜನೀಯರ್ಸ್‌ಗೂ ಸಾಮಾನ್ಯವಾಗಿ ಗೊತ್ತಿರುವುದಿಲ್ಲ. ನಮಗೂ ಗೊತ್ತಿರುವುದಿಲ್ಲ. ಸಾಮಾನ್ಯವಾಗಿ ಕೆಳ ಹಂತದ ಅಧಿಕಾರಿಗಳಾದ ಮಂಡಲ ಪಂಚಾಯಿತಿ ಪ್ರಧಾನರು ಇತರರನ್ನು ಅಲ್ಲಿ ಇನ್‌ವಾಲ್ವ್ ಮಾಡುವುದರಿಂದ ನಮಗೆ ಸ್ಪಷ್ಟವಾದ ಒಂದು ಚಿತ್ರ ದೊರೆಯುತ್ತದೆ. ಎಲ್ಲಿ ನೀರಿನ ಅವಶ್ಯಕತೆ ಇರುತ್ತದೆಯೋ ಎಲ್ಲಿ ಎಂಪ್ಲಾಯಮೆಂಟ್ ಕಾಮಗಾರಿ ಅವಶ್ಯಕತೆ ಇರುತ್ತದೆಯೋ ಅಲ್ಲಿಗೆ ಹಣ ಕೊಟ್ಟರೆ ಅನುಕೂಲವಾಗುತ್ತದೆ. ಇಷ್ಟು ಸಲಹೆಗಳನ್ನು ನಾನು ಸರ್ಕಾರಕ್ಕೆ ಕೊಟ್ಟು ಕೆಲವು ನಿಮಿಷಗಳ ಹಿಂದೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಡೆದಂತಹ ಚರ್ಚೆ ಕಾರ್ಯರೂಪಕ್ಕೆ ಬಂದರೆ ಕರ್ನಾಟಕ ರಾಜ್ಯದ ಜನರ ನೀರಿನ ಭವಣೆ ನೀಗಿ ಅವರಿಗೆ ಸಮಾಧಾನವಾಗುತ್ತದೆ. ಆ ರೀತಿಯಲ್ಲಿ ಕೆಲಸ ಮಾಡುವುದು ಈ ಸದನದ ಎಲ್ಲಾ ಸದಸ್ಯರ ಹಾಗೂ ಸರ್ಕಾರದ ಜವಾಬ್ದಾರಿ ಆದ್ದರಿಂದ ಈ ಬಗ್ಗೆ ಬಹಳ ಸೀರಿಯಸ್ ಆಗಿ ಪರಿಗಣಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಬೇಕು. ನಿಮ್ಮ ಮಾತಿನಲ್ಲಿ ನಾನು ಹೇಳುವುದಾದರೆ ಇದು ಬಹಳ ಗಾಬರಿ ಪಡತಕ್ಕಂಥ ವಿಚಾರ ಎಂದು ತಾವೇ ಹೇಳಿದ್ದೀರಿ. ತಾವು ಬಹಳ ಅಪ್ರಪ್ರಿಯೋಟ್ ಆಗಿ ಈ ಮಾತನ್ನು ಹೇಳಿದ್ದೀರಿ. ನಾನು ಮಾತನಾಡುವುದು ಬಹಳ ಗಾಬರಿಯಿಂದ ಅದು ಮೊದಲಿನಿಂದಲೂ ತಮಗೆಲ್ಲರಿಗೂ ಗೊತ್ತಿದೆ. ಜನರ ಮನಸ್ಸಿನಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಬೇಕು. ಹಿರಿಯ ಗೌರವಾನ್ವಿತ ಸದಸ್ಯರಾದ ಶ್ರೀ ಹುಚ್ಚಮಾಸ್ತೀಗೌಡರು ಬಹಳ ಚೆನ್ನಾಗಿ ಹೇಳಿದರು.

ಇವತ್ತು ಹರಿಜನರು ಬೇರೆಯವರ ಜಮೀನಿಗೆ ಹೋಗಿ ನೀರನ್ನು ತಂದು ಕೂಲಿ ಮಾಡಿ ಜೀವನ ಮಾಡುತ್ತಿದ್ದಾರೆಂದರೆ ಅವರ ಮಟ್ಟ ಅವರ ಸಮಸ್ಯೆ ಹೇಗಿದೆ ಎನ್ನುವುದು ಅರ್ಥವಾಗುತ್ತದೆ. ಇದನ್ನು ತಾವೆ ಯೋಚನೆ ಮಾಡಿ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ನಾನು ಕೂಡ ಹೆಚ್ಚು ಮಾತನಾಡುವುದಿಲ್ಲ. ಅದಕ್ಕೆ ಕಾರಣ ಇಷ್ಟೇ. ಮಾತನಾಡುವುದರಿಂದ ಏನಾದರೂ ಪ್ರಯೋಜನವಾಗುತ್ತದೆ ಎನ್ನುವ ವಿಶ್ವಾಸ ನನಗೆ ದಿನೇ ದಿನೇ ಕಡಿಮೆಯಾಗುತ್ತಿರುವುದರಿಂದ ನಾನು ಇವತ್ತು ಕಡಿಮೆ ಮಾತನಾಡಬೇಕೆಂದು ತೀರ್ಮಾನ ಮಾಡಿದ್ದೇನೆ. ಹೋದ ಅಧಿವೇಶನದಲ್ಲಿಯೂ ಸಹ ನಾವು ಬರಗಾಲದ ಬಗ್ಗೆ ಮಾತನಾಡಿದ್ದೇವೆ. ಈ ಅಧೀವೇಶನದಲ್ಲಿ ಸಹ ಮಾತನಾಡುತ್ತಿದ್ದೇವೆ. ಇದು ಒಂದು ರೀತಿಯಲ್ಲಿ ವಾರ್ಷಿಕ ಸಮಾರಂಭದ ರೀತಿಯಲ್ಲಿ ನಡೆಯುತ್ತಿದೆ. ಅದಕ್ಕೆ ಕಾರಣ ಇಷ್ಟೇ...

ಡಾ. ಎನ್.ಬಿ. ನಂಜಪ್ಪ: ಓ....

Prof. M. D. Nanjunda Swamy : Hon. Member is innocent. At least now try to be bit serious since you have become a Legislator.

ಮಾನ್ಯ ಅಧ್ಯಕ್ಷರೇ ಅದಕ್ಕೆ ಮೂಲ ಕಾರಣ ಇಷ್ಟೇ. ಬರಗಾಲದ ಬಗ್ಗೆ ನಮ್ಮ ಗ್ರಹಿಕೆಯಲ್ಲಿ ದೋಷವಿರುವುದರಿಂದ ಬರಗಾಲ ಸಮಸ್ಯೆ ಬರೀ ಗ್ರಾಮಾಂತರ ಪ್ರದೇಶ ಸಮಸ್ಯೆಯ ದೃಷ್ಟಿಕೋನ ಇಟ್ಟುಕೊಂಡಿದ್ದೇವೆ ನಾವು. ಇದು ಒಟ್ಟಾರೆ ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ಸಮಸ್ಯೆ ಎನ್ನುವುದು ಗಮನಿಸಿ ನಾವು ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿಲ್ಲ.

ನಗರವನ್ನು ಪ್ರತ್ಯೇಕವಾಗಿಟ್ಟು ಬರೀ ಗ್ರಾಮಾಂತರ ಪ್ರದೇಶಕ್ಕೆ ನೀವು ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ಮಾತ್ರ ನಾವು ಮಾತನಾಡುತ್ತಿದ್ದೇವೆ. ಈ ಒಂದು ದೋಷದಿಂದಲೇ ಎಲ್ಲಾ ದೋಷಗಳು ಇವೆ ಎಂದು ನಮ್ಮ ಕಂದಾಯ ಮಂತ್ರಿಗಳು ಇವತ್ತು ಕೊಟ್ಟಿರತಕ್ಕಂಥ ವರದಿಯಲ್ಲಿ ಕಂಡು ಬರುತ್ತಿರುವುದು. ಕಂದಾಯ ಮಂತ್ರಿಗಳು ವರದಿಯಲ್ಲಿ ಹೇಳುತ್ತದೆ. ಸಪ್ಟಂಬರ್ ಕೊನೆಯ ಭಾಗದಲ್ಲಿ ನಮ್ಮ ರಾಜ್ಯದ ಸುಮಾರು 100 ತಾಲ್ಲೂಕುಗಳಲ್ಲಿ ಬರ ಪೀಡಿತವೆಂದು ಗುರುತಿಸಲಾಯಿತು. ಮತ್ತೆ ಈ ಬರ ಪರಿಹಾರ ಕಾರ್ಯಕ್ರಮ ಜನವರಿ ಕೊನೆಯವರೆಗೆ ಎಂದು ಹೇಳಿ ಈ ಅಂಕಿ ಅಂಶವನ್ನು ಕೊಟ್ಟಿದ್ದಾರೆ. ಈ ಹಿಂದೆ ಮಾತನಾಡಿದಂಥ ಹಲವಾರು ಸದಸ್ಯರು ಬಹಳ ಕಷ್ಟಪಟ್ಟು ಮಾತನಾಡಿದರು. ಎಷ್ಟು ಕಾಮಗಾರಿ, ಎಷ್ಟು ಉದ್ಯೋಗ ಸೃಷ್ಟಿ ಮಾಡಿದ್ದಾರೆ ಎನ್ನುವುದನ್ನು ಲೆಕ್ಕ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಕೆಲವರು. ಜನವರಿ ತಿಂಗಳ ಅಂತ್ಯದವರೆಗೆ ನಮ್ಮ ಕಂದಾಯ ಮಂತ್ರಿಗಳು ವರದಿ ಪ್ರಕಾರ 23.73 ಲಕ್ಷ ಮಾನವಿ ದಿನಗಳ ಕಾಮಗಾರಿ ನಡೆದಿದೆ. ಬಹಳ ಜಾಣತನದ ಅಂಕಿ ಅಂಶ ಇದು. I would calculate it in a different way. It has given 23 days employment to one lakh adults.

ಒಂದು ಲಕ್ಷ ವಯಸ್ಕರಿಗೆ 23 ದಿವಸ ಉದ್ಯೋಗ ಕೊಟ್ಟಿದೆ. ಅದೇ ಇವರು ಹೇಳಿರುವ ಅವಧಿಯ 120 ದಿವಸಕ್ಕೆ ಸುಮಾರು 16 ಸಾವಿರ ಅಡಲಟ್ಸ್‌ಗೆ ಉದ್ಯೋಗ ಕೊಟ್ಟಿದೆ. ಇವರು ಹೇಳಿದ 100 ತಾಲ್ಲೂಕು ಲೆಕ್ಕ ಹಾಕಿದರೆ 120 ದಿವಸ ಬರಗಾಲದ ಅವಧಿಯಲ್ಲಿ 160 ರಿಂದ 170 ವಯಸ್ಕರಿಗೆ ಉದ್ಯೋಗ ಸೃಷ್ಟಿ ಮಾಡಿದೆ ಇವರ ಕಾರ್ಯಕ್ರಮದಿಂದ. ಇಲ್ಲಿ ಬಂದಿರುವ ಎಲ್ಲಾ ಮಾನ್ಯ ಶಾಸಕರಿಗೂ ಬರ ಪರಿಹಾರ ಕಾಮಗಾರಿ ಕಣ್ಣಿಗೆ ಕಾಣದೆ ಇರುವುದಕ್ಕೆ ಕಾರಣ ಇಷ್ಟೇ, ಒಬ್ಬರಿಗೂ ಕಣ್ಣಿಲ್ಲ. ಕಣ್ಣು ಇದೆಯೇ? ಕಾಮಗಾರಿ ನಡೆಯುತ್ತಿದೆಯೇ? ನಾನು ಅಧಿಕೃತ ವರದಿ

ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಮತ್ತೆ ಕುಡಿಯುವ ನೀರಿನ ಬಗ್ಗೆ ಬಹಳ ಮಾತನಾಡುತ್ತಲೇ ಇದ್ದೇವೆ ವರ್ಷ ವರ್ಷ. ಈ ದೇಶದ ದುರಾದೃಷ್ಟ ಇಂಥ ಸರ್ಕಾರಗಳ ಕೈಕೆಳಗೆ ನರಳಬೇಕಾಗಿರುವುದು. ಶೇಕಡ 75 ಭಾಗ ಜನ ನಾವು ಇನ್ನೂ ಕೃಷಿ ಕ್ಷೇತ್ರದಲ್ಲೇ ಇದ್ದೇವೆ; ಗ್ರಾಮಾಂತರ ಪ್ರದೇಶದಲ್ಲಿ ಇದ್ದೇವೆ.

ತಲಾ ಪ್ರತಿ ನೀರಿಗಾಗಿ ಈ ಸರ್ಕಾರಗಳು ಎಷ್ಟು ಬಂಡವಾಳ ಗ್ರಾಮಾಂತರ ಪ್ರದೇಶದಲ್ಲಿ ಹೂಡಿವೆ ಎನ್ನುವ ಲೆಕ್ಕವನ್ನು ತೆಗೆದು ಹೇಳಬೇಕು ನೀವು. ಅದೇ ತಲಾ ಪ್ರತಿ ನೀರಿಗಾಗಿ ಬಂಡವಾಳ ಹೂಡಿಕೆಯನ್ನು ನಗರ ಪ್ರದೇಶದಲ್ಲಿ ಎಷ್ಟಾಗಿದೆ ಎಂದು ಲೆಕ್ಕ ಹಾಕಿ ಹೇಳಬೇಕು. ಕುಡಿಯುವ ನೀರಿಗೆ, ಜಾನುವಾರುಗಳಿಗೆ ಮೇವು, ಉದ್ಯೋಗವಕಾಶ, ವಿಶೇಷ ಪ್ರೋತ್ಸಾಹಕಾಂಶ. ಹಾಗಂದರೆ ಏನು? ನನಗೆ ಗೊತ್ತಾಗುವುದಿಲ್ಲ. ಅದು ನನ್ನ ಕಣ್ಣಿಗೆ ಬಿದ್ದಿಲ್ಲ. ಇವೆಲ್ಲಾ ಸೇರಿ 33 ಕೋಟಿ ರೂಪಾಯಿ. ಇದು ಬರ ಪರಿಹಾರದ ಕಾರ್ಯಕ್ರಮ; ಇದೇ ಈ ವರ್ಷದ ನಿಮ್ಮ ಕಾರ್ಯಕ್ರಮ. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಕಾವೇರಿ 4ನೇ ಹಂತದ ಯೋಜನೆಗೆ ಆಲೋಚನೆ ಮಾಡುತ್ತಿದ್ದಾರೆ. 3ನೇ ಹಂತಕ್ಕೆ 3 ನೂರು ಕೋಟಿ ರೂಪಾಯಿ, 4ನೇ ಹಂತಕ್ಕೆ 4ನೂರು ಕೋಟಿ ರೂಪಾಯಿ, 2000 ಇಸವಿ ತಲುಪುವವರೆಗೆ ಆ ನೀರೂ ಸಾಲುವುದಿಲ್ಲ. 5ನೇ ಹಂತದ ಯೋಜನೆಗೆ ಮತ್ತೆ 5ನೂರು ಕೋಟಿ ರೂಪಾಯಿಗಳು.

ಇದೇ ರೀತಿಯಾಗಿ ಯೋಜನೆ ಹಾಕಿ ಬರಗಾಲವನ್ನು ಪ್ರತಿ ವರ್ಷ ಖಾಯಂ ಆಗಿ ಚರ್ಚೆ ಮಾಡೋಣವೋ ಅಥವಾ ಬರಗಾಲದ ಸಮಸ್ಯೆ ಇಡೀ ರಾಜ್ಯದ ಆರ್ಥಿಕ ವ್ಯವಸ್ಥೆಯ ಒಂದು ಅವಿಚ್ಛನ್ನವಾದ ಭಾಗವೆಂದು ತಿಳುವಳಿಕೆ ಪಟ್ಟು ಒಟ್ಟಾರೆ ಆರ್ಥಿಕ ಯೋಜನೆಗಳನ್ನು ಬದಲಾವಣೆ ಮಾಡುವ ಬಗ್ಗೆ ಆಲೋಚನೆ ಮಾಡಬೇಕೋ? ಇದನ್ನು ಈ ಸರ್ಕಾರ ಆಲೋಚನೆ ಮಾಡಬೇಕು. ಆ ಕಾರಣಕ್ಕಾಗಿ ನಾನು ಹೇಳಿದ್ದುದು. ಬರೀ ಕಂದಾಯ ಮಂತ್ರಿಗಳು ಇಲ್ಲಿ ಕುಳಿತರೆ ಸಾಲದು ಎಂದು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಖಾತೆಯನ್ನು ಇಟ್ಟುಕೊಂಡಿರುವವರು ಇಲ್ಲಿ ಹಾಜರು ಇರಬೇಕು. ವಿದ್ಯುಚ್ಛಕ್ತಿ ಅವರ ಕೈಯಲ್ಲಿ ಇದೆ, ಕೈಗಾರಿಕೆ ಅವರ ಕೈಯಲ್ಲಿದೆ. ಇನ್ನೂ ಎಷ್ಟೋ ಖಾತೆಗಳು ಅವರ ಕೈಯಲ್ಲಿ ಇದೆಯೋ ಗೊತ್ತಿಲ್ಲ. ನನಗೆ ನೆನಪು ಆಗುವುದಿಲ್ಲ. ಫೈನಾನ್ಸ್ ಇದೆ, ನೀರಾವರಿ ಇದೆ. ಸಹಕಾರ ಮಂತ್ರಿಗಳು ಇರಬೇಕು. ಸಣ್ಣ ಕೈಗಾರಿಕಾ ಮಂತ್ರಿಗಳು ಇರಬೇಕು. ಎಲ್ಲಾರೂ ಒಟ್ಟಿಗೆ ಆಲೋಚನೆ ಮಾಡಿದರೆ ನಾವು ಮುಂದಿನ ವರ್ಷ ಬರಗಾಲ ಪರಿಹಾರದ ಬಗ್ಗೆ ಮಾತನಾಡುವ ಅವಶ್ಯಕತೆ ಬರುವುದಿಲ್ಲ. ಇದಕ್ಕೆ ನಾವು ಒಟ್ಟಾರೆ ನಗರವನ್ನು ಪ್ರತ್ಯೇಕವಾಗಿ ಇಟ್ಟು ಬರಗಾಲದ ಬಗ್ಗೆ ಚರ್ಚೆ ಮಾಡಿದರೆ ಈ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯ ಇದೆ. ಅದನ್ನು ಗಮನದಲ್ಲಿಟ್ಟು ಕೊಂಡು ನಾವು ಯೋಜನೆ ಮಾಡಿದರೆ ನಾವು ಬರಗಾಲವನ್ನು ಪರಿಹಾರ ಮಾಡಬಹುದು. ಇದು ನನ್ನ ಮೊದಲನೆಯ ಸಲಹೆ ಈ ಸರ್ಕಾರಕ್ಕೆ.

ನಾನು ಉದಾಹರಣೆಗೆ ಕಾವೇರಿ ನಾಲ್ಕನೇ ಹಂತದ ಯೋಜನೆ ಬಗ್ಗೆ ಹೇಳಿದೆ ಅಷ್ಟೇ. ಅದು ಒಂದೇ ಒಂದು ಸೌಲಭ್ಯ ತಾವು ಬೆಂಗಳೂರಿಗೆ ಯೋಜನೆ ಮಾಡಿರುವುದು ಬರೀ ಕನಿಷ್ಠ ಸೌಲಭ್ಯಗಳನ್ನು ನೀವು ಬೆಂಗಳೂರು ನಗರಕ್ಕೆ ಕೊಡಬೇಕಾದರೂ ಸಹ ಎಷ್ಟೋ ಸಾವಿರ ಕೋಟಿ ರೂಪಾಯಿಗಳು ಬೇಕು ಎನ್ನುವುದು ಗೊತ್ತಿದೆ ನಮಗೆ. ನೀವು ಮೆಟ್ರೋ ಬಗ್ಗೆ ಮಾತನಾಡುತ್ತಿದ್ದೀರಿ. ಹಳ್ಳಿಯಲ್ಲಿ ನಾವು ಟಾಪ್ ಮೇಲೆ ಓಡಾಡುತ್ತಿದ್ದೇವೆ. ಇಲ್ಲಿ ಮೆಟ್ರೋ ಮಾಡುವುದಕ್ಕೆ 1600 ಕೋಟಿ ರೂಪಾಯಿಗಳ ಬಗ್ಗೆ ಮಾತನಾಡುತ್ತೀರಿ. ಎಲ್ಲಿಯವರೆಗೆ ನೀವು ಬೆಂಗಳೂರು ನಗರದ ಬೆಳವಣಿಗೆಯನ್ನು ನಿಲ್ಲಿಸುವುದಿಲ್ಲ, ಅಲ್ಲಿಯವರೆಗೆ ಕರ್ನಾಟಕದಲ್ಲಿ ಬರಗಾಲ ನಿಲ್ಲುವುದಿಲ್ಲ.

ಇದನ್ನು ನೀವು ಬರೆದು ಇಟ್ಟುಕೊಳ್ಳಿ. ಈ ಕೂಡಲೇ ಆಗಬೇಕಾಗಿರುವುದು ಬೆಂಗಳೂರು ನಗರದ ಬೆಳವಣಿಗೆಗೆ ಒಂದು ಪೂರ್ಣ ವಿರಾಮ. ಪೂರ್ಣ ವಿರಾಮವನ್ನು

ಹಾಕಬೇಕಾಗಿದೆ. ಇಲ್ಲದಿದ್ದರೆ ಇನ್ನು 10 ವರ್ಷದ ಒಳಗಾಗಿ ಇಡೀ ರಾಜ್ಯದ ಸಂಪತ್ತನ್ನು ನಾವು ಇಲ್ಲಿ ವಾಸ ಮಾಡುವ ಜನಗಳ ಕನಿಷ್ಠ ಸೌಲಭ್ಯಕ್ಕೋಸ್ಕರವಾಗಿ ಖರ್ಚು ಮಾಡುವಂತಹ ಒಂದು ದುಸ್ಥಿತಿಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ; ಮೊದಲು ಬೆಂಗಳೂರು ನಗರದ ಅಭಿವೃದ್ಧಿ ಮಂಡಲಿಯೆಂದು ಏನು ಹೇಳುತ್ತೀರಿ; ಬಿಡಿಎ ಎಂದು. ಅದು ಮೊದಲು ರದ್ದು ಆಗಬೇಕು. ಅದು ರದ್ದು ಆಗದೇ ಕರ್ನಟಕ ರಾಜ್ಯದಲ್ಲಿ ಬರ ಪರಿಹಾರ ಸಾಧ್ಯ ಇಲ್ಲ. ನಿಮ್ಮ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು ವರ್ಗಾಣವಣೆ ಮಾಡುವುದಕ್ಕೆ ಸಾಧ್ಯ ಇಲ್ಲ. ಮತ್ತೆ ಬೆಂಗಳೂರು ನಗರಕ್ಕೆ ಈಗಾಗಲೇ ಎಷ್ಟು ನೀರನ್ನು ಸರಬರಾಜು ಮಾಡುತ್ತಿದ್ದೀರಿ, ಅದೇ ಪ್ರಮಾಣದ ನೀರನ್ನು ಸರಬರಾಜು ಮಾಡಬೇಕಾದರೆ ಸುಮಾರು 3-4 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ಕಾರಣ ಮೊದಲು ಬೆಂಗಳೂರು ನಗರದ ಬೆಳವಣಿಗೆಯನ್ನು ನಿಲ್ಲಿಸಬೇಕು ಮತ್ತು ನೀರಿನ ಸಮಸ್ಯೆ ಬಗ್ಗೆ ನಗರದಲ್ಲಿ ಏನು ಮಾಡುತ್ತಾರೆ ಎಂದು ಬೇರೆ ದೇಶಗಳಿಗೆ ಹೋಗಿ ನೋಡಬೇಕಾಗುತ್ತದೆ ಈಗ ಎಷ್ಟು ಪ್ರಮಾಣದಲ್ಲಿ ಮೂರನೇ ಹಂತದ ಮೂಲಕ ನೀವು ನೀರನ್ನು ಕೊಡುತ್ತಿದ್ದೀರಿ, ಅದನ್ನು ರೀಸೈಕ್ಲಿಂಗ್ ಮಾಡಬೇಕು. ನಿಮ್ಮ ಮೆಟ್ರೋ ಯೋಜನೆಯನ್ನು ಕೈಬಿಟ್ಟು ಈ ರೀಸೈಕಲ್ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಮಾನ್ಯ ಸಭಾಧ್ಯಕ್ಷರಿಗೆ ಗೊತ್ತಿದೆ ಬೇರೆ ದೇಶದಲ್ಲಿ ರೀಸೈಕ್ಲಿಂಗ್ ಮಾಡುತ್ತಾರೆ.

ಒಂದು ಸಾರಿ ಬಳಕೆಯಾದ ನೀರನ್ನು ಮತ್ತೆ ಶೋಧನೆ ಮಾಡಿ ಕುಡಿಯುವ ನೀರಿನ ಬಳಕೆಗೆ ಬಿಟ್ಟು ಮಿಕ್ಕ ಎಲ್ಲಾ ಕೆಲಸಕ್ಕೆ ರೀಸೈಕಲ್ಡ್ ವಾಟರನ್ನು ಉಪಯೋಗ ಮಾಡುತ್ತಾರೆ. ಇದನ್ನು ಮಾಡದೇ ಹೋದರೆ ಬೆಂಗಳೂರು ನಗರದ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯ ಇಲ್ಲ. ನನ್ನ ಒತ್ತಾಯ ಇಷ್ಟೆ ನಾನು ಹೇಳಿದೆ ಇದು ಒಂದು ಪ್ರಾಮಾಣಿಕವಾದ ದಾಖಲೆ ಎಂದು. ಒಂದು ತಾಲ್ಲೂಕಿನಲ್ಲಿ 120 ಜನಕ್ಕೆ 120 ದಿವಸ ಉದ್ಯೋಗ ಕೊಟ್ಟಂತಹ ಬರಗಾಲ ಕಾಮಗಾರಿ ಇದು. 175 ತಾಲ್ಲೂಕುಗಳಲ್ಲಿ ಎಲ್ಲಾ ಕೆಲಸಕ್ಕೆ 33 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂತಹ ಬರಗಾಲ. ಮಾನ್ಯ ಬಸವಲಿಂಗಪ್ಪನವರು ಅತ್ಯಂತ ಪ್ರಾಮಾಣಿಕವಾಗಿ ವರ್ಣನೆ ಮಾಡಿದರು. ಬರಗಾಲ ಬಂದಾಗ ಕಣ್ಣೀರು ಒರೆಸುವ ಜವಾಬ್ದಾರಿ ಸರ್ಕಾರದ್ದಲ್ಲ, ಕಣ್ಣೀರು ಒರೆಸುವ ಜವಾಬ್ದಾರಿ ಜನ ಪ್ರತಿನಿಧಿಗಳದ್ದು, ಅವರ ಸ್ವಂತ ಜವಾಬ್ದಾರಿ ಎಂದು. ಈ ಮೂಲಕ ಜನಗಳ ಕಣ್ಣೀರನ್ನು ಜನಗಳೇ ಒರೆಯಿಕೊಳ್ಳಬೇಕು. ಇಂತಹ ಚರ್ಚೆಗೆ ಮುಂದಿನ ವರ್ಷ ದಯಮಾಡಿ ಕಂದಾಯ ಮಂತ್ರಿಗಳು ಅವಕಾಶ ಮಾಡಿಕೊಡಬಾರದು.

ತಾವು ಮಂಡಿಸುವಂಥ ಮುಂದಿನ ಯೋಜನೆ ಏನು ಇದೆ, ಅವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು. ಇವೊತ್ತು ತಾವು ಬೆಂಗಳೂರು ನಗರದ ಬೆಳವಣಿಗೆಯನ್ನು ನಿಲ್ಲಿಸುತ್ತೇವೆ ಎಂಬ ಒಂದು ಆಶ್ವಾಸನೆಯನ್ನು ಕೊಟ್ಟರೆ ಸಾಕು, ಒಂದು ಸಂಪದ್‌ಭರಿತವಾದ ಕರ್ನಾಟಕವನ್ನು ಬೆಳೆಸುವ ಆಸೆಯನ್ನು ನಾವೆಲ್ಲರೂ ಇವೊತ್ತಿನಿಂದ ನೋಡ ಬಹುದು. ನಮಸ್ಕಾರ.

+ ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಬರಗಾಲ ಪರಿಸ್ಥಿತಿಯ ಬಗ್ಗೆ ಇವೊತ್ತಿನ ದಿವಸ ತಾವುಗಳು ಮಾತನಾಡಲು ನನಗೆ ಅವಕಾಶ ಕೊಟ್ಟಿರತಕ್ಕಂಥಾದ್ದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ. ಕುಡಿಯುವ ನೀರಿನ ಬಗ್ಗೆ ಬಹಳ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿರತಕ್ಕಂಥಾದ್ದು ಸರಕಾರದ ಆಧ್ಯ ಕರ್ತವ್ಯ. ಇದಕ್ಕಾಗಿ ನಮ್ಮೆಲ್ಲರ ಹೋರಾಟ ಕೂಗ ಮತ್ತು ಗದ್ದಲ. ಮಾನ್ಯ ಕಂದಾಯ ಸಚಿವರಂತೂ ಪ್ರತಿ ಜಿಲ್ಲೆಯಲ್ಲೂ ಪ್ರವಾಸ ಮಾಡಿ ಅಭಾವ ಪರಿಸ್ಥಿತಿಯ ಬಗ್ಗೆ ಪರಿಶೀಲನೆ ಮಾಡಿದರು. ನಮ್ಮ ಮೈಸೂರು ಜಿಲ್ಲೆಗೂ ಅವರು ಬಂದಿದ್ದರು. ನಾನು ಅವರನ್ನು ಬೇಟಿ ಮಾಡಿದ್ದೇನೆ. ನನ್ನ ಕ್ಷೇತ್ರ ಚಾಮರಾಜನಗರ ತಾಲ್ಲೂಕು ನಿರಂತರವಾಗಿ ಬರಕ್ಕೆ ತುತ್ತಾಗಿರತಕ್ಕಂಥ

ತಾಲ್ಲೂಕು ವರ್ಷದಲ್ಲಿ 11 ತಿಂಗಳು ನೀರಿನ ಬರ, ಒಣಗಿದ ಮರಗಿಡಗಳು ಬತ್ತಿದ ಕೆರೆಗಳು ನಮ್ಮ ತಾಲ್ಲೂಕಿನಲ್ಲಿ ಸಾಮಾನ್ಯ ದೃಶ್ಯವಾಗಿದೆ. ಕೆರೆಗಳಲ್ಲಿ ನೀರಿಲ್ಲದ ಕಾರಣ ಜನರಿಗೆ ನೀರಿನ ವಿಚಾರದಲ್ಲಿ ತುಂಬಾ ತೊಂದರೆ ಪಡುವಂತಾಗಿದೆ. ಈ ಒಂದು ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಮಾನ್ಯ ಕಂದಾಯ ಸಚಿವರಲ್ಲಿ ಬಹಳ ತೀವ್ರವಾಗಿ ನಾನು ಮನವಿಯನ್ನು ಸಲ್ಲಿಸಿರುತ್ತೇನೆ. ನಮ್ಮಲ್ಲಿ ಸುಮಾರು 120 ಹಳ್ಳಿಗಳು ಬರುತ್ತವೆ. ಪಕ್ಕದ ನಮ್ಮ ತಾಲ್ಲೂಕಿಗೆ ಸೇರಿದ ಸಂತೆಮಾರಹಳ್ಳಿ ಎರಡರಾ ಸೇರಿ ನಮ್ಮಲ್ಲಿ ಸುಮಾರು 1,800-1900 ಕೊಳವೆಬಾವಿಗಳು ಬರುತ್ತವೆ. ನಮ್ಮ ವಿಚಾರದಲ್ಲಿ ನಿಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. 600 ಕೊಳವೆಬಾವಿಗಳು ಕೆಟ್ಟು ನೀರು ಬಾರದೆ ಬಹಳ ದಿವಸಗಳಾಯಿತು. ಅದರ ಪರ್ಯಾಯವಾಗಿ ಮತ್ತೆ ಕೊಳವೆಬಾವಿಗಳನ್ನು ಕೊಡಬೇಕೆಂಬ ಬಗ್ಗೆ ಯಾರೂ ಯೋಚನೆಯನ್ನು ಮಾಡಿಲ್ಲ. ಜಿಲ್ಲಾಪರಿಷತ್‌ನವರಾಗಲಿ, ಬೇರೆ ಯಾವುದೇ ಸಂಸ್ಥೆಗಳೇ ಆಗಲಿ ಇದರ ಬಗ್ಗೆ ಯಾವುದೇ ಚಿಂತನೆಯನ್ನು ಮಾಡಿಲ್ಲ. ಇವೊತ್ತು ಅಲ್ಲಿ ಅತ್ಯಂತ ಭೀಕರ ಪರಿಸ್ಥಿತಿಯು ಉಂಟಾಗಿದೆ. ಕುಡಿಯುವ ನೀರಿನ ಪರಿಸ್ಥಿತಿಯು ಕೈಮೀರಿ ಹೋಗಿದೆ. ಅಲ್ಲಿದ್ದ ಕೆರೆಗಳೆಲ್ಲವೂ ತೀವ್ರವಾಗಿ ಒಣಗಿ ಹೋಗಿವೆ. ಒಂದು ಕೆರೆಯಲ್ಲೂ ನೀರಿಲ್ಲ. ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಾದರೆ, ಸುವರ್ಣ ಜಲಾಶಯದಲ್ಲಿ ಸ್ವಲ್ಪ ನೀರು ಇದೆ. ಅದು ಚಾಮರಾಜನಗರ ಪಟ್ಟಣ ಪ್ರದೇಶಕ್ಕೆ ಒದಗಿಸ ಬಹುದಾದಂಥಾದ್ದು. ಆ ನೀರು ಕೂಡ ಒಣಗಿ ಹೋದರೆ ಅಲ್ಲಿ ಇನ್ನೂ ತೀವ್ರವಾದ ಭೀಕರ ಪರಿಸ್ಥಿತಿಯು ಒದಗಿ ಬರುವಂಥದ್ದು ಇದೆ. ಈ ವಿಚಾರದಲ್ಲಿ ಮಾನ್ಯ ಕಂದಾಯ ಸಚಿವರು ತೀವ್ರವಾಗಿ ಯೋಚನೆ ಮಾಡಬೇಕು. ಕನಿಷ್ಠ ಪಕ್ಷ ಈ ಒಂದು ತಾಲ್ಲೂಕಿಗೆ ವಿಶೇಷ ಗಮನವನ್ನು ಹರಿಸಿ ಕಡಿಮೆ ಅಂದರೆ 300 ಕೊಳವೆಬಾವಿಗಳನ್ನು ತೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ನನ್ನ ಅತ್ಯಂತ ಕಳಕಳಿಯ ಮನವಿಯಾಗಿದೆ.

ಮಾನ್ಯರು ಮೈಸೂರಿಗೆ ಬಂದಾಗ ಹೇಳಿದ್ದಾರೆ ಇವೊತ್ತು ಎರಡು ದೃಷ್ಟಿಯಿಂದ ನಾವು ಕುಡಿಯುವ ನೀರಿನ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅದನ್ನು ಎಲ್ಲಿಂದ ತರಬೇಕೆಂದು ಯೋಚನೆ ಮಾಡಬೇಕಾಗುತ್ತದೆ. ಒಂದು ವಿಷಯವಂತೂ ನಿಜ. 300-400 ಅಡಿ ಆಳ ಬಾವಿಗಳನ್ನು ತೆಗೆದರೂ ಇವೊತ್ತು ನೀರು ಸಿಗುತ್ತಾ ಇಲ್ಲ. ಬಹುಶಃ ನೀರು ತೀರಾ ಕೆಳಹಂತಕ್ಕೆ ಇಳಿದಿರುವಂತೆ ಕಾಣುತ್ತದೆ. ಇನ್ನು 5-10 ವರ್ಷಗಳಲ್ಲಿ ಭೂಮಿಯಲ್ಲಿನ ನೀರು ಒಣಗತಕ್ಕಂಥ ಪರಿಸ್ಥಿತಿಯೂ ಕೂಡ ಬರಬಹುದು. ಈ ಬಗ್ಗೆ ಎಲ್ಲರೂ ಚಿಂತನೆ ಮಾಡಬೇಕಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸಕಾಲದಲ್ಲಿ ಮತ್ತು ಅನೇಕ ವೇಳೆಯಲ್ಲಿ ಮಳೆ ಬೀಳದೆ ಇರುವುದು. ಇದರಿಂದಾಗಿ ನಿಸರ್ಗದ ಮೇಲೆ ಪರಿಣಾಮವಾಗಿರಬಹುದು. ಇದರ ಬಗ್ಗೆ ಗಮನ-ಹರಿಸಿ ಸೂಕ್ತ ಕ್ರಮಗಳನ್ನು ಈಗಲೇ ತೆಗೆದುಕೊಳ್ಳಬೇಕು. ಅರಣ್ಯವಿಲ್ಲದೆ ಮಳೆ ಇಲ್ಲ ಎಂಬುದನ್ನು ನಾವೆಲ್ಲರೂ ಬಲ್ಲೆವು. ಅರಣ್ಯ ಎಲ್ಲಿ ನಾಶವಾಗುತ್ತದೆ ಅಲ್ಲಿ ಖಂಡಿತ ಮಳೆ ಬರುವುದಿಲ್ಲ. ಇದರ ಬಗ್ಗೆ ನಾವು ಇನ್ನೂ ಯಥೇಚ್ಛವಾಗಿ ಗಮನಹರಿಸಿಲ್ಲ. ಇವೊತ್ತ ಕಾವೇರಿ ನದಿ ಕೊಡಗಿನಲ್ಲಿ ಹುಟ್ಟುವಾಗ ಎಷ್ಟು ನೀರನ್ನು ಹರಿಯ ಬಿಡುತ್ತಿತ್ತು ಮತ್ತು ಈಗ ಯಾವ ಪ್ರಮಾಣದಲ್ಲಿ ನೀರನ್ನು ಹರಿಯ ಬಿಡುತ್ತದೆ ಎಂಬುದನ್ನು ನೋಡಿದರೆ ನಮಗೆಲ್ಲರಿಗೂ ಈ ನಿಸರ್ಗದ ವಿಚಾರ ತಿಳಿಯ ಬರುತ್ತದೆ. 15 ವರ್ಷಗಳ ಹಿಂದೆ ಹರಿಯುತ್ತಿದ್ದ ನೀರಿನ ಪ್ರಮಾಣಕ್ಕೂ ಈ ಹರಿಯುತ್ತಿರುವ ನೀರಿನ ಪ್ರಮಾಣಕ್ಕೂ ಬಹಳಷ್ಟು ವ್ಯತ್ಯಾಸವನ್ನು ನಾವೆಲ್ಲರೂ ಕಾಣುತ್ತಿದ್ದೇವೆ. [illegible] ಮಾಡಿದಾಗ ಸುಮಾರು ಶೇಕಡಾ 60 ರಷ್ಟು ಭಾಗದ [illegible] ಇದಕ್ಕೆಲ್ಲಾ ನಿಸರ್ಗದ ಅಸಮತೋಲನವೂ ಕಾರಣವಾಗಿದೆ ಎಂಬುದನ್ನು [illegible] ಇದರ ಬಗ್ಗೆ ನಾವೆಲ್ಲರೂ ವಿಚಾರ ಮಾಡಬೇಕಾಗಿದೆ ಒಂದು [illegible]

ಅರಣ್ಯಪ್ರದೇಶವನ್ನು ನಾವುಗಳು ನಾಶ ಮಾಡ ಹೊರಟಿದ್ದೇವೆ. ಮೊದಲು ಇಂಥ ನಕ್ಷತ್ರಕ್ಕೆ ಬೀಳಬೇಕೆಂದು ಲೆಕ್ಕ ಹಾಕಿ ಇಟ್ಟರೆ ಅದೇ ನಕ್ಷತ್ರಕ್ಕೆ ಮಳೆ ಬೀಳುತ್ತಾ ಇತ್ತು. ಆದರೆ ಇವೊತ್ತು ಆ ಪರಿಸ್ಥಿತಿಯನ್ನು ನಾವು ಕಾಣುವಂತಿಲ್ಲ.

ಇವೊತ್ತು ನಮಲ್ಲಿ ಈಗಾಗಲೇ ಮಳೆ ಪ್ರಾರಂಭವಾಗಬೇಕಾಗಿತ್ತು. ಆದರೆ ಇನ್ನೂ ಆಗಿಲ್ಲ. ಒಟ್ಟಿನಲ್ಲಿ ಬರದ ಪರಿಸ್ಥಿತಿಯು ಗಂಭೀರವಾಗಿದೆ. ಅದುದರಿಂದ ಈ ಬಗ್ಗೆ ಪರಿಣಾಮಕಾರಿಯಾಗಿ ಎಲ್ಲಾ ಕೆಲಸಗಳನ್ನು ನಿಲ್ಲಿಸಿಯಾದರೂ ಈ ಬಗ್ಗೆ ಪೂರ್ಣ ಗಮನಪರಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಹೆಚ್ಚಿನ ಅದ್ಯತೆಯನ್ನು ಕೊಡಬೇಕಾದ ಅವಶ್ಯಕತೆ ಇದೆ. ಇನ್ನು ಬೆಂಗಳೂರು ನಗರದ ಬಗ್ಗೆ ಮಾನ್ಯ ನಂಜುಂಡಸ್ವಾಮಿಯವರು ಹೇಳಿವರು. ಬೆಂಗಳೂರು ನಗರವನ್ನು ಇನ್ನು ಮುಂದೆ ಬೆಳೆಯುವುದಕ್ಕೆ ಬಿಡುವುದು ಒಳಿತಲ್ಲ ಎಂದು ಹೇಳಿದರು. ಆದರೆ ಈಗಾಗಲೇ ಮಿತಮಿರಿ ಬೆಳೆದು ಬಿಟ್ಟಿದೆ. ಬೆಂಗಳೂರಿನ ಜನಸಂಖ್ಯೆ ಇವೊತ್ತು 45 ಲಕ್ಷಕ್ಕೆ ಹೋಗಿದೆ. ಸುಮಾರು 2000 ಇಸವಿಯೊಳಗೆ ಅದು 55 ಲಕ್ಷಕ್ಕೆ ಹೋಗಬಹುದು. ಏನಿದ್ದರೂ ನಾವು ಜನರಿಗೆ ಕುಡಿಯುವ ನೀರನ್ನು ಕೊಡಲೇ ಬೇಕಾಗುತ್ತವೆ. ಅದಕ್ಕೆ ನಾವು ಅಧ್ಯತೆಯನ್ನು ನೀಡ ಬೇಕಾಗುತ್ತದೆ.

ಇವೊತ್ತು ಬೆಂಗಳೂರು ನಗರದಲ್ಲಿ ಇತಿಹಾಸದಲ್ಲಿಯೇ ಇರಲಿಲ್ಲವಾದಂಥ ಪರಿಸ್ಥಿತಿಯು ಇದೆ. ಈಗ 5 ದಿನಗಳಿಗೊಮ್ಮೆ ನೀರು ಕೊಡುತ್ತೇವೆ ಎನ್ನತಕ್ಕಂಥ ಘೋಷಣೆಯನ್ನು ಮಾಡುತ್ತಿದ್ದಾರೆ. ಈ ವಿಚಾರವನ್ನು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ 3ನೇ ಹಾಗೂ 4ನೇ ಹಂತದ ಯೋಜನೆಯನ್ನು ಯಾವರೀತಿಯಲ್ಲಿ ಮಾಡಬೇಕೆಂದು ಬಗ್ಗೆ ಯೋಚನೆ ಮಾಡಿ ಅದನ್ನು ಮುಗಿಸಬೇಕಾದ ಅತ್ಯಗತ್ಯತೆಯು ಇದೆ. ಮತ್ತು ಎಲ್ಲೆಲ್ಲಿ ನದಿಗಳು ಹರಿಯುತ್ತವೆ ಅದರ ಪಕ್ಕದಲ್ಲಿರತಕ್ಕಂಥ ಹಳ್ಳಿಗಳಿಗೆ ಪಟ್ಟಣಗಳಿಗೆ ನದಿಯಿಂದ ಧಾರಾಳವಾಗಿ ನೀರನ್ನು ಒದಗಿಸತಕ್ಕಂಥ ಹೊಸ ಯೋಜನೆಯನ್ನು ಮಾಡಿ. ಯಾವುದೇ ಯೋಜನೆಗಳು ಎಂದಾಕ್ಷಣ ಹಣ ಬೇಕು ಎಂದು ಹೇಳುತ್ತಾರೆ. ಹಣದ ಬಗ್ಗೆ ಸೂಕ್ತ ವಿಚಾರ ಮಾಡಿ ಈ ಯೋಜನಗಳನ್ನು ಮುಗಿಸಲು ಗಾಢವಾದ ಚಿಂತನೆಗಳನ್ನು ಮಾಡಬೇಕೆಂದು ಹೇಳ ಬಯಸುತ್ತೇನೆ. ಕುಡಿಯುವ ನೀರಿನ ಬಗ್ಗೆ ಪರಿಣಾಮಕಾರಿಯಾದ ಕೆಲಸವನ್ನು ಮಾಡಬೇಕಾದುದು ಸರಕಾರದ ಕರ್ತವ್ಯವಾಗಿದೆ. ಇನ್ನು ಅನೇಕ ತಾಲ್ಲೂಕುಗಳಲ್ಲಿ ಗಂಜಿ ಕೇಂದ್ರವನ್ನು ತೆರೆಯಬೇಕಂಬ ಬಗ್ಗೆ ನಾನು ಅನೇಕ ಸಾರಿ ಕೇಳಿಕೊಂಡಿದ್ದೇನೆ.

ಯಾವ ತಾಲ್ಲೂಕಿನಲ್ಲೂ ಇದನ್ನು ತೆರೆದ ಬಗ್ಗೆ ನನಗೆ ತಿಳಿದು ಬಂದಿಲ್ಲ. ಈ ಬಗ್ಗೆ ತಾವುಗಳು ಯೋಚನೆ ಮಾಡಬೇಕು.

ಹಿಂದೆ ಇದ್ದಂಥ ಸರಕಾರದವರು ಸುಮಾರು 17 ಪಟ್ಟಣಗಳಿಗೆ ಕುಡಿಯುವ ನೀರಿನ ಬಗ್ಗೆ ಯೋಜನೆಯನ್ನು ಮಾಡಿದ್ದರು. ಅದು ಒಟ್ಟು 90 ಕೋಟಿ ರೂಪಾಯಿಗಳ ಯೋಜನೆಯಾಗಿತ್ತು. ಈ ಹಣವನ್ನು ವಿಶ್ವಬ್ಯಾಂಕ್, ಜೀವವಿಮೆ ಮತ್ತು ಪುರಸಭೆಗಳಿಂದ ತೆಗೆದುಕೊಳ್ಳುವುದೆಂದು ಯೋಜನೆ ಮಾಡಿದ್ದರು. ಈವೊತ್ತು ಅ ಯೋಜನೆಗಳು ಎಲ್ಲಿ ಹೋಗಿದೆ ಎಂದು ತಿಳಿಯುತ್ತಾ ಇಲ್ಲ. ಆ ಬಗ್ಗೆ ಚಿಂತನೆ ಮಾಡಬೇಕು.

ಇನ್ನು ಅಗಸ್ಟ್ ತಿಂಗಳಲ್ಲಿ ಕಾವೇರಿ ಯೋಜನೆಯನ್ನು ಹಿಂದಿನ ಮುಖ್ಯಮಂತ್ರಿಗಳು ಇದ್ದಾಗ ಚಾಮರಾಜನಗರದಲ್ಲಿ ಶಂಕುಸ್ಥಾಪನೆ ಮಾಡಿದರು. ಆದರೆ ಅಲ್ಲಿಂದ ಇಲ್ಲಿಯವರೆಗೂ ಕೇವಲ ನೀರನ್ನು ಶೇಖರಿಸುವ ಎರಡು ದೊಡ್ಡ ಬರುಡೆಗಳನ್ನು ಕಟ್ಟಿದ್ದನ್ನು ಬಿಟ್ಟರೆ ಯಾವುದೇ ಬೇರೆ ಕೆಲಸವನ್ನು ಮಾಡಿಸಿಲ್ಲ. ಈ ರೀತಿಯಾದರೆ ನಾವು ಕಾಲಮಿತಿ ಹಾಕಿಕೊಂಡು ಕೆಲಸ ಮಾಡುವುದಕ್ಕೆ ಆಗುತ್ತದೆಯೇ? ಈ ಪಟ್ಟಣಕ್ಕೆ ಹಿಂದೆ ಮೂರು ವರ್ಷಗಳಲ್ಲಿ ನೀರು ಕೊಡುತ್ತೇವೆ ಎಂದು ಹೇಳಿದ್ದರೂ ಅದು

ಸಾಧ್ಯವಾಗಿದೆಯೇ? ಹಾಗೆ ಮಾಡುವುದರಿಂದ ಯೋಜನೆಯ ವೆಚ್ಚವೂ ಒಂದಕ್ಕೆ ಎರಡರಷ್ಟು ಆಗುತ್ತದೆ. ಆದುದರಿಂದ ಸರಕಾರದವರು ಈ ಬಗ್ಗೆ ತೀವ್ರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಎಲ್ಲೆಲ್ಲಿ ಕೆರೆಗಳು ಇವೆ ಅವುಗಳನ್ನು ಕಾಮಗಾರಿ ಕೆಲಸವನ್ನು ಮಾಡುವಾಗ ಕೆರೆಗಳಿರತಕ್ಕಂಥ ಹೂಳನ್ನು ಎತ್ತುವ ಕೆಲಸವನ್ನು ಹೆಚ್ಚುಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಆ ಮೂಲಕ ಮಳೆ ಬಂದಾಗ ಕೆರೆಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ನೀರು ತುಂಬುವುದಕ್ಕೆ ಅನುಕೂಲವಾಗುತ್ತದೆ. ಈ ಕೆಲಸದ ಬಗ್ಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕುಡಿಯುವ ನೀರಿನ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QUMURUL ISLAM: (GULBARGA):

MR. SPEAKER Sir, this is a very serious issue that this House is discussing regarding scarcity of drinking water in the State.

ಶ್ರೀ ಡಿ.ಬಿ. ಚಂದ್ರೇಗೌಡ : ಮೊದಲ ದಿವಸವೇ ಏತಕ್ಕೆ ನಮಗೆ ಈ ಶಿಕ್ಷೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು): ಮಾನ್ಯ ಸದಸ್ಯರುಗಳು ಯಾರ್‍ಯಾರು ಮಾತನಾಡುವವರು ಇದ್ದಾರೋ ಅವರು ಮಾತನಾಡಲಿ. ನಾಳೆ ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ: ದಯವಿಟ್ಟು ನಾಳೆಗೆ ಮುಂದೂಡಿ.

MR. SPEAKER: Sri Qumurul Islam.

SRI QUMURUL ISLAM : Mr. Speaker Sir, drinking water problem is a very serious issue, which this House is discussing and the Hon.Minister from the Hyderabad-Karnataka area has excluded the Gulbarga district from the list of Baragal. I know this time there was a plenty of rain.

MR. SPEAKER : They have excluded Gulbarga district from the list of Baragal: Isn't it?

SRI QUMURUL ISLAM : In the list if you see there is Bheema Scheme for Gulbarga. In every town of Gulbarga district schemes are going on and God only know as to when they will get water. When the Bheema scheme was started in 1988 it was said that by 1990 the people of Gulbarga will get the water. To-day it is 1991, Still Rs 4 to Rs. 5 crores worth of work is to be completed. The high-power committee of the Hyderabad-Karnataka area declared some of the water schemes in almost every town and it was declared in the last budget also.

So, people were happy only by the announcement. Very seriously I tell you, now it is the months of February end and March-not only in rural areas, but also in the heart of the Gulbarga city if you go people are there in the queue in front of the borewells. For your information, Hon. Speaker Sir, in this city which is having huge expansion- the old city and now the new city

has come in the form of expansion, there is no regular water supply either by the borewells or by the Bheema or the Bhojgar or the Bennethora schemes. People are going up to a minimum of {1 over 2}. or 2 kms. from the heart of the city to a borewell where they are getting water. Very honestly, in this House through you Speaker Sir, I am submitting to the Hon. Minister and if the time permits if the Hon. Minister agrees, let us go physically and see the distance. People think that in Gulbarga the Bheema scheme has come. The Hon.ble Minister for Home, who was in charge of the district, said in the ZP that the upspent money of Rs. 93 lakhs should be spent on the borewells only in the district. He did a very good thing. When I see the list, I am surprised that no single borewell is sanctioned to the Gulbarga city as if the people in Gulbarga are having borewells with plenty of water. It was decided that unspent money of Rs. 93 lakhs should be spent. I have read it as I was not in India. From 2nd January I was in Saudi Arabia and I came here on 4th Februrary.

MR. SPEAKER: We were really concerned about your safety and Rs. 2.2 crores from the budget and another Rs. 4 crores has been kept in the budget, I think that the Bheema scheme will be completed and Yadgir scheme and other schemes are going to be completed. The other aspect which I wanted to tell is that for the first time in Gulbarga district there were heavy rains and there were flood damages. At that time Sri Puttaswamy Gowda was the Minister for Public Works. He has gone and surveyed the Gulbarga district by helicopter. The helicopter flew from Gulbarga city. But, he has not visited the Gulbarga City, as if the damages are only in the district. I am representing more particularly the city of Gulbarga. Every scheme goes to the Corporation. Through the Corporation all civic amenities, drinking water and everything will come. After my pursuance only Rs. 15 lakhs were given to the Corporation that 3 specific small roads in the city have to be taken up. I want to kindly submit as to whether this meagre amount is sufficient, whereas the Corporation Commissioner has also submitted a list of Rs. 2.5 crores in the City for the flood damages. About 2 years back also there were damages and nothing was given in that. There was a lot of damages and only Rs. 15 lakhs were released when Sri Puttaswamy Gowda was the Minister. I want the Hon. Minister to review this and give a serious concern for these two problems. If you go to some of the areas like

Mahboobnagar or other extensions, it is as if these extensions are cut off. In the night if a woman gets pain for delivery there will not be any vehicle. Even the people say that they cannot reach from such a distance and the mothers and sisters cannot go to the hospital to give birth to child. Such a situation is there I don't want very big tar roads and all that. I want that the links which have been cut off, should be connected. At least some improvement will be there. At least something should be there, that they should more auto rickshaw or in cycle rickshaws. We are in the end of the 20th century. But, the backwardness in Hyderabad-Karnataka area is that two persons are sitting in one cycle rickhshaw and the other man is pulling it. This seriousness is there. This is the backwardness. We want that the Hon. Minister who is coming from this area should know the serious problems that we are discussing. At least care should be taken and steps should be taken to see that at least 100 borewells, which is the minimum should be sanctioned till the Bheema scheme comes. The most unfortunate thing is that the Urban Development department is in charge of water supply. They are collecting Rs. 58/- and they are forcing the people to get a meter fixed by paying Rs. 500/-, when they are not at all giving water. If you go to the main roads about 6'to 10' pits will be there to get water. There is a pressure from the department that Rs. 58/- should be given and this meter has to be fixed by paying Rs. 500/-. Now people are saying that they are happy and they don't mind even giving Rs. 60/-, but let them give water. No doubt that issue was there. Rs. 15.60 was the earlier rate. It was decided from the court. I don't want to go into the rates and all that. Honestly, my submission through this House through Hon. Speaker is that till the Bheema scheme is commissioned, and people get regular water supply, the collection of Rs. 500/- and fixing up of meters and giving Rs. 58/- as water charges should be kept in abeyance and only Rs. 15.60 has to be collected from the people till 1992, as it was assured that the Bheema water will come to all. In this situation more particularly from the months of March, April and May where the highest temperature will be there

in the district, there will not be water through the pipe-lines and if this practice of collecting ~~money and~~ forcing the ~~people~~ to get the meter fixed is there, definitely the people will get the agitation mood and they have got full right to do it. So, I just wanted to request the Hon.Minister, through you Sir, that the collection has to be kept in abeyance. With these few words I will conclude my speech. Thank you very much.

ಅಧ್ಯಕ್ಷರು: ಈಗ ಮಾನ್ಯ ಸಿಂಧ್ಯ ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅಧ್ಯಕ್ಷರೆ, ಈಗಾಗಲೇ ಆರೂವರೆ ಗಂಟೆ ಆಗಿದೆ, ನಾನು ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು: ಈಗ ತಮ್ಮ ಭಾಷಣವನ್ನು ಪ್ರಾರಂಭ ಮಾಡಿ. ಅಧ್ಯಕ್ಷರೆ, ಎಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸನ್ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು: ಈಗ ಸಭೆಯ ಅಭಿಪ್ರಾಯ ಸಭೆ ಮುಂದುವರಿಯಬೇಕೆಂಬುದೋ ಅಥವಾ ನಾಳೆ ಸೇರಬೇಕೆಂಬುದೋ ತಿಳಿಸಬೇಕು.

(ಹಲವಾರು ಸದಸ್ಯರು ಈಗ ಸಭೆ ಮುಂದೂಡಿ ನಾಳೆ ಸೇರಬೇಕೆಂದು ಸೂಚಿಸಿದರು)

ಅಧ್ಯಕ್ಷರು: ಈಗ ಸಭೆಯನ್ನು ನಾಳೆ ಬೆಳಿಗ್ಗೆ 11-00 ಗಂಟೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 5-3-1991ನೇ ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿ ಎಂದು ಸೂಚಿಸುತ್ತದೆ)